

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ನವೆಂಬರ್ 28 ಸೋಮವಾರ 2022

ಸಂಪುಟ: 43 | ಸಂಚಿಕೆ: 221 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಬಲಾಢ್ಯ ವ್ಯಾಘ್ರನ ದಾಳಿಗೆ ಇತ್ತೀಚೆಗೆ ತಾಯಿ ಕಳೆದುಕೊಂಡ ತಬ್ಬಲಿ ಹುಲಿ ಮರಿ ಬಲಿ

● ಉರುಳಿಗೆ ಬಲಿಯಾದ ಹುಲಿಯ ಮೂರು ಮರಿಗಳಲ್ಲಿ ಗಂಡು ಮರಿ ಇನ್ನಿಲ್ಲ ● ಇನ್ನೆರಡು ಹುಲಿ ಮರಿಗಳ ರಕ್ಷಣೆಗಾಗಿ ಅರಣ್ಯ ಇಲಾಖೆ ಮತ್ತೆ ಕಾರ್ಯಾಚರಣೆ

ಮೈಸೂರು, ನ.27(ಎಂಟಿವೈ)– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಹೆಚ್.ಡಿ.ಕೋಟೆ ತಾಲೂಕು ವ್ಯಾಪ್ತಿಯ ತಾರಕ ಜಲಾಶಯ ಹಿನ್ನೀರಿನ ಹಳ್ಳದ ಬಳಿ ಬೇಟೆಗಾರರು ಹಾಕಿದ್ದ ಉರುಳಿಗೆ ಸಿಲುಕಿ ಮೃತಪಟ್ಟಿದ್ದ ಹುಲಿಯ ಮೂರು ಮರಿಗಳಲ್ಲಿ ಗಂಡು ಮರಿ, ಮತ್ತೊಂದು ಬಲಾಢ್ಯ ಹುಲಿ ದಾಳಿಗೆ ಬಲಿಯಾಗಿದೆ.

ಅಂತರಸಂತೆ ವಲಯದ ನಾಯಂಜಿ ಕಟ್ಟೆ ಬಳಿ ಒಂದು ದಶಕದಿಂದ ಪ್ರವಾಸಿಗರ ಕಣ್ಣಿಗೆ ನಿತ್ಯವೂ ಬೀಳುತ್ತಿದ್ದ ಹೆಣ್ಣು ಹುಲಿ 10 ತಿಂಗಳ ಹಿಂದೆಯಷ್ಟೇ ಮೂರು ಮರಿಗಳಿಗೆ ಜನ್ಮ ನೀಡಿತ್ತು. ಮರಿಗಳ ರಕ್ಷಣೆಗಾಗಿ ತಾರಕ ಹಳ್ಳದತ್ತ ವಲಸೆ ಹೋಗಿ ಕಾಡಂಚಿನ ಕೃಷಿ ಭೂಮಿ ಹಳ್ಳ, ಪೊದೆಗಳಲ್ಲಿ ಮರಿಗಳೊಂದಿಗೆ ನೆಲೆ ನಿಂತಿತ್ತು.

ತಾರಕ ಹಳ್ಳದ ಬಳಿ ಭಾನುವಾರ ಬೆಳಗ್ಗೆ ದೊರೆತ ಹುಲಿ ಮರಿ ಕಳೇಬರ ಉರುಳಿಗೆ ಸಿಲುಕಿ ಮೃತಪಟ್ಟ ಹುಲಿಯ ಮರಿಯದ್ದೇ ಎಂಬುದು ಪರಿಶೀಲನೆ ವೇಳೆ ದೃಢಪಟ್ಟಿದೆ. ತಾರಕ ಹಳ್ಳದ ಬಳಿ ಕೂಂಬಿಂಗ್ ಕಾರ್ಯಾಚರಣೆ ವೇಳೆ ಕ್ಯಾಮರಾ ಟ್ರಾಪ್‌ನಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲಿಸಿದ ನಂತರ ಬೇರೊಂದು ಹುಲಿ ದಾಳಿಗೆ ತುತ್ತಾಗಿರುವ ಗಂಡು ಮರಿ ನಾಯಂಜಿಕಟ್ಟೆಯ ಹುಲಿಯ ಮರಿ ಎಂಬುದು ಖಚಿತವಾಗಿದೆ.

ಆದರೆ, ನ.12ರಂದು ಉರುಳಿಗೆ ಬಲಿಯಾಗಿ, ಅದರ ದೇಹ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಈ 'ನಾಯಂಜಿಕಟ್ಟೆ ಫೀಮೆಲ್' ಮೂರು ಮರಿಗಳ ಆರೋಗ್ಯ ಸ್ಥಿತಿ ಬಗ್ಗೆ ಕಳವಳ ವ್ಯಕ್ತಪಡಿಸಿದ್ದ ಅರಣ್ಯ ಇಲಾಖೆ 30 ಕ್ಯಾಮರಾ ಅಳವಡಿಸಿ, ನಾಲ್ಕು ಸಾಕಾನೆಗಳೊಂದಿಗೆ ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಿತ್ತು. ನ.15ರಂದು ಕ್ಯಾಮರಾವೊಂದರಲ್ಲಿ ಹುಲಿ ಮರಿಗಳು ಜಿಂಕೆಯೊಂದನ್ನು ಬೇಟೆಯಾಡಿ ಭಕ್ಷಿಸುತ್ತಿರುವ ದೃಶ್ಯ ಸೆರೆಯಾಗಿತ್ತು. ಇದರಿಂದ ಹುಲಿ ಮರಿಗಳು ಬೇಟೆಯಾಡುವ ಸಾಮರ್ಥ್ಯ ಹೊಂದಿದ್ದು, ಸ್ವತಂತ್ರವಾಗಿ ಬದುಕುತ್ತವೆ.

3 ಮರಿಗಳಲ್ಲಿ ಗಂಡು ಮರಿ, ಬಲಾಢ್ಯ ಹುಲಿ ದಾಳಿಗೆ ಬಲಿಯಾಗಿರುವ ಹಿನ್ನೆಲೆಯಲ್ಲಿ ಇನ್ನೆರಡು ಮರಿಗಳ ಸ್ಥಿತಿಗತಿ ಬಗ್ಗೆ ಪರಿಶೀಲಿಸಲು ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಿ, ಉಳಿದ 2 ಮರಿಗಳ ಚಲನ-ವಲನ ಗಮನಿಸಲು ನಿರ್ಧರಿಸಲಾಗಿದೆ.

ಅವುಗಳನ್ನು ಸೆರೆ ಹಿಡಿಯುವುದು ಅನಗತ್ಯ ಎಂಬ ಅಭಿಪ್ರಾಯ ವ್ಯಕ್ತವಾಗಿತ್ತು. ಆದರೂ ಅರಣ್ಯ ಇಲಾಖೆ ಅವುಗಳ ಚಲನ–ವಲನವನ್ನು ಗಮನಿಸುವ ಕೆಲಸ ಮುಂದುವರೆಸಲು ನಿರ್ಧರಿಸಿತ್ತು.

ಆದರೆ ಹುಲಿಯೊಂದು, ಇತ್ತೀಚೆಗೆ ತಾಯಿ ಕಳೆದುಕೊಂಡು ತಬ್ಬಲಿಯಾಗಿದ್ದ ಮರಿಗಳಲ್ಲಿ ಗಂಡು ಮರಿಯ ಮೇಲೆ ದಾಳಿ ನಡೆಸಿದೆ. 10 ತಿಂಗಳ ಮರಿಯೂ ಪ್ರತಿರೋಧ ತೋರಿದೆ. ಆದರೆ, ಬಲಿಷ್ಠ ಹುಲಿಯ ದಾಳಿಯ ಭೀಕರತೆಗೆ ಹುಲಿ ಮರಿಯ ದೇಹದ ಬಹುಭಾಗ ▶ 8ನೇ ಪುಟಕ್ಕೆ



ಒಕ್ಕಲಿಗರ ಮೀಸಲಾತಿ ಹೆಚ್ಚಳಕ್ಕೆ ಜ.23ರ ಗಡುವು

● ಆದಿಚುಂಚನಗಿರಿ ಶ್ರೀಗಳ ನೇತೃತ್ವದಲ್ಲಿ ಒಕ್ಕಲಿಗ ಮುಖಂಡರ ಸಭೆ ● ಶೇ.16ರಷ್ಟಿರುವ ಜನಾಂಗ ಉಪ ಪಂಗಡ ಸೇರಿದರೆ ಅದು ಶೇ.21ರಷ್ಟಾಗುತ್ತದೆ; ಶೇ.12ರಿಂದ 15ರಷ್ಟು ಹೆಚ್ಚಳಕ್ಕೆ ಆಗ್ರಹ ● ಗಡುವಿನೊಳಗೆ ಬೇಡಿಕೆ ಈಡೇರಿದರೆ ಸಂಭ್ರಮೋತ್ಸವ; ತಪ್ಪಿದರೆ ಹೋರಾಟದ ಕಿಚ್ಚಿನ ಎಚ್ಚರಿಕೆ ● ನ.23ರಂದು ಮಾಜಿ ಪ್ರಧಾನಿ ದೇವೇಗೌಡ, ಮಾಜಿ ಸಿಎಂ ಎಸ್.ಎಂ.ಕೃಷ್ಣರಿಗೆ ಅಭಿನಂದನಾ ಸಮಾರಂಭ 'ಒಕ್ಕಲಿಗರ ಮಹಾ ಸಂಗಮ' ● ಸಚಿವ ಆರ್.ಅಶೋಕ್ ಮೂಲಕ ಸರ್ಕಾರಕ್ಕೆ ಮನವಿ

ಬೆಂಗಳೂರು,ನ.27–ಒಕ್ಕಲಿಗರ ಮೀಸಲಾತಿ ಪ್ರಮಾಣವನ್ನು ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಳ ಮಾಡುವಂತೆ ಹಕ್ಕೊತ್ತಾಯ ಮಾಡಿರುವ ಒಕ್ಕಲಿಗರ ಸಮುದಾಯವು, ರಾಜ್ಯ ಸರ್ಕಾರಕ್ಕೆ ಜ.23ರ ಗಡುವು ನೀಡಿದೆ.

ರಾಜ್ಯ ಒಕ್ಕಲಿಗರ ಸಂಘವು ಕುವೆಂಪು ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಒಕ್ಕಲಿಗರ ಮೀಸಲಾತಿ ಹೆಚ್ಚಳ ಹೋರಾಟದ ರೂಪುರೇಷೆ ಕುರಿತ ಒಕ್ಕಲಿಗರ ಸಮುದಾಯದ ಪ್ರಮುಖರ ಸಭೆಯಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ.ನಿರ್ಮಲಾನಂದನಾಥಸ್ವಾಮೀಜಿಯವರು, ಪಟ್ಟನಾಯಕನಹಳ್ಳಿ ಮಠದ ಡಾ.ಶ್ರೀ ನಂಜಾವಧೂತ ಸ್ವಾಮೀಜಿಯವರು, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿಯವರು, ವಿಜಯನಗರ ಶಾಖಾಮಠದ ಶ್ರೀ ಸೌಮ್ಯನಾಥಸ್ವಾಮೀಜಿ ಅವರ ದಿವ್ಯಸಾನ್ನಿಧ್ಯದಲ್ಲಿ ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾದ ಶಾಸಕ ಸಿ.ಎನ್.ಬಾಲಕೃಷ್ಣ, ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಹಕ್ಕೊತ್ತಾಯದ ಮನವಿ ಪತ್ರವನ್ನು ಕಂದಾಯ ಸಚಿವ ಆರ್.ಅಶೋಕ್ ಅವರ ಮೂಲಕ ಸರ್ಕಾರಕ್ಕೆ ಸಲ್ಲಿಸಿದರು. ಹಿಂದುಳಿದ ವರ್ಗಗಳ ಪ್ರವರ್ಗ 3ಎನಲ್ಲಿ ▶ 8ನೇ ಪುಟಕ್ಕೆ



ಒಕ್ಕಲಿಗರ ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಹಕ್ಕೊತ್ತಾಯದ ಮನವಿ ಪತ್ರವನ್ನು ಕಂದಾಯ ಸಚಿವ ಆರ್.ಅಶೋಕ್ ಅವರ ಮೂಲಕ ಸರ್ಕಾರಕ್ಕೆ ಸಲ್ಲಿಸಿದರು.

> "15–20 ದಿನದೊಳಗೆ ಸರ್ಕಾರ ಸೂಕ್ತ ತೀರ್ಮಾನ ಕೈಗೊಳ್ಳಬೇಕು. ಸರ್ಕಾರ ಆದಷ್ಟು ಬೇಗ ಮನವಿ ಪುರಸ್ಕರಿಸುವ ಆಶಾಭಾವನೆ ಇದೆ. ಇಲ್ಲದಿದ್ದರೆ ಮೀಸಲಾತಿ ಹೆಚ್ಚಳ ಮಾಡುವವರೆಗೂ ಹೋರಾಟ ನಡೆಸುವುದು ಅನಿವಾರ್ಯ. ಡಾ.ಶ್ರೀ.ಬಾಲಗಂಗಾಧರನಾಥ ಮಹಾಸ್ವಾಮೀಜಿಯವರು ಭೈರವೈಕ್ಯರಾಗಿ ಜನವರಿಗೆ ಹತ್ತು ವರ್ಷವಾಗಲಿದೆ. ಮುಂದಿನ 25 ವರ್ಷಗಳಲ್ಲಿ ಬೆಂಗಳೂರಿನ ಜನಸಂಖ್ಯೆ 4 ಕೋಟಿ ದಾಟುವ ಅಂದಾಜಿದ್ದು, ಭವಿಷ್ಯದಲ್ಲಿ ಸಮುದಾಯದವರು ಜಮೀನುಗಳನ್ನು ಕಳೆದುಕೊಂಡು ಭೀಕರವಾದ ಆಪತ್ತು ಎದುರಿಸಬೇಕಾಗಬಹುದು. **-ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಆದಿಚುಂಚನಗಿರಿ ಮಠ**

ನಂ.ಗೂಡು ರಸ್ತೆಯ ಪ್ರಯಾಣಿಕರ ತಂಗುದಾಣದ ಮೇಲಿನ ಎರಡು ಪುಟ್ಟ ಗುಂಬಜ್ ತೆರವು

ಬಿಜೆಪಿಯಲ್ಲೇ ಕಾವೇರಿದ್ದ ವಾತಾವರಣಕ್ಕೆ ತಣ್ಣೀರು!





ಮೈಸೂರಿನ ಊಟಿ ರಸ್ತೆಯ ಜೆಎಸ್ಎಸ್ ಕಾಲೇಜು ಬಳಿ ನಿರ್ಮಿಸಲಾಗಿದ್ದ ಪ್ರಯಾಣಿಕರ ತಂಗುದಾಣದ ಮೇಲೆ ಮೂರು ಗುಂಬಜ್‌ಗಳಿದ್ದವು (ಎಡಚಿತ್ರ). ಬಲಚಿತ್ರದಲ್ಲಿ ಎರಡು ಗುಂಬಜ್‌ಗಳನ್ನು ತೆರವು ಮಾಡಿರುವುದನ್ನು ಕಾಣಬಹುದು.

ಮೈಸೂರು, ನ.27(ಎಂಟಿವೈ)– ಮೈಸೂರು–ನಂಜನಗೂಡು ಮುಖ್ಯರಸ್ತೆಯ ಜೆಎಸ್ಎಸ್ ಕಾಲೇಜು ಬಳಿ ವಿವಾದಕ್ಕೀಡಾಗಿದ್ದ ಬಸ್ ಪ್ರಯಾಣಿಕರ ತಂಗುದಾಣದ ಎರಡು ಪುಟ್ಟ ಗುಂಬಜ್‌ಗಳನ್ನು ರಾತ್ರೋರಾತ್ರಿ ತೆರವುಗೊಳಿಸಲಾಗಿದೆ. ಇದರೊಂದಿಗೆ ಬಿಜೆಪಿಯಲ್ಲೇ ಉದ್ಭವಿಸಿದ್ದ ಕಾವೇರಿದ ವಾತಾವರಣ ತಣ್ಣಗಾಗಿದೆ.

ನೂತನವಾಗಿ ನಿರ್ಮಿಸಿದ್ದ ಪ್ರಯಾಣಿಕರ ತಂಗುದಾಣದ ಮೇಲೆ ಎರಡೂ ಬದಿ ಚಿಕ್ಕ ಹಾಗೂ ಮಧ್ಯೆ ದೊಡ್ಡ ಗುಂಬಜ್‌ವೊಂದನ್ನು ನಿರ್ಮಿಸಲಾಗಿತ್ತು. ಇದು ಅನ್ಯ ಧರ್ಮದ ಪ್ರತೀಕ ಎಂದು ಸಂಸದ ಪ್ರತಾಪ್ ಸಿಂಹ ಆಕ್ಷೇಪಿಸಿದ್ದರು. ಅಲ್ಲದೇ ಗುಂಬಜ್ ಅನ್ನು ತೆರವುಗೊಳಿಸದಿದ್ದರೆ, ಅದನ್ನು ಜೆಸಿಬಿ ಬಳಸಿ ತಾವೇ ತೆರವು ಮಾಡುವುದಾಗಿ ಎಚ್ಚರಿಕೆ ನೀಡಿದ್ದರು. ಇದರಿಂದ ಪ್ರಯಾಣಿಕರ ತಂಗುದಾಣ ವಿವಾದದ ಗೂಡಾಗಿತ್ತು. ಈ ಹಿನ್ನೆಲೆಯಲ್ಲಿ ಶಾಸಕ ಎಸ್.ಎ.ರಾಮದಾಸ್, ಹಿರಿಯರು ಹಾಗೂ ಸಲಹೆಗಾರರೊಂದಿಗೆ ಸಮಾಲೋಚಿಸಿ ತಂಗುದಾಣದ ಮೇಲೆ ಎರಡೂ ಬದಿಯಲ್ಲಿದ್ದ ಪುಟ್ಟ ಗುಂಬಜ್‌ಗಳನ್ನು ತೆರವುಗೊಳಿಸಿ ಮಧ್ಯೆ ಇರುವ ಗುಂಬಜ್ ಅನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳಲಾಗಿದೆ.

ಟ್ವೀಟ್ ಮಾಡಿ ಧನ್ಯವಾದ ಹೇಳಿದ ಪ್ರತಾಪ ಸಿಂಹ

> "ಮಧ್ಯದಲ್ಲೊಂದು ದೊಡ್ಡ ಗುಂಬಜ್. ಅಕ್ಕ–ಪಕ್ಕ ಎರಡು ಚಿಕ್ಕ ಗುಂಬಜ್ ಇದ್ದರೆ ಅದು ಮಸೀದೀನೇ. ಅದನ್ನು ತೆರವು ಮಾಡಿಸುತ್ತೇನೆ ಎಂದಿದ್ದೆ. ಅದರಂತೆ ನಡೆದುಕೊಂಡಿದ್ದೇನೆ. ಕಾಲಾವಕಾಶ ಕೇಳಿ ಮಾತಿನಂತೆ ನಡೆದುಕೊಂಡ ಮೈಸೂರು ಜಿಲ್ಲಾಧಿಕಾರಿಗಳಿಗೆ ಹಾಗೂ ವಾಸ್ತವ ಅರಿತು ಜನಾಭಿಪ್ರಾಯಕ್ಕೆ ತಲೆ ಬಾಗಿದ ಶಾಸಕ ಎಸ್.ಎ.ರಾಮದಾಸ್‌ಜೀ ಅವರಿಗೆ ಧನ್ಯವಾದಗಳು ಎಂದು ಸಂಸದ ಪ್ರತಾಪ್ ಸಿಂಹ ಟ್ವೀಟ್ ಮಾಡುವ ಮೂಲಕ ಗೋಪುರ ತೆರವಿಗೆ ಸಂಸದರು ಹರ್ಷ ವ್ಯಕ್ತಪಡಿಸಿದ್ದಾರೆ.



ಮನಸ್ಸಿಗೆ ನೋವಾಗಿದೆ: ಈ ಕುರಿತು ಶಾಸಕ ಎಸ್.ಎ.ರಾಮದಾಸ್ ಪತ್ರಿಕಾ ಹೇಳಿಕೆ ನೀಡಿದ್ದು, 30 ವರ್ಷದ ರಾಜಕೀಯ ಜೀವನದಲ್ಲಿ ಕೆ.ಆರ್.ಕ್ಷೇತ್ರದ ಅಭಿವೃದ್ಧಿಗೆ ನಾನು ಆದ್ಯತೆ ನೀಡಿದ್ದೇನೆ. ಪ್ರಧಾನಿ ನರೇಂದ್ರ ಮೋದಿಯವರ ▶ 8ನೇ ಪುಟಕ್ಕೆ

ವೋಟರ್ ಐಡಿ ಹಗರಣ

ನಕಲಿ ಐಡಿ ಪಡೆಯಲು ಎನ್‌ಜಿಒಗೆ ನೆರವಾದ ನಾಲ್ವರು ಆರ್‌ಒಗಳ ಬಂಧನ

ಬೆಂಗಳೂರು: ವೋಟರ್ ಐಡಿ ಪರಿಷ್ಕರಣೆಯಲ್ಲಿ ಅಕ್ರಮ ವ್ಯವಹಾರಕ್ಕೆ ಸಂಬಂಧಿಸಿದಂತೆ ಮತದಾರರ ಜಾಗೃತಿ ಕಾರ್ಯಕ್ರಮಗಳಲ್ಲಿ ತೊಡಗಿದ್ದ ಎನ್‌ಜಿಒ ಚಿಲುಮೆ ಟ್ರಸ್ಟ್‌ನ ಪ್ರತಿನಿಧಿಗಳಿಗೆ ನಕಲಿ ಗುರುತಿನ ಚೀಟಿ ನೀಡಿದ ಆರೋಪದ ಮೇಲೆ ಮೂವರು ಕಂದಾಯ ಅಧಿಕಾರಿಗಳು ಮತ್ತು ಒಬ್ಬ ಉಪ ಕಂದಾಯ ಅಧಿಕಾರಿ ಸೇರಿದಂತೆ ನಾಲ್ವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅಧಿಕಾರಿಗಳನ್ನು ಹಲಸೂರು ಗೇಟ್ ಪೊಲೀಸರು ಬಂಧಿಸಿದ್ದಾರೆ.

ಮತದಾರರ ನೋಂದಣಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದ ಶಿವಾಜಿನಗರದ ಕಂದಾಯಾಧಿಕಾರಿ ಸುಹೇಲ್ ಅಹಮದ್, ಮಹದೇವಪುರದ ಕಂದಾಯ ಅಧಿಕಾರಿ ಕೆ.ಚಂದ್ರಶೇಖರ್, ಆರ್.ಆರ್.ನಗರದ ಕಂದಾಯಾಧಿಕಾರಿ ಮಹೇಶ್, ಚಿಕ್ಕಪೇಟೆ ಉಪಕಂದಾಯಾಧಿಕಾರಿ ವಿ.ಬಿ.ಭೀಮಾಶಂಕರ್ ಬಂಧಿತರು. ▶ 8ನೇ ಪುಟಕ್ಕೆ

ಹಳೆ ವಾಹನಗಳ ರದ್ದಿಗೆ ಹಾಕಿ, ಹೊಸ ವಾಹನ ಖರೀದಿಗೆ ರಿಯಾಯಿತಿ ಪಡೆಯಿರಿ

ಬೆಂಗಳೂರು: ಕರ್ನಾಟಕ ಸರ್ಕಾರವು ಮುಂದಿನ 15 ದಿನಗಳಲ್ಲಿ ವಾಹನಗಳನ್ನು ರದ್ದಿಗೆ ಹಾಕುವ ನೀತಿ (vehicle scrappage policy)ಯನ್ನು ತರಲಿದೆ. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ, 15 ವರ್ಷ ಪೂರೈಸಿದ ಎಲ್ಲಾ ಸರ್ಕಾರಿ ವಾಹನಗಳನ್ನು ರದ್ದಿಗೆ ಹಾಕಬೇಕೆಂದು ಘೋಷಿಸಿದ ಬಳಿಕ ರಾಜ್ಯ ಸರ್ಕಾರ ಈ ನಿಯಮ ಜಾರಿಗೆ ತಂದಿದೆ.



ಕೇಂದ್ರವು ಎಲ್ಲಾ ರಾಜ್ಯಗಳಿಗೆ ಕಳುಹಿಸಿದ ನೀತಿ ಮಾರ್ಗಸೂಚಿಗಳ ಪ್ರಕಾರ ರಾಜ್ಯ ಸರ್ಕಾರ ಈ ಕ್ರಮ ಕೈಗೊಂಡಿದೆ. ಕರ್ನಾಟಕದಲ್ಲಿ, ಹಳೆಯ ವಾಹನಗಳನ್ನು ಸ್ಕ್ರ್ಯಾಪ್ ಮಾಡುವವರಿಗೆ ಹೊಸ ವಾಹನವನ್ನು ಖರೀದಿಸುವ ಮಾಲೀಕರಿಗೆ ರಿಯಾಯಿತಿ ನೀಡುವ ಪ್ರಸ್ತಾಪ ಕೂಡ ಇದೆ. ಕಳೆದ ವರ್ಷ ಕರ್ನಾಟಕ ಸಾರಿಗೆ ಇಲಾಖೆ ಬಿಡುಗಡೆ ಮಾಡಿದ ಮಾಹಿತಿಯ ಪ್ರಕಾರ, ▶ 8ನೇ ಪುಟಕ್ಕೆ

ಆನೆ ಹಾವಳಿ ತಡೆಗೆ ಟಾಸ್ಕ್‌ಫೋರ್ಸ್ ರಚನೆ

ಅತೀ ಹೆಚ್ಚು ಆನೆ ಹೊಂದಿರುವ ಚಾ.ನಗರ ಜಿಲ್ಲೆಯನ್ನೇ ಕೈಬಿಟ್ಟ ಸರ್ಕಾರ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಾನವ ವನ್ಯಜೀವಿ ಸಂಘರ್ಷ ಹೆಚ್ಚಾಗುತ್ತಿದೆ. ಅದರಲ್ಲೂ ಆನೆ ಹಾವಳಿ ಕೂಡ ಹೆಚ್ಚಾಗಿದೆ. ಇದನ್ನ ಪರಿಹರಿಸಲು ಸರ್ಕಾರ ಅಧಿಕಾರಿಗಳ ನೇತೃತ್ವದಲ್ಲಿ ಟಾಸ್ಕ್‌ಫೋರ್ಸ್ ರಚನೆ ಮಾಡಿದೆ. ಆದರೆ ಅತೀ ಹೆಚ್ಚು ಆನೆಗಳಿರುವ ಚಾಮರಾಜನಗರ ಜಿಲ್ಲೆಯನ್ನೇ ಟಾಸ್ಕ್‌ಫೋರ್ಸ್‌ನಿಂದ ಕೈಬಿಟ್ಟಿದೆ.

ಚಾಮರಾಜನಗರ ಶೇ.50ರಷ್ಟು ಅರಣ್ಯದಿಂದಲೇ ಕೂಡಿರುವ ಜಿಲ್ಲೆ. ಅದರಲ್ಲೂ ಸುಮಾರು 2 ಸಾವಿರಕ್ಕೂ ಹೆಚ್ಚು ಆನೆಗಳು ಜಿಲ್ಲೆ ಕಾಡಿನಲ್ಲಿ ವಾಸಿಸುತ್ತಿವೆ. ಇದರಿಂದಾಗಿ ಜಿಲ್ಲೆಯಲ್ಲಿ ನಿರಂತರವಾಗಿ ವನ್ಯಜೀವಿ ಮಾನವ ಸಂಘರ್ಷ ಉಂಟಾಗುತ್ತಿದೆ. ಅದರಲ್ಲೂ ಆನೆಗಳ ಹಾವಳಿಯಿಂದ ಅನೇಕರು ಜೀವ ಕಳೆದುಕೊಂಡಿದ್ದಾರೆ. ಇದೇ ರೀತಿಯ ಸಮಸ್ಯೆ ಬೇರೆ ಜಿಲ್ಲೆಗಳಲ್ಲೂ ಇದೆ. ಇದನ್ನು ಮನಗಂಡ ಮುಖ್ಯಮಂತ್ರಿ ▶ 8ನೇ ಪುಟಕ್ಕೆ



ಚುನಾವಣಾ ಸಿದ್ಧತೆ: ಮೈಸೂರಿಗೆ ಬಂದ ಹೊಸ ವಿದ್ಯುನ್ಮಾನ ಮತಯಂತ್ರಗಳು

● ಹೈದರಾಬಾದ್‌ನಿಂದ 8 ಕಂಟೈನರ್‌ಗಳಲ್ಲಿ ಬಂದ ಇವಿಎಂ ಸುರಕ್ಷಿತ ದಾಸ್ತಾನು ● ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಇವಿಎಂ ಜೊತೆಗೆ ಕಂಟ್ರೋಲ್ ಯೂನಿಟ್ಸ್, ಬ್ಯಾಲೆಟ್ ಯೂನಿಟ್ಸ್ ಸಂಗ್ರಹಣೆ

ಮೈಸೂರು, ನ.27(ಎಸ್‌ಬಿಡಿ)– ಮುಂಬರುವ ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆಗಾಗಿ ಹೊಸ ವಿದ್ಯುನ್ಮಾನ ಮತಯಂತ್ರಗಳು(ಇವಿಎಂ) ಭಾನುವಾರ ರಾತ್ರಿ ಸುರಕ್ಷಿತವಾಗಿ ಮೈಸೂರು ತಲುಪಿವೆ. ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ನೂತನ ಡಿಸಿ ಕಚೇರಿ ಆವರಣದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ವಿದ್ಯುನ್ಮಾನ ಮತಯಂತ್ರಗಳ ಭದ್ರತಾ ಕೊಠಡಿ(ಗೋದಾಮು)ಯನ್ನು ಸಜ್ಜುಗೊಳಿಸುವ ಕಾರ್ಯ ಭರದಿಂದ ಸಾಗಿದ್ದು, ಸದ್ಯ ಹೈದರಾಬಾದ್‌ನಿಂದ ಹೊಸ ಮತಯಂತ್ರಗಳು ಹಾಗೂ ನಿಯಂತ್ರಣ ಘಟಕಗಳನ್ನು ತರಲಾಗಿದೆ.



ಭಾನುವಾರ ರಾತ್ರಿ ಮೈಸೂರು ತಲುಪಿದ ಮತಯಂತ್ರಗಳು.

ಮೈಸೂರು ಜಿಲ್ಲಾ ಇವಿಎಂ ಮತ್ತು ವಿವಿಪ್ಯಾಟ್ ನೋಡಲ್ ಅಧಿಕಾರಿಯೂ ಆದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ನೇತೃತ್ವದ 20 ಮಂದಿ ತಂಡ, ಹೈದರಾಬಾದ್‌ನ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್(ಇಸಿಐಎಲ್)ನಿಂದ ಹೊಚ್ಚ ಹೊಸ 5,635 ಬ್ಯಾಲೆಟ್ ಯೂನಿಟ್‌ಗಳು(ಇವಿಎಂ) ಮತ್ತು 3,958 ಕಂಟ್ರೋಲ್ ಯೂನಿಟ್‌ಗಳನ್ನು 8 ಕಂಟೈನರ್‌ಗಳಲ್ಲಿ ಮೈಸೂರಿಗೆ ತರಲಾಗಿದೆ. 10 ಮಂದಿ ಶಸ್ತ್ರಸಜ್ಜಿತ ಪೊಲೀಸ್ ಸಿಬ್ಬಂದಿ ಭದ್ರತೆಯೊಂದಿಗೆ ತರಲಾಗಿರುವ ಹೊಸ ಯಂತ್ರಗಳನ್ನು ನೂತನ ಗೋದಾಮಿನಲ್ಲಿಟ್ಟು, ಅಲ್ಲಿಯೂ ಬಿಗಿ ಭದ್ರತೆ ಕಲ್ಪಿಸಲಾಗಿದೆ.



ಹೈದರಾಬಾದ್‌ನ ಎಲೆಕ್ಟ್ರಾನಿಕ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್‌ನಲ್ಲಿ ಚುನಾವಣಾ ಸಂಬಂಧಿತ ವಿದ್ಯುನ್ಮಾನ ಯಂತ್ರಗಳನ್ನು ಮುಡಾ ಆಯುಕ್ತ ದಿನೇಶ್‌ಕುಮಾರ್ ನೇತೃತ್ವದ ತಂಡ ಪರಿಶೀಲಿಸಿತು.

ಇವಿಎಂ ಹಾಗೂ ವಿವಿ ಪ್ಯಾಟ್(VV-PAT) ನೋಡಲ್ ಅಧಿಕಾರಿಯಾದ ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ನೇತೃತ್ವದ ಅಧಿಕಾರಿಗಳ ತಂಡ ನ.25ರಂದು ಹೈದರಾಬಾದ್‌ಗೆ ತೆರಳಿತ್ತು. ಅಲ್ಲಿನ ಇಸಿಐಎಲ್‌ನಲ್ಲಿ ಮೈಸೂರಿನ ವಿಧಾನಸಭಾ ಕ್ಷೇತ್ರಗಳು ಹಾಗೂ ಲೋಕಸಭಾ ಕ್ಷೇತ್ರದ ಮತಗಟ್ಟೆಗಳಿಗೆ ನಿಯೋಜಿಸಿದ್ದ ಬ್ಯಾಲೆಟ್ ಯೂನಿಟ್‌ಗಳು ಹಾಗೂ ನಿಯಂತ್ರಣಾ ಘಟಕಗಳನ್ನು ಪರಿಶೀಲಿಸಿದ ಬಳಿಕ ಸೀಲ್ ಮಾಡಿದ ಯಂತ್ರಗಳನ್ನು ಪೊಲೀಸ್ ಭದ್ರತೆಯೊಂದಿಗೆ ಕಂಟೈನರ್‌ಗಳಲ್ಲಿ ಸುರಕ್ಷಿತವಾಗಿ ತರಲಾಗಿದೆ.

> "ವಿದ್ಯುನ್ಮಾನ ಮತಯಂತ್ರಗಳ ಗೋದಾಮು ಅತ್ಯಂತ ಸುರಕ್ಷಿತವಾಗಿದ್ದು, ಬ್ಯಾಲೆಟ್ ಯೂನಿಟ್ ಹಾಗೂ ಕಂಟ್ರೋಲ್ ಯೂನಿಟ್‌ಗಳನ್ನಿಡಲು ಎಲ್ಲಾ ರೀತಿಯ ವ್ಯವಸ್ಥೆ ಕಲ್ಪಿಸಲಾಗಿದೆ. ಮತ ಎಣಿಕೆ ಸಂದರ್ಭದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಈ ನೂತನ ವ್ಯವಸ್ಥೆ ಸಹಕಾರಿಯಾಗಿದೆ. ವಿಧಾನಸಭಾ ಕ್ಷೇತ್ರಗಳಿಗೆ ಅನುಗುಣವಾಗಿ ಇವಿಎಂ ಯಂತ್ರಗಳನ್ನು ದಾಸ್ತಾನು ಮಾಡಲು ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಹೈದರಾಬಾದ್‌ನಿಂದ ಹೊಸ ಎಲೆಕ್ಟ್ರಾನಿಕ್ ಯಂತ್ರಗಳನ್ನು ತರುವ ಬಗ್ಗೆ ಮೈಸೂರು ಭಾಗದ ಶಾಸಕರು ಹಾಗೂ ಸಂಸದರಿಗೆ ಮಾಹಿತಿ ನೀಡಲಾಗಿದೆ.
> **–ದಿನೇಶ್‌ಕುಮಾರ್, ಮುಡಾ ಆಯುಕ್ತ**

ಮೈಸೂರು ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಹೆಚ್.ಬಿ.ಸತೀಶ್ ಮಾತನಾಡಿ, ಈ ಹಿಂದೆ ಪ್ರತ್ಯೇಕ ವ್ಯವಸ್ಥೆ ಇಲ್ಲದ ಕಾರಣ ಲೋಕಸಭೆ, ವಿಧಾನಸಭೆ, ಪುರಸಭೆ, ಪಂಚಾಯ್ತಿ ಚುನಾವಣೆ ನಂತರ ಇವಿಎಂ ಮತ್ತಿತರ ಉಪಕರಣಗಳನ್ನು ಸಂಗ್ರಹಿಸಲು ಸಮಸ್ಯೆ ಉಂಟಾಗುತ್ತಿತ್ತು. ಇದಕ್ಕಾಗಿ ಕಾಲೇಜು ಇನ್ನಿತರ ಸರ್ಕಾರಿ ಕಟ್ಟಡಗಳಲ್ಲಿ ಸ್ಟ್ರಾಂಗ್ ರೂಮ್ ಸ್ಥಾಪಿಸುವ ಪರಿಸ್ಥಿತಿ ಇತ್ತು. ಸದ್ಯ ಪ್ರತ್ಯೇಕ ಗೋದಾಮು ವ್ಯವಸ್ಥೆಯಿಂದಾಗಿ ಮತ ಎಣಿಕೆ ಮುಗಿಯುವವರೆಗೂ ಎಲ್ಲಾ ಉಪಕರಣಗಳ ಸುರಕ್ಷತೆ ಸುಲಭವಾಗಲಿದೆ. ಸ್ಟ್ರಾಂಗ್ ರೂಮ್ ಸೌಲಭ್ಯ ಹೊಂದಿರುವ ಗೋದಾಮಿನಲ್ಲಿ ಸಿಸಿಟಿವಿ ಕ್ಯಾಮರಾಗಳು, ಅಗ್ನಿಶಾಮಕ ಇನ್ನಿತರ ತುರ್ತು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಗೊಂದಲ ನಿರ್ಮಾಣವಾಗದಂತೆ ಕ್ಷೇತ್ರವಾರು ಪ್ರತ್ಯೇಕ ಮತ ಎಣಿಕೆ ವಿಭಾಗಗಳನ್ನು ಸಜ್ಜುಗೊಳಿಸಲಾಗಿದೆ. ವಿದ್ಯುನ್ಮಾನ ಮತಯಂತ್ರಗಳ ಭದ್ರತಾ ಕೊಠಡಿಗೆ ಸಮರ್ಪಕ ರಸ್ತೆ ಇನ್ನಿತರ ಹೆಚ್ಚಿನ ಸೌಲಭ್ಯ ಕಲ್ಪಿಸಲಾಗುವುದು ಎಂದರು.

ನೂತನ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಸುಮಾರು 300 ಚದರ ಅಡಿ ಜಾಗದಲ್ಲಿ ವಿದ್ಯುನ್ಮಾನ ಮತಯಂತ್ರಗಳ ಭದ್ರತಾ ಕೊಠಡಿ ನಿರ್ಮಿಸಲಾಗಿದ್ದು, ಮುಂಬರುವ ಸಾರ್ವತ್ರಿಕ ಹಾಗೂ ಲೋಕಸಭಾ ಚುನಾವಣೆ ದೃಷ್ಟಿಯಿಂದ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. 5.10 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ.

ಮಹಿಳಾ ಷಟಲ್ ಬ್ಯಾಡ್ಮಿಂಟನ್‌ನಲ್ಲಿ ಎಂ.ಡಿ.ವಾರ್ಷಿಕಗೆ ಬಹುಮಾನ

ಮೈಸೂರು, ನ. 27– ಮಹಾಜನ ಸ್ನಾತಕೋತ್ತರ ಕೇಂದ್ರದ ಎಂ.ಎಸ್ಸಿ ರಸಾಯನಶಾಸ್ತ್ರ ವಿಭಾಗದ ವಿದ್ಯಾರ್ಥಿನಿ ಎಂ.ಡಿ. ವಾರ್ಷಿಕ ಷಟಲ್ ಬ್ಯಾಡ್ಮಿಂಟನ್ ಮಹಿಳಾ ವಿಭಾಗ



ದಲ್ಲಿ ಪ್ರಾದೇಶಿಕ ಮಟ್ಟದ ಮೈಸೂರು ವಿವಿ ಅಂತರ ಕಾಲೇಜು ಪಂದ್ಯಾವಳಿಯಲ್ಲಿ 2021–22ನೇ ಸಾಲಿನಲ್ಲಿ ಪ್ರಥಮ ಸ್ಥಾನ, ಮೈಸೂರು ವಿವಿ ಅಂತರ ಕಾಲೇಜು ಮಟ್ಟ ದಲ್ಲಿ ದ್ವಿತೀಯ ಸ್ಥಾನ ಮತ್ತು ಮೈಸೂರು ವೈದ್ಯಕೀಯ ಕಾಲೇಜಿನ ಆಶ್ರಯದಲ್ಲಿ ನಡೆದ ಸಂಸ್ಕೃತಿ –2022 ಕಾರ್ಯಕ್ರಮದ ಸಂದರ್ಭದಲ್ಲಿ ಹಮ್ಮಿಕೊಳ್ಳಲಾದ ಮೈಸೂರು ನಗರ ಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಆರ್.ಎ. ರೂಪ, ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾದ ಡಾ. ಸಿ.ಕೆ.ರೇಣುಕಾರ್ಯ, ದೈಹಿಕ ವಿಭಾಗದ ಮುಖ್ಯಸ್ಥ ಜಗದೀಶ್ ಅವರು ವಾರ್ಷಿಕ ಅವರನ್ನು ಅಭಿನಂದಿಸಿ, ಶುಭ ಕೋರಿದರು.

ಮದುವೆ ಮಾಡಿಕೊಳ್ಳುವುದಾಗಿ ನಂಬಿಸಿ ಉಪನ್ಯಾಸಕಿಗೆ 60 ಸಾವಿರ ವಂಚನೆ

ಮತ್ತಿಬ್ಬರು ಮಹಿಳೆಯರಿಗೂ ಪಂಗನಾಮ

ಮೈಸೂರು, ನ.27–ಮ್ಯಾಟ್ರಿಮೋನಿ ವೆಬ್‌ಸೈಟ್‌ನಲ್ಲಿ ಪರಿಚಯವಾದ ವಂಚಕ ಮದುವೆ ಮಾಡಿಕೊಳ್ಳುವುದಾಗಿ ತಿಳಿಸಿ ಉಪನ್ಯಾಸಕಿಯೊಬ್ಬರಿಗೆ ಆನ್‌ಲೈನ್ ಮೂಲಕ 60,150 ರೂ. ವಂಚನೆ ಮಾಡಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ವಿಜಯನಗರ 2ನೇ ಹಂತದ ನಿವಾಸಿಯಾಗಿರುವ ಉಪನ್ಯಾಸಕಿ ಕಾವ್ಯಾ ಗುರಿಕಾರ್(31) ವಂಚನೆಗೊಳಗಾದವರಾಗಿದ್ದು, ಇವರು ಮ್ಯಾಟ್ರಿಮೋನಿ ವೆಬ್‌ಸೈಟ್‌ನಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದರು. ಇವರನ್ನು ಸಂಪರ್ಕಿಸಿದ ವಂಚಕ ಮದುವೆಯಾಗುವುದಾಗಿ ತಿಳಿಸಿದ್ದಲ್ಲದೇ ಅನಾಥಾಶ್ರಮಕ್ಕೆ ದೇಣಿಗೆ, ಪೂಜೆ, ಹೋಮ–ಹವನ ಎಂದು ಹೇಳಿ 60,150 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾನೆ.

ಮತ್ತೊಂದು ಪ್ರಕರಣದಲ್ಲಿ ಜೆ.ಪಿ.ನಗರ 2ನೇ ಹಂತದ ಕೃಷಿನಾ ಸಿ.ನಂದಾ(41) ಎಂಬುವರ ಮೊಬೈಲ್‌ಗೆ 4 ಸಂಖ್ಯೆಗಳಿಂದ ಕರೆ ಮಾಡಿದ ವಂಚಕರು, ತಮ್ಮ ಕಂಪನಿಯಲ್ಲಿ ಹಣ ಹೂಡಿಕೆ ಮಾಡಿದರೆ, 30 ದಿನದಲ್ಲಿ ದುಪ್ಪಟ್ಟಾಗುತ್ತದೆ ಎಂದು ನಂಬಿಸಿ, 8.80 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾರೆ.

ಇನ್ನೊಂದು ಪ್ರಕರಣದಲ್ಲಿ ದಟ್ಟಗಳ್ಳಿ ನಿವಾಸಿ ಎ.ಅಶ್ವಿನಿ (37) ಎಂಬುವರಿಗೆ ಅಮೆಜಾನ್ ಪ್ರೊ ಎಂಬ ಕಂಪನಿಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ 2,92,200 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಈ ಮೂರೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ನಾಳೆ ಚಾಲನೆ

ಮೈಸೂರು, ನ.27–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕೆಎಎಸ್ ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ನವೆಂಬರ್ 29ರ ಮಂಗಳವಾರ ಬೆಳಗ್ಗೆ 11 ಗಂಟೆಗೆ ಕಾವೇರಿ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ಚಾಲನೆ ನೀಡಲಿದ್ದಾರೆ. ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸುವರು. ಕುಲಸಚಿವ ಪ್ರೊ. ಕೆ.ಎಲ್.ಎನ್.ಮೂರ್ತಿ ಉಪಸ್ಥಿತರಿರುವರು. ತರಬೇತಿಗೆ ಸೇರ ಬಯಸುವವರು 0821–2515944, 9964760090 ಮೂಲಕ ಸಂಪರ್ಕಿಸಿ, ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದೆಂದು ಪ್ರಕಟಣೆಯಲ್ಲಿ ಕೋರಲಾಗಿದೆ.



ಶನಿವಾರ ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಕಾರ್ಪೊರೇಟರ್ ಸಿ.ಮಹದೇಶ್ ಅವರಿಗೆ ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷ ಕೆ.ಆರ್.ಮಿಲ್ ಶಿವಣ್ಣ, ನಗರ ಪ್ರಧಾನ ಕಾರ್ಯದರ್ಶಿ ಮಧುಸೂದನ್, ಫಾಲ್ಕನ್ ಬೋರೇಗೌಡ, ಎಸ್.ಎನ್.ವಾಸು, ರಮ್ಯಾ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿ, ಶುಭ ಕೋರಿದರು.



ಲಯನ್ಸ್ ಕ್ಲಬ್ ಆಫ್ ಮೈಸೂರು ಚಂದನ ಹಾಗೂ ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಆಯೋಜಿಸಿದ್ದ ಆರೋಗ್ಯ ಮತ್ತು ಕಣ್ಣಿನ ತಪಾಸಣಾ ಶಿಬಿರವನ್ನು ಶಾಸಕ ಎಲ್.ನಾಗೇಂದ್ರ ಉದ್ಘಾಟಿಸಿದರು. ಲಯನ್ ಕೆ.ದೇವೇಗೌಡ, ವೇದಿಕೆ ಅಧ್ಯಕ್ಷ ಹೆಚ್.ಎಸ್.ಸುರೇಶ್‌ಬಾಬು, ರಂಗಕರ್ಮಿ ರಾಜಶೇಖರ ಕದಂಬ, ವೇದಿಕೆ ಕಾರ್ಯದರ್ಶಿ ಡಾ.ಕುಮಾರಸ್ವಾಮಿ, ಲಯನ್ ಚಿಕ್ಕಸಿದ್ದೇಗೌಡ ಇದ್ದರು.

ಸಿರಿಧಾನ್ಯಗಳ ಕೃಷಿಗೆ ಬೆಂಬಲ ನೀಡಲು ಆಗ್ರಹ

ಮೈಸೂರು,ನ.27(ಎಂಟಿವೈ)–ಹವಾಮಾನ ಬದಲಾವಣೆಯಿಂದ ಭತ್ತ, ಗೋಧಿಯಂತಹ ಏಕ ಬೆಳೆ ವ್ಯವಸಾಯ ಪದ್ಧತಿ ಕಣ್ಮರೆಯಾಗುವ ಸಾಧ್ಯತೆ ಹೆಚ್ಚಾಗಿದ್ದು, ಹೀಗಾಗಿ ಪೌಷ್ಟಿಕಾಂಶವುಳ್ಳ ಸಿರಿಧಾನ್ಯಗಳ ಕೃಷಿಗೆ ಸರ್ಕಾರ ಬೆಂಬಲ ನೀಡಬೇಕು ಎಂದು ಪೀಪಲ್ ಟ್ರೀ ಸಂಸ್ಥೆಯ ಸಂಯೋಜಕ ಚನ್ನನಾಯಕ ಮನವಿ ಮಾಡಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿರಿಧಾನ್ಯಗಳ ಕೃಷಿಗೆ ಪ್ರೋತ್ಸಾಹ ನೀಡುವಂತೆ ಈಗಾಗಲೇ ಪೀಪಲ್ ಟ್ರೀ ಸಂಸ್ಥೆ ಹಾಗೂ ಭಾರತೀಯ ಸಿರಿಧಾನ್ಯ ಸಹೋದರಿಯರ ಬಳಗ ಆಗ್ರಹಿಸಿದೆ. ಆ ಮೂಲಕ ಮಹಿಳೆಯರ ಸಬಲೀಕರಣ ಮಾಡಬಹುದಾಗಿದೆ ಎಂದರು. ಸಿರಿಧಾನ್ಯಗಳು ಎಲ್ಲ ರೀತಿಯ ವಾತಾವರಣಕ್ಕೆ ಹೊಂದಿಕೊಳ್ಳುತ್ತವೆ. ಹೀಗಾಗಿ ಭವಿಷ್ಯದಲ್ಲಿ ಉಂಟಾಗಬಹುದಾದ ಹವಾಮಾನ ಏರಿಳಿತದ ಸಮಸ್ಯೆಗಳಿಗೆ ಸಿರಿಧಾನ್ಯ ಕೃಷಿಯೇ ಉತ್ತರವಾಗಿದೆ. ಆದ್ದರಿಂದ ಪಡಿತರ ಅಂಗಡಿಗಳಲ್ಲಿ ಸಿರಿಧಾನ್ಯ ವಿತರಿಸಬೇಕು. ಅಂಗನವಾಡಿ ಸೇರಿದಂತೆ ಮಕ್ಕಳು ಹಾಗೂ ತಾಯಂದಿರಿಗೆ ಸಿರಿಧಾನ್ಯದಲ್ಲಿ ಮಾಡಿದ ತಿನಿಸು ನೀಡಬೇಕು. ಸಿರಿಧಾನ್ಯ ಬೆಳೆದು ಪ್ರಾಕೃತಿಕ ವೈವಿಧ್ಯತೆ ಕಾಪಾಡುತ್ತಿರುವ ರೈತರಿಗೆ ಕನಿಷ್ಠ 10 ಸಾವಿರ ಸಹಾಯಧನ ನೀಡಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಭಾರತೀಯ ಸಿರಿಧಾನ್ಯ ಸಹೋದರಿಯರ ಬಳಗದ ಸದಸ್ಯರಾದ ಸಚಿತ ಹೊಸಮಾಳ, ವಸಂತ ಶೀರನಹುಂಡಿ, ಜ್ಯೋತಿ ಸೋಗಳ್ಳಿ, ಚಿಕ್ಕಮ್ಮ ಇನ್ನಿತರರು ಉಪಸ್ಥಿತರಿದ್ದರು.

ಷಷ್ಠಿ ಪ್ರಯುಕ್ತ ವಿಶೇಷ ಹೋಮ, ಪೂಜೆ

ಮೈಸೂರು, ನ.27–ಮೈಸೂರು ನಗರದ ದಿವಾನ್ಸ್ ರಸ್ತೆಯಲ್ಲಿರುವ ಶ್ರೀ ಅಮೃತೇಶ್ವರ ಸ್ವಾಮಿ ದೇವಸ್ಥಾನದ ಶ್ರೀ ಸುಬ್ರಹ್ಮಣ್ಯಸ್ವಾಮಿ ಸನ್ನಿಧಿಯಲ್ಲಿ ಷಷ್ಠಿ ಪ್ರಯುಕ್ತ ನ.29ರಂದು ಬೆಳಗ್ಗೆ 10 ಗಂಟೆಗೆ ವಿಶೇಷ ಪೂಜೆ, ಶ್ರೀ ಸುಬ್ರಹ್ಮಣ್ಯ ಹೋಮ, ಕುಜದೋಷ, ನಾಗದೋಷ ನಿವಾರಣಾ ಹೋಮ, ಕಾಲಸರ್ಪ ಶಾಂತಿ ಹೋಮ ಹಾಗೂ ಸಾಯಂ ಕಾಲ ದೀಪಾರಾಧನೆ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಜಗದೀಶ ಶರ್ಮ ಅವರನ್ನು ಫೋನ್: 9916617795, 9535413360 ಮೂಲಕ ಸಂಪರ್ಕಿಸಬಹುದು.

ಕಾಂಗ್ರೆಸ್‌ಗೆ ನೇಮಕ



ಮೈಸೂರು, ನ.27– ಮೈಸೂರಿನ ಬಿ.ರಾಜಶೇಖರ್ ಅವರನ್ನು ಮೈಸೂರು ಜಿಲ್ಲಾ ಕಾಂಗ್ರೆಸ್‌ನ ಪರಿಶಿಷ್ಟ ಜಾತಿ ವಿಭಾಗದ ಉಪಾಧ್ಯಕ್ಷರಾಗಿ ನೇಮಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

'ಮಹಾದಾಸೋಹಿ ಶ್ರೀ ಗುರುಮಲ್ಲೇಶ್ವರರು' ಕೃತಿ ಬಿಡುಗಡೆ


ಲೋಕ ಕಲ್ಯಾಣಕ್ಕೆ ನಿಂತ ಮಹಾಸಂತ ಗುರುಮಲ್ಲೇಶ್ವರರು

ಹಿರಿಯ ವಿದ್ವಾಂಸ ಡಾ. ಗೊ.ರು. ಚನ್ನಬಸಪ್ಪ ಬಣ್ಣನೆ

ಮೈಸೂರು, ನ.27(ಪಿಎಂ)– ಭಿಕ್ಷೆ ಜೋಳಿಗೆ ಹಿಡಿದು ಲೋಕ ಕಲ್ಯಾಣಕ್ಕೆ ನಿಂತ ಮಹಾಸಂತ ಗುರುಮಲ್ಲೇಶ್ವರರು. ಲೋಕಪ್ರಜ್ಞಾ ಜೀವಿಯಾಗಿದ್ದ ಅವರು ಈ ನಾಡಿನ ಪ್ರಖ್ಯಾತ ಧರ್ಮಗುರು ಎಂದು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರೂ ಆದ ಹಿರಿಯ ವಿದ್ವಾಂಸ ಹಾಗೂ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಗೌರವ ಸಲಹೆಗಾರ ಡಾ. ಗೊ.ರು.ಚನ್ನಬಸಪ್ಪ ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಚಾಮರಾಜನಗರ ಜಿಲ್ಲೆಯ ದೊಡ್ಡಟ್ಟಿ ಪ್ರಕಾಶನ ಸಂಸ್ಥೆ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಸು.ಬಸವರಾಜ ದೊಡ್ಡಟ್ಟಿ ಅವರ 'ಮಹಾದಾಸೋಹಿ ಶ್ರೀ ಗುರುಮಲ್ಲೇಶ್ವರರು' ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಗುರುಮಲ್ಲೇಶ್ವರ ಎಂಬ ಮಹಾನ್ ಚೇತನದ ಪರಿಚಯ ದಾಖಲೆ ಈ ಕೃತಿ. ಇಂದಿನ ತಲೆಮಾರಿಗೆ ಅವರ ಉದಾತ್ತ ಚಿಂತನೆ ಗೊತ್ತಾಗಲೆಂದು ಬಸವರಾಜ ದೊಡ್ಡಟ್ಟಿ ಈ ಕೃತಿ ರಚಿಸಿದ್ದಾರೆ. ಸುಮಾರು 700 ಪುಟಗಳ ಬೃಹತ್ ಗ್ರಂಥ ಇದು. ಕೃತಿಯಲ್ಲಿ ಗುರುಮಲ್ಲೇಶ್ವರರ ಜೀವನದ ಅನೇಕ ಸಂಗತಿಗಳನ್ನು ದಾಖಲಿಸುತ್ತಲೇ ವಚನ ಸಾಹಿತ್ಯದ ಅನಾವರಣಗೊಳಿಸಿದ್ದು, ಇದು ವಿಶೇಷ. ಗುರುಮಲ್ಲೇಶ್ವರರ ಬಾಲ್ಯದಿಂದ ಐಕ್ಯವಾಗುವವರೆಗೆ ಅವರ ತಂದೆ–ತಾಯಿ ಮತ್ತು ಶಿಷ್ಯರೊಂದಿಗೆ ನಡೆದಿರುವ ಸಂಭಾಷಣೆಗಳಲ್ಲಿ ವಚನ ಬಳಸಿದ್ದಾರೆ. ಸಾಧ್ಯವಿರುವೆಡೆ ಪಾತ್ರಗಳ ಮೂಲಕ ವಚನಗಳನ್ನು ಹೇಳಿಸಿದ್ದಾರೆ. ಆ ಮೂಲಕ ಶರಣರ ಸಂದೇಶವನ್ನೂ ನೀಡಿದ್ದಾರೆ ಎಂದರು.



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಭಾನುವಾರ 'ಮಹಾದಾಸೋಹಿ ಶ್ರೀ ಗುರುಮಲ್ಲೇಶ್ವರರು' ಕೃತಿಯನ್ನು ಹಿರಿಯ ವಿದ್ವಾಂಸ ಡಾ.ಗೊ.ರು.ಚನ್ನಬಸಪ್ಪ ಬಿಡುಗಡೆ ಮಾಡಿದರು.

ನಾಡಿನ ಹೆಸರಾಂತ ಹಿರಿಯ ವಿದ್ವಾಂಸರಾಗಿದ್ದ ಡಾ.ತಿಪ್ಪೇರುದ್ರಸ್ವಾಮಿ ಅವರು ಜನಸಾಮಾನ್ಯರಿಗೆ ಶರಣರ ವಚನ ಸಾಹಿತ್ಯ ತಲುಪಿಸಲು ಕಾದಂಬರಿ ಪ್ರಕಾರ ಬಳಸಿದ್ದರು. ಅದೇ ಮಾದರಿಯಲ್ಲಿ ಬಸವರಾಜು ದೊಡ್ಡಟ್ಟಿ ಅವರೂ ಈ ಕೃತಿಯಲ್ಲಿ ಕಾದಂಬರಿ ಪ್ರಕಾರ ಬಳಸಿದ್ದಾರೆ. 50 ಆಕಾರ ಗ್ರಂಥಗಳನ್ನು ಓದಿ ಈ ಕೃತಿ ರಚಿಸಿದ್ದಾರೆ. ಕಾದಂಬರಿ ವಿನ್ಯಾಸ ಇದ್ದರೂ ಈ ಗುರುಮಲ್ಲೇಶ್ವರರ ಜೀವನ ಚರಿತ್ರೆ ನಿರೂಪಣೆಯಲ್ಲಿ ಹೊಸ ಪ್ರಯೋಗ ಮಾಡಿದ್ದಾರೆ. ಗುರುಮಲ್ಲೇಶ್ವರರು ಕೇಂದ್ರ ಬಿಂದು ಆಗಿದ್ದರೂ ಅವರ ಕಾಲದಲ್ಲಿನ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ವಿಶಾಲ ಚಿತ್ರಣ ನೀಡಿದ್ದಾರೆ. ಜೊತೆಗೆ ಅಂದಿನ ಧಾರ್ಮಿಕ, ಸಾಂಸ್ಕೃತಿಕ ಬದುಕಿನ ಚಿತ್ರಣ ಕೊಟ್ಟಿದ್ದಾರೆ.

ಪವಾಡದ ನೈಜ ಅರ್ಥ: ಕೃತಿಯಲ್ಲಿ 10 ಅಧ್ಯಾಯದಲ್ಲಿ ಗುರುಮಲ್ಲೇಶ್ವರರನ್ನು ಪರಿಚಯಿಸಿದ್ದಾರೆ. ಜೊತೆಗೆ ಒಂದಿಷ್ಟು ಪವಾಡಗಳಿಗೆ ಸ್ಥಾನ ಕೊಟ್ಟಿದ್ದಾರೆ. ವೈಚಾರಿಕ ಜಗತ್ತಿಗೆ ಪವಾಡ ಹಿಡಿಸಲಾರದು. ಆದರೆ ಪವಾಡ ಎಂದರೆ ಮಂತ್ರವಲ್ಲ. ಒಬ್ಬ ಒರಟನಾಗಿದ್ದರೆ ಆತನನ್ನು ಸಾತ್ವಿಕವಾಗಿ ಪರಿವರ್ತನೆ ಮಾಡುವುದೇ ಗುರುಮಲ್ಲೇಶ್ವರರ ಪವಾಡವಾಗಿತ್ತು. ಹಾಗಾಗಿ ಅವರ ಪವಾಡದ ನೈಜ ಅರ್ಥವನ್ನು ನಾವು ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಗುಂಡ್ಲುಪೇಟೆ ತಾಲೂಕು ಸೋಮಳ್ಳಿ ಶ್ರೀ ವೀರಸಿಂಹಾಸನ ಶಿಲಾಮಠದ ಶ್ರೀ ಸಿದ್ದಮಲ್ಲ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳ ವಿಶೇಷಾಧಿಕಾರಿ ಡಾ.ಎಸ್.ಶಿವರಾಜಪ್ಪ ಕೃತಿ ಕುರಿತು ಮಾತನಾಡಿದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪ್ರೊ.ಮಲೆಯೂರು ಗುರುಸ್ವಾಮಿ ಅತಿಥಿಯಾಗಿ ಪಾಲ್ಗೊಂಡಿದ್ದರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿದ್ದಪ್ಪ, ಕೃತಿ ಕರ್ತೃ ಸು.ಬಸವರಾಜ ದೊಡ್ಡಟ್ಟಿ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮತ್ತಿತರರು ಹಾಜರಿದ್ದರು.

ಶೂನ್ಯ ಭಾಷೆ ಅರ್ಥೈಸಿಕೊಳ್ಳಲು ಅಕ್ಷರ ಜ್ಞಾನ ಅಗತ್ಯವಿಲ್ಲ!

ಮೈಸೂರು: ಶೂನ್ಯ ಭಾಷೆ ಅರ್ಥ ಮಾಡಿಕೊಳ್ಳಲು ಅಕ್ಷರ ಜ್ಞಾನ ಅಗತ್ಯವಿಲ್ಲ. ಬದಲಿಗೆ ಅಂತರಂಗದ ಚಿಂತನೆ ಅಗತ್ಯ ಎಂದು ಹಿರಿಯ ವಿದ್ವಾಂಸ ಡಾ.ಗೊ.ರು.ಚನ್ನಬಸಪ್ಪ ಹೇಳಿದರು.

450 ವರ್ಷಗಳ ಹಿಂದೆ ಮಹಾರಾಷ್ಟ್ರದಲ್ಲಿ ಏಕನಾಥ, ನಿವೃತ್ತಿನಾಥ ಮತ್ತು ಮುಕ್ತಬಾಯಿ ಎಂಬ ಮೂವರು ಸಮಕಾಲೀನ ಸಂತರಿದ್ದರು. ಒಮ್ಮೆ ಏಕನಾಥರು ಒಂದು ಪತ್ರ ಬರೆದು, ಶಿಷ್ಯನ ಕೈಗೆ ಕೊಟ್ಟು ಇದನ್ನು ನಿವೃತ್ತಿನಾಥರಿಗೆ ತಲುಪಿಸುವಂತೆ ತಿಳಿಸಿದರು. ಅದರಂತೆ ಶಿಷ್ಯ ನಿವೃತ್ತಿನಾಥರಿಗೆ ತಲುಪಿಸಿದ. ನಿವೃತ್ತಿನಾಥರು ಅದನ್ನು ಓದಿ ಹಣೆಗೆ ಒತ್ತಿಕೊಂಡು ಇದನ್ನು ಮುಕ್ತಬಾಯಿಗೆ ತಲುಪಿಸುವಂತೆ ತಿಳಿಸಿದರು. ಅವರೂ ಶ್ರದ್ಧಾ–ಭಕ್ತಿಯಿಂದ ಓದಿ ಇದನ್ನು ಮತ್ತೆ ಏಕನಾಥರಿಗೆ ತಮ್ಮ ಉತ್ತರವಾಗಿ ತಲುಪಿಸಲು ಹೇಳಿದರು.

ದಾರಿ ಮಧ್ಯೆ ಕುತೂಹಲ ಉಂಟಾಗಿ ಶಿಷ್ಯ ತೆರೆದು ನೋಡಿದರೆ ಅದು ಕೇವಲ ಖಾಲಿ ಕಾಗದವಾಗಿತ್ತು (ಏನೂ ಬರೆಯದ). ಏಕನಾಥರಿಗೆ ಪತ್ರ ಹಿಂತಿರುಗಿಸಿದ ಶಿಷ್ಯನು, ನಾನು ಕುತೂಹಲ ತಾಳಲಾರದೇ ಪತ್ರ ತೆರೆದು ನೋಡಿದ್ದೇನೆ. ಆದರೆ ಅದರಲ್ಲಿ ಏನೂ ಬರೆದಿಲ್ಲ. ಈ ಖಾಲಿ ಕಾಗದ ಉದ್ದೇಶ ಏನೆಂದು ದಯವಿಟ್ಟು ತಿಳಿಸಿ ಎಂದು ಕೋರುತ್ತಾನೆ.

ಇದಕ್ಕೆ ಪ್ರತಿಕ್ರಿಯಿಸಿದ ಏಕನಾಥರು, ಅದರಲ್ಲಿ ಬದುಕಿಗೆ ಬೇಕಾದ ಎಲ್ಲವೂ ಇದೆ. ಅದರಲ್ಲಿ ಬರೆದಿರುವ ಭಾಷೆ ಶೂನ್ಯ ಭಾಷೆ. ಈ ಭಾಷೆ ಅರ್ಥ ಮಾಡಿಕೊಳ್ಳಲು ಬೇಕಿರುವುದು ಅಕ್ಷರ ಜ್ಞಾನವಲ್ಲ. ಬದಲಿಗೆ ಅಂತರಂಗದ ಚಿಂತನೆ. ಬರೆದ ಮೇಲೆ ಅದು ಶಬ್ದವಾಗುತ್ತದೆ. ಅದನ್ನು ಓದುವವರು ಪಂಡಿತರಾಗಬಹುದು. ಆದರೆ ಒಳಮುಖ ಚಿಂತನೆ ಇದ್ದರೆ ಶೂನ್ಯ ಭಾಷೆ ಅರ್ಥವಾಗುತ್ತದೆ. ಉಳಿದವರಿಗೆ ಅದು ಖಾಲಿ ಕಾಗದ ಅಷ್ಟೇ ಎಂದು ಉತ್ತರಿಸಿದರು. ಅಲ್ಲದೆ, ಶೂನ್ಯ ಭಾಷೆ ಅರ್ಥವಾಗಬೇಕಾದರೆ ಧ್ಯಾನ ಮತ್ತು ಮೌನ ಅಗತ್ಯ ಎಂದು ಏಕನಾಥರು ಉಪದೇಶ ಮಾಡಿದರು. ಸದರಿ ಶಿಷ್ಯನು ಅಂದಿನಿಂದ ಧ್ಯಾನಿ ಮತ್ತು ಮೌನಿಯಾಗುತ್ತಾನೆ ಎಂದು ತಿಳಿಸುವ ಮೂಲಕ ಡಾ.ಗೊ.ರು.ಚನ್ನಬಸಪ್ಪ, ಸಭಿಕರನ್ನು ಚಿಂತನೆಗೆ ಹಚ್ಚಿದರು.



ಹೂಟಗಳ್ಳಿ ಗ್ರಾಮದಲ್ಲಿ ಆರ್‌ಕೆಎಸ್ ಗಂಧರ್ವ ಯುವ ಸಮಿತಿ ಆಯೋಜಿಸಿದ್ದ ಟೆನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಗೆ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮುಖಂಡರಾದ ಎನ್.ಅರುಣ್‌ಕುಮಾರ್‌ಗೌಡ ಚಾಲನೆ ನೀಡಿ, ಆಟಗಾರರಿಗೆ ಶುಭ ಕೋರಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಹೂಟಗಳ್ಳಿ ದೇವರಾಜ್, ತಾಲೂಕು ಬಗರ್‌ಹುಕುಂ ಸಮಿತಿ ಸದಸ್ಯರಾದ ದಿಲ್ದಾರ್ ರವಿ, ಭೂ ನ್ಯಾಯ ಮಂಡಳಿ ಸದಸ್ಯ ಗೋಪಾಲ್‌ಗೌಡ, ಬಿಜೆಪಿ ಯುವ ಮೋರ್ಚಾ ಮಾಜಿ ಜಿಲ್ಲಾಧ್ಯಕ್ಷ ವಿಜಯಗೌಡ, ಅಭಿ ಮತ್ತಿತರರಿದ್ದರು.

ಭತ್ತದ ಬೆಳೆಗಾರರಿಗೂ ಪ್ರೋತ್ಸಾಹ ಧನ ವಿಸ್ತರಿಸಿ

ರಾಜ್ಯ ರೈತ ಸಂಘ ಆಗ್ರಹ

ಮೈಸೂರು,ನ.27(ಆರ್‌ಕೆಬಿ)–ಕೇಂದ್ರ ಸರ್ಕಾರ ಭತ್ತಕ್ಕೆ ನಿಗದಿ ಮಾಡಿರುವ ಎಂಎಸ್‌ಪಿ ಜೊತೆಗೆ ರಾಜ್ಯ ಸರ್ಕಾರ ರಾಜ್ಯದ



ದಕ್ಷಿಣಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯ ರೈತರಿಗೆ ಮಾತ್ರ ನೀಡುತ್ತಿರುವ ಪ್ರತಿ ಕ್ವಿಂಟಾಲ್‌ಗೆ 500 ರೂ. ಪ್ರೋತ್ಸಾಹ ಧನವನ್ನು ರಾಜ್ಯದ ಎಲ್ಲಾ ಭತ್ತದ ಬೆಳೆಗಾರರಿಗೂ ವಿಸ್ತರಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಒತ್ತಾಯಿಸಿದೆ.

ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರೈತರು ಮಾಡಿರುವ ಖರ್ಚು ಕೂಡ ವಾಪಸ್ ಬರುತ್ತಿಲ್ಲ. ಹೀಗಾಗಿ ರಾಜ್ಯದ ಭತ್ತ ಬೆಳೆಯುವ ಪ್ರದೇಶದಲ್ಲಿ ಪ್ರತಿ ವರ್ಷ ಅಂದಾಜು ಶೇ.30ರಷ್ಟು ಭತ್ತದ ಬೆಳೆಯುವ ವಿಸ್ತೀರ್ಣ ಕಡಿಮೆಯಾಗುತ್ತಿದೆ. ಇದಕ್ಕೆ ಕಾರಣ ಪತ್ತೆ ಹಚ್ಚಿ ಭತ್ತದ ಬೆಳೆಗಾರರ ರಕ್ಷಣೆಗೆ ಬರುವಂತೆ ರಾಜ್ಯ ಸರ್ಕಾರಕ್ಕೆ ಹಲವು ಬಾರಿ ಪತ್ರ ಬರೆದರೂ ಸರ್ಕಾರ ಗಮನಹರಿಸಿಲ್ಲ ಎಂದು ದೂರಿದರು.

ರಾಜ್ಯದಲ್ಲಿ 1.30 ಕೋಟಿಗೂ ಹೆಚ್ಚು ಜನರಿಗೆ ಮಾತ್ರ ವಿತರಿಸುತ್ತಿದ್ದು, ಹೊರ ರಾಜ್ಯದಿಂದ ತರಿಸುತ್ತಿರುವ ಅಕ್ಕಿಗೆ ಕಡಿವಾಣ ಹಾಕಿ, ಈ ಪಡಿತರ ವ್ಯವಸ್ಥೆಗೆ ರಾಜ್ಯದ ಭತ್ತವನ್ನು ಖರೀದಿಸಲು ಲಿಂಕ್ ಮಾಡಿದರೆ ಸಂಪೂರ್ಣ ಭತ್ತವನ್ನು ಎಎಫ್‌ಸಿ ಮತ್ತು ಪ್ರೋತ್ಸಾಹಧನದಲ್ಲಿ ಭತ್ತವನ್ನು ಖರೀದಿಸಿ, ರೈತರಿಗೆ ಉತ್ತೇಜನ ನೀಡಬಹುದು. ಆದರೆ ಸರ್ಕಾರ ಇದಕ್ಕೆ ಮುಂದಾಗದಿರುವುದು ಹಲವಾರು ಸಂಶಯಗಳಿಗೆ ಕಾರಣವಾಗಿದೆ ಎಂದು ಆರೋಪಿಸಿದರು. ಸರ್ಕಾರ ತಾರತಮ್ಯ ನೀತಿ ಬಿಟ್ಟು ಎಲ್ಲಾ ಜಿಲ್ಲೆಗಳಿಗೆ ಪ್ರೋತ್ಸಾಹಧನದ ನೀತಿಯನ್ನು ಅನ್ವಯಿಸದಿದ್ದರೆ ದೊಡ್ಡ ಮಟ್ಟದ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಕಬ್ಬಿಗೆ ಬೆಲೆ ನಿಗದಿ ಮಾಡದೇ ಸರ್ಕಾರ ನುಣುಚಿಕೊಳ್ಳುತ್ತಿದ್ದು, ಇದರ ವಿರುದ್ಧ ಚಳಿಗಾಲದ ಅಧಿವೇಶನದಲ್ಲಿ ಸುವರ್ಣಸೌಧಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ರೈತಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಮುಖಂಡ ಪಿ.ಮರಂಕಯ್ಯ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ನಗರಪಾಲಿಕೆ ವಾರ್ಡ್ ಸಮಿತಿಗಳ ಸಭೆ ಕರೆಯಲು ಒತ್ತಾಯ

ಮೈಸೂರು, ನ.27(ಎಸ್‌ಪಿಎನ್)–ಮೈಸೂರು ನಗರಪಾಲಿಕೆ ವ್ಯಾಪ್ತಿಯ ವಾರ್ಡ್ ಸಮಿತಿಗಳ ಮಾಸಿಕ ಸಭೆಗಳನ್ನು ಕೂಡಲೇ ಕರೆಯುವಂತೆ ಒತ್ತಾಯಿಸಿ ಮೈಸೂರು ವಾರ್ಡ್ ಸಮಿತಿ ಬಳಗದ ಸದಸ್ಯರು, ಮೇಯರ್, ನಗರಪಾಲಿಕೆ ಆಯುಕ್ತರು, ಕೌನ್ಸಿಲ್ ಕಾರ್ಯದರ್ಶಿಯವರಿಗೆ ಮನವಿ ಸಲ್ಲಿಸಿದ್ದಾರೆ.

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976, ಪ್ರಕರಣ 13ರ ಅಡಿಯಲ್ಲಿ ಮೈಸೂರು ನಗರಪಾಲಿಕೆಯಲ್ಲಿ ವಾರ್ಡ್ ಸಮಿತಿಗಳ ಪಟ್ಟಿ ಸಿದ್ಧಪಡಿಸಿ, ಅವರ ನೇತೃತ್ವದಲ್ಲಿ ವಾರ್ಡ್ ಸಮಿತಿ ಸಭೆ ಕರೆಯಲು ಶೀಘ್ರವೇ ಚಾಲನೆ ನೀಡುವಂತೆ ಬಳಗದ ಸದಸ್ಯರು ಒತ್ತಾಯಿಸಿದ್ದಾರೆ. ಅಧಿಕಾರಿಗಳು ಹೇಳುವ ಪ್ರಕಾರ ವಾರ್ಡ್ ಸಮಿತಿ ಸದಸ್ಯತ್ವಕ್ಕೆ 650 ಅರ್ಜಿಗಳು ಸ್ವೀಕೃತಗೊಂಡಿದ್ದು, ಆ ಅರ್ಜಿಗಳ ವಿವರವನ್ನು ನೀಡುವಂತೆಯೂ ಮನವಿ ಮಾಡಿರುವುದಲ್ಲದೆ, ಸ್ಥಳೀಯ ಸಂಸ್ಥೆಗಳ ಆಡಳಿತವನ್ನು ಜನಸ್ನೇಹಿಯಾಗಿಸಲು ಮತ್ತು ಜನರ ಸಹಭಾಗಿತ್ವದಿಂದ ವಾರ್ಡ್ ಸಮಿತಿ ಸಭೆಗಳು ಅವಶ್ಯವಾಗಿವೆ. ಇದು ಕಡ್ಡಾಯ ಪ್ರಕ್ರಿಯೆ ಎಂದು ಹೈಕೋರ್ಟ್ ಕೂಡ ತೀರ್ಪು ನೀಡಿದೆ.

ಅಂತೆಯೇ ಮೈಸೂರಿನಲ್ಲಿ ದಿನೇದಿನೆ ಮೂಲ ಸೌಕರ್ಯದ ಗುಣಮಟ್ಟ ಕುಸಿಯುತ್ತಿರುವುದು ಬೇಸರದ ಸಂಗತಿ. ಇದನ್ನು ಪರಿಹರಿಸಬೇಕಾದಲ್ಲಿ ಸಾರ್ವಜನಿಕರು, ಜನಪ್ರತಿನಿಧಿಗಳು, ಅಧಿಕಾರಿಗಳ ನೇತೃತ್ವದ ಮಾಸಿಕ ಸಭೆಗಳನ್ನು ನಡೆಸಬೇಕು.

ಈಗಾಗಲೇ ವಾರ್ಡ್ ಸಮಿತಿ ಸದಸ್ಯತ್ವಕ್ಕೆ ಸ್ವೀಕೃತಗೊಂಡಿರುವ 650 ನಾಗರಿಕರ ಪಟ್ಟಿಯನ್ನು ಸಿದ್ಧಪಡಿಸಿ. ವಾರ್ಡ್ ಮಟ್ಟದಲ್ಲಿ ಮಾಸಿಕ ಸಭೆಗಳನ್ನು ಆರಂಭಿಸುವಂತೆ ಸುತ್ತೋಲೆ ಹೊರಡಿಸಬೇಕು. ಕೆಎಂಸಿ ನಿಯಮದಂತೆ ವಾರ್ಡ್ ಸೆಕ್ರೆಟರಿ ಹಾಗೂ ಸಭೆಗಳು ನಡೆಯುವ ದಿನ, ಜಾಗದ ವಿವರಗಳನ್ನು ಮಾಧ್ಯಮದ ಮೂಲಕ ಜನರಿಗೆ ತಿಳಿಸಬೇಕು ಎಂದು ತಮ್ಮ ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಹಾಸನ ಜಿಲ್ಲಾ ಬಳಗದಿಂದ ಪ್ರತಿಭಾ ಪುರಸ್ಕಾರ

ಮೈಸೂರು, ನ.27– ಹಾಸನ ಜಿಲ್ಲಾ ಬಳಗದ ವತಿಯಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ.75ಕ್ಕಿಂತ ಹೆಚ್ಚು ಅಂಕ ಪಡೆದ ಹಾಸನ ಜಿಲ್ಲಾ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಹಾಸನ ಜಿಲ್ಲೆಯವರಾಗಿದ್ದು, ಮೈಸೂರು ಜಿಲ್ಲೆಯಲ್ಲಿ ಪರೀಕ್ಷೆಗೆ ಹಾಜರಾಗಿರಬೇಕು. ಹಾಗೂ ಪೋಷಕರು ಬಳಗದ ಖಾಯಂ ಸದಸ್ಯರಾಗಿರಬೇಕು. ಅಂತಹ ವಿದ್ಯಾರ್ಥಿಗಳು ಬಿ.ಜಿ.ರಂಗೇಗೌಡ, 11488, ವಿಜಯನಗರ 4ನೇ ಹಂತ, ಮೈಸೂರು ಅವರಿಗೆ ಅರ್ಜಿಯೊಂದಿಗೆ ಅಂಕಪತ್ರದ ದೃಢೀಕೃತ ಪ್ರತಿ ಹಾಗೂ ಖಾಯಂ ಸದಸ್ಯತ್ವ ಹೊಂದಿರುವ ರಶೀದಿ ನಕಲು ಪ್ರತಿಯನ್ನು ಡಿ.15ರೊಳಗೆ ಕಳುಹಿಸಲು ಕೋರಲಾಗಿದೆ. ಮಾಹಿತಿಗೆ ಮೊ. 9886647852 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ: ಶಿವರಾಂ ಗಾಂವ್ಕರ್ ವರ್ಜ್ರಳ್ಳಿ 6.15 ಗೀತಾರಾಧನ, 6.30 ಕವಿನುಡಿ ಸವಿನುಡಿ: ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.35 ಹಾಗೂ ಸಂಜೆ 5ಕ್ಕೆ: ನೃತ್ಯ ಶಿಲ್ಪ ಯಾತ್ರೆ– ಲೇಖನ ಮತ್ತು ಪ್ರಸ್ತುತಿ–ಡಾ.ಬಿ.ಎನ್.ಮನೋರಮ, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಎನ್.ಹೇಮಾ, ಎಂ.ಡಿ. ಸುಮತಿ ಮುರಾರಿ, ವ್ಯಾಖ್ಯಾನ–ಡಾ.ಮ.ರಾಮಕೃಷ್ಣ, 9.00 ಕನ್ನಡ ಕಜ್ಜಾಯ, 9.05 ನೆನಪಿನಂಗಳ, 10.00 ಲಯ ಸಂಭ್ರಮ, ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ಕನ್ನಡ ಸಂಗೀತ ವೈವಿಧ್ಯ, ರಚನೆ ಹಾಗೂ ನಿರೂಪಣೆ–ಡಾ.ಜ್ಯೋತಿ ಶಂಕರ್, ಪ್ರಸ್ತುತಿ– ಹೆಚ್.ಎಲ್. ಶಿವಶಂಕರ ಸ್ವಾಮಿ. **ಮಧ್ಯಾಹ್ನ:** 12.30 ದೇವರನಾಮ–ವೃಂದಗಾನ, ಮಂಜುಳಾ ಗುರುರಾಜ್, 12.45 ನಮ್ಮ ಆರೋಗ್ಯ 'ಪ್ರವಾಸ ಮತ್ತು ಆರೋಗ್ಯ' ಡಾ.ಕೆ.ನಾಗೇಂದ್ರ ಪ್ರಸಾದ್ ಅವರೊಂದಿಗೆ ಮಾತುಕತೆ, 1.20 ಭಾವಗೀತೆ–ವೃಂದಗಾನ, 3.00 ಹರಿಯನ್ನರಸಿದ ವನಿತೆಯರು–ಮಹಿಳಾ ಹರಿದಾಸರನ್ನು ಕುರಿತ ಕಾರ್ಯಕ್ರಮ, ರಚನೆ ಮತ್ತು ಪ್ರಸ್ತುತಿ–ಡಾ.ಸುಕನ್ಯಾ ಪ್ರಭಾಕರ್. **ಸಂಜೆ:** 4.00 ಮಹಿಳಾರಂಗ: ಆಕಾಶವಾಣಿ ಅಡುಗೆ ಮನೆ, ಪ್ರಸ್ತುತಿ– ಕೆ.ಬಿ.ಮೀನಾ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, ಕವಿ– ದಿವಾಕರ ಹೆಗಡೆ, ಸಂಗೀತ– ನಿತಿನ್ ರಾಜಾರಾಂ ಶಾಸ್ತ್ರಿ, ಭಾಗವಹಿಸಿದ್ದಾರೆ– ನಾದಾಮೃತ ಸಂಗೀತ ಶಾಲೆಯ ಮಕ್ಕಳು, 6.50 ಕೃಷಿರಂಗ: ಕಿಸಾನ್ ವಾಣಿ– ಕೃಷಿ ಹಾಗೂ ತೋಟಗಾರಿಕೆ ಬೆಳೆಗಳ ಉತ್ಪಾದನೆಗಾಗಿ ಇರುವ ಯೋಜನೆಗಳು ಹಾಗೂ ಅನುವುಗಾರರಾಗಿ ಅನುಭವ ಕುರಿತು ಕೆ.ಪಿ.ರಾಘವೇಂದ್ರ ಅವರೊಡನೆ ಸಂದರ್ಶನ. **ರಾತ್ರಿ:** 9.30 ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಹೊಸ ಅಲೆ: ಮಾತುಕತೆಯಲ್ಲಿ ಭಾಗವಹಿಸುವವರು– ಡಾ.ವಿ.ಆನಂದ ಪಾಟೀಲ, ಡಾ. ಶಿವಲಿಂಗಪ್ಪ ಕೆ. ಹಂದಿಹಾಳ್ ಮತ್ತು ಪರಮೇಶ್ವರ ಸೊಪ್ಪಿಮಠ, 10.30 ಸವಿನೆನಪು.

ಇಂದಿನ ಪಂಚಾಂಗ

28.11.2022 ಸೋಮವಾರ, ಮಳೆ ನಕ್ಷತ್ರ: ಅನೂರಾಧ, 20.11.2022 ರಿಂದ 2.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ : ಉತ್ತರಾಷಾಢ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ (ಎನ್‌ಐಇ) : ವಿಟಿಯು ಮೈಸೂರು ಡಿವಿಷನ್ ಪುರುಷರ ಬಾಸ್ಕೆಟ್ ಬಾಲ್ ಚಾಂಪಿಯನ್‌ಷಿಪ್–2022–23 :** ಉದ್ಘಾಟನೆ: ಡಿಎಂಎಸ್ ಅಂಡ್ ಆರ್‌ಐಇ ನಿವೃತ್ತ ಪ್ರಾಂಶುಪಾಲ ಸಿ.ಜಿ. ನಾಗರಾಜ, ಅಧ್ಯಕ್ಷತೆ: ಎನ್‌ಐಇ ಮೈಸೂರು ಪ್ರಾಂಶುಪಾಲೆ ಡಾ. ರೋಹಿಣಿ ನಾಗಪದ್ಮ, ಸ್ಥಳ: ಎನ್‌ಐಇ ಡೈಮಂಡ್ ಜ್ಯುಬಿಲಿ ಇಂಡೋರ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಬೆಳಗ್ಗೆ 9.30ಕ್ಕೆ.

■ **ಎಂಆರ್‌ಸಿ ಚಾರಿಟೆಬಲ್ ಟ್ರಸ್ಟ್ ಕಣ್ಣಿನ ಆಸ್ಪತ್ರೆ :** ಉಚಿತ ಕಣ್ಣಿನ ತಪಾಸಣೆ ಹಾಗೂ ಶಸ್ತ್ರಚಿಕಿತ್ಸೆ ಶಿಬಿರ (ಪ್ರಾಯೋಜಕತ್ವ: ರಘುಲಾಲ್ ಅಂಡ್ ಕಂಪನಿ) ಸ್ಥಳ: ಎಂಆರ್‌ಸಿ ಕಣ್ಣಿನ ಆಸ್ಪತ್ರೆ, ಬೆಳಗ್ಗೆ 9.30ಕ್ಕೆ.

■ **ವಿದ್ಯಾವರ್ಧಕ ಕಾನೂನು ಕಾಲೇಜು: ಪುನಶ್ಚೇತನ ಕಾರ್ಯಕ್ರಮ :** ಉದ್ಘಾಟನೆ: ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಎಂ.ಎಲ್ ರಘುನಾಥ್, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು: ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ವಿಶ್ವನಾಥ್, ಸಂಘದ ಖಜಾಂಚಿ ಶ್ರೀಶೈಲ ರಾಮಣ್ಣನವರ್, ಸ್ಥಳ: ಚಿಕ್ಕಬೋರಯ್ಯ ಹಾಲ್, ಬೆಳಗ್ಗೆ 10ಕ್ಕೆ.

■ **ಅನ್ವೇಷಣಾ ಸೇವಾ ಟ್ರಸ್ಟ್:** ರಾಜ್ಯಸಭಾ ಸದಸ್ಯ ಡಾ.ಎಲ್.ಹನುಮಂತಯ್ಯ ಅವರ ಆಯ್ದ 101 ಕವಿತೆಗಳ ಸಂಕಲನ ಅಂತರಾಳದ ಒಳದನಿಗಳು ಕೃತಿ ಲೋಕಾರ್ಪಣೆ, ಉದ್ಘಾಟನೆ: ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಆಯುಕ್ತ ಪಿಜಿಆರ್ ಸಿಂಧ್ಯಾ, ಕೃತಿ ಲೋಕಾರ್ಪಣೆ: ವಿಧಾನಪರಿಷತ್ ಸದಸ್ಯ ಡಿ. ತಿಮ್ಮಯ್ಯ, ಪ್ರಥಮ ಕೃತಿ ಸ್ವೀಕಾರ: ರಾಜ್ಯಸಭಾ ಸದಸ್ಯ ಡಾ.ಎಲ್.ಹನುಮಂತಯ್ಯ, ಅಧ್ಯಕ್ಷತೆ: ತವರು ಅರಸು ಮಹಿಳಾ ಸಂಘದ ಸ್ಥಾಪಕ ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮಿ ಅರಸ್, ಮುಖ್ಯ ಅತಿಥಿಗಳು: ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಸದಸ್ಯ ಹೆಚ್.ಎಲ್. ಸುರೇಶ್‌ಬಾಬು, ವೈದ್ಯ ವಾರ್ತಾ ಪ್ರಕಾಶನದ ನಿರ್ದೇಶಕ ಹೆಚ್.ಎಂ.ಟಿ. ಲಿಂಗರಾಜೇ ಅರಸ್, ಸ್ಥಳ: ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ :** ದೀಕ್ಷಾರಂಭ ವಿದ್ಯಾರ್ಥಿಗಳ ಪರಿಚಯ ಕಾರ್ಯಕ್ರಮ ಸಾನಿಧ್ಯ: ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮೀಜಿ, ಉದ್ಘಾಟನೆ: ಸೆಂಟ್ರಲ್ ಬ್ಯೂರೋ ಕಮ್ಯೂನಿಕೇಷನ್, ಡೆಪ್ಯೂಟಿ ಡೈರೆಕ್ಟರ್ ಡಾ. ಟಿ.ಸಿ. ಪೂರ್ಣಿಮಾ, ಅಧ್ಯಕ್ಷತೆ: ಕಾಲೇಜು ಶಿಕ್ಷಣ ಇಲಾಖೆ ಉಪ ನಿರ್ದೇಶಕ ಡಾ. ಎಂ.ಎಸ್. ಗಿರಿಧರರಾವ್, ಮುಖ್ಯ ಅತಿಥಿ: ಡಿಸಿಪಿ ಎಂ.ಎನ್. ಗೀತಾ ಪ್ರಸನ್ನ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಮೈಸೂರು ವಕೀಲರ ಸಂಘ :** ಸಂವಿಧಾನ ದಿನಾಚರಣೆ, ಉದ್ಘಾಟನೆ: ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎಂ.ಎಲ್. ರಘುನಾಥ್, ಅಧ್ಯಕ್ಷತೆ: ವಕೀಲರ ಸಂಘದ ಅಧ್ಯಕ್ಷ ಎಂ. ಮಹದೇವಸ್ವಾಮಿ, ಮುಖ್ಯ ಅತಿಥಿ: ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷ ದೇವರಾಜ ಭೂತೆ, ಸ್ಥಳ: ಮೈಸೂರು ವಕೀಲರ ಸಂಘದ ಆವರಣ, ಮಧ್ಯಾಹ್ನ 1.30ಕ್ಕೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ :** ಜೆಎಸ್‌ಎಸ್ ಅಂತರ ಸಂಸ್ಥೆಗಳ ಕ್ರೀಡಾಕೂಟ, ಸಾನ್ನಿಧ್ಯ: ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ, ಅಧ್ಯಕ್ಷತೆ: ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಸ್ಥಳ: ಸುತ್ತೂರು ಕ್ಷೇತ್ರ, ಸಂಜೆ 4ಕ್ಕೆ.

■ **ಸರಸ್ವತಿಪುರಂ ಕನ್ನಡ ಗೆಳೆಯರ ಬಳಗ :** ಕನ್ನಡ ರಾಜ್ಯೋತ್ಸವ ಪ್ರಯುಕ್ತ ಸಾಧಕರಿಗೆ ಸನ್ಮಾನ ಹಾಗೂ ಲಕ್ಕಿಡಿಪ್ ಮತ್ತು ಬಹುಮಾನ ವಿತರಣಾ ಸಮಾರಂಭ, ಅಧ್ಯಕ್ಷತೆ: ಶಾಸಕ ಸಾ.ರಾ. ಮಹೇಶ್, ಉದ್ಘಾಟನೆ: ಶಾಸಕ ಎಲ್. ನಾಗೇಂದ್ರ, ಬಹುಮಾನ ವಿತರಣೆ: ಮೇಯರ್ ಶಿವಕುಮಾರ್, ಮುಖ್ಯ ಅತಿಥಿ: ಕಾರ್ಪೊರೇಟರ್ ಶ್ರೀಮತಿ ವೇದಾವತಿ ಮತ್ತು ಡೆವಲಪರ್ ಸತೀಶ್, ಸ್ಥಳ: ಕೆ. ಜವರೇಗೌಡ ಉದ್ಯಾನವನ, ಸರಸ್ವತಿಪುರಂ, ಸಂಜೆ 5.30ಕ್ಕೆ.

ವಿಜ್ಞಾನ ಬಳಕೆ ಹೆಚ್ಚಿದಂತೆಲ್ಲಾ ಮಾನವೀಯ ಮೌಲ್ಯಗಳು ಕುಸಿಯುತ್ತಿವೆ

● ಮಂಡ್ಯ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಪ್ರೊ. ಎಚ್.ಎಸ್.ಮುದ್ದೇಗೌಡ ವಿಷಾದ ● ಆಕಾಶವಾಣಿ ನಿವೃತ್ತ ಕಾರ್ಯಕ್ರಮ ನಿರ್ವಾಹಕ ಎನ್.ವಿ.ರಮೇಶ್-71ನೇ ಜನ್ಮದಿನ ಕಾರ್ಯಕ್ರಮ


ಎನ್.ವಿ. ರಮೇಶ್ ಅವರ ಕೃತಿಗಳನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಲೇಖಕ ಎಸ್. ರಾಮಪ್ರಸಾದ್ ಬಿಡುಗಡೆ ಮಾಡಿದರು. ಸಮಾಜ ಸೇವಕ ಕೆ. ರಘುರಾಂ, ಶ್ರೀಮತಿ ಹರಿಪ್ರಸಾದ್, ಜಿಲ್ಲಾ ಕಸಾಪ ಕಾರ್ಯದರ್ಶಿ ಮ.ನ.ಲತಾ ಮೋಹನ್, ರೇವಣ್ಣ ಬಳ್ಳಾರಿ, ಉಮಾ ರಮೇಶ್ ಇದ್ದಾರೆ.

ಮೈಸೂರು, ನ.27– ವಿಜ್ಞಾನ ಬಳಕೆ ಹೆಚ್ಚಿದಂತೆಲ್ಲಾ ಮೌಲ್ಯಗಳ ಕುಸಿತವಾಗುತ್ತಿದೆ ಎಂದು ಮಂಡ್ಯ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಪ್ರೊ.ಎಚ್.ಎಸ್. ಮುದ್ದೇಗೌಡ ವಿಷಾದಿಸಿದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ನೇಹ ಸಿಂಚನ ಟ್ರಸ್ಟ್ ಹಾಗೂ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು ಸಂಯುಕ್ತವಾಗಿ ಕೃಷ್ಣಮೂರ್ತಿಪುರಂ ನಮನ ಕಲಾಮಂಟಪದಲ್ಲಿ ಭಾನುವಾರ ಆಕಾಶ ವಾಣಿ ನಿವೃತ್ತ ಕಾರ್ಯಕ್ರಮ ನಿರ್ವಾಹಕ ಎನ್.ವಿ. ರಮೇಶ್ ಅವರ 71ನೇ ಜನ್ಮ ದಿನದ ಅಂಗವಾಗಿ ಏರ್ಪಡಿಸಿದ್ದ ಸಾಹಿತ್ಯಕ ಕಾರ್ಯಕ್ರಮ, ಪುಸ್ತಕ ಬಿಡುಗಡೆ. ವಿಚಾರ ಸಂಕಿರಣ, ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ನಾವು ಈಗ ಚಂದ್ರನಿಗೆ ಹತ್ತಿರವಾಗಿದ್ದೇವೆ. ಆದರೆ ಪಕ್ಕದ ಮನೆಯ ವರಿಗೆ ದೂರವಾಗಿದ್ದೇವೆ. ಪಕ್ಕದ ಮನೆಯಲ್ಲಿ ಏನಾದರೂ ಆದರೆ ಬೆಳಗ್ಗೆ ಪತ್ರಿಕೆ ನೋಡಿ ತಿಳಿದುಕೊಳ್ಳುವ ಪರಿಸ್ಥಿತಿಗೆ ತಲುಪಿದ್ದೇವೆ ಎಂದು ಆತಂಕ ವ್ಯಕ್ತಪಡಿಸಿದರು.

ಈಗ ಕೂಡು ಕುಟುಂಬಗಳೇ ಇಲ್ಲ. ಗಂಡ– ಹೆಂಡತಿಯೇ ಕುಟುಂಬ ಎಂಬಂತೆ ಆಗಿದೆ. ಅವರಲ್ಲೂ ವಿಚ್ಛೇದನ ಪ್ರಕರಣಗಳು ನಡೆಯುತ್ತಿರುತ್ತವೆ. ಈ ಪರಿಸ್ಥಿತಿ ದೂರವಾಗ ಬೇಕು. ಪರೋಪಕಾರಿಯಾಗಿ, ಸಮಾಜಕ್ಕೆ ಪೂರಕವಾಗಿ ಬದುಕುವ ಸ್ಥಿತಿ ನಿರ್ಮಾಣ ವಾಗಬೇಕು ಎಂದು ಅವರು ಆಶಿಸಿದರು.

ಸಾಂಸ್ಕೃತಿಕ ರಾಯಭಾರಿ: ಕಾರ್ಯಕ್ರಮ ಉದ್ಘಾಟಿಸಿದ ಸಮಾಜ ಸೇವಕ ಕೆ. ರಘುರಾಂ ಮಾತನಾಡಿ, ಎನ್.ವಿ. ರಮೇಶ್ ಅವರು ರೇಡಿಯೋ, ದೂರದರ್ಶನ, ಸಾಹಿತ್ಯ, ರಂಗಭೂಮಿ ಹೀಗೆ ನಾನಾ ಕ್ಷೇತ್ರಗಳಲ್ಲಿ ಸಾಂಸ್ಕೃತಿಕ ರಾಯಭಾರಿ ಯಂತೆ ಅನನ್ಯವಾದ ಕೆಲಸ ಮಾಡುತ್ತಿದ್ದಾರೆ. ಸಾಮಾಜಿಕ ಚಟುವಟಿಕೆಗಳಲ್ಲೂ ತೊಡಗಿಸಿ ಕೊಂಡಿದ್ದಾರೆ ಎಂದು ಶ್ಲಾಘಿಸಿದರು.

ಕನ್ನಡ ರಾಜ್ಯೋತ್ಸವ ಮಾಸದಲ್ಲಿ ದಿನವಿಡೀ ಸಾಹಿತ್ಯಕ ಕಾರ್ಯಕ್ರಮ ಏರ್ಪಡಿಸಿರುವುದು ಉತ್ತಮವಾದುದು. ಕನ್ನಡಸಿರಿ ಬೆಳಗಲಿ ಎಂದ ಅವರು, ಕನ್ನಡದ ಬಗ್ಗೆ ಪ್ರತಿಯೊಬ್ಬರಲ್ಲೂ ಅಭಿಮಾನ ಇರಲಿ. ಬೇರೆ ಭಾಷೆಗಳನ್ನು ಕಲಿಯಿರಿ ಎಂದು ಸಲಹೆ ಮಾಡಿದರು.

ಆಟೋರಿಕ್ಷಾ ಚಾಲಕರು, ಗ್ರಾಮೀಣ ಕಲಾವಿದರು, ಜನಪದರು ಕನ್ನಡ ಭಾಷೆ ಯನ್ನು ಉಳಿಸುತ್ತಿದ್ದಾರೆ. ಆದ್ದರಿಂದ ರಾಜ್ಯ ಸರ್ಕಾರ ಗ್ರಾಮೀಣ ಕಲಾವಿದರ ನೆರವಿಗೆ ಮುಂದಾಗಬೇಕು ಎಂದು ಆಗ್ರಹಿಸಿದರು.

ಹೈಕೋರ್ಟಿನ ಹಿರಿಯ ವಕೀಲ ರೇವಣ್ಣ ಬಳ್ಳಾರಿ ಅವರು ಬಹುಮುಖ ವ್ಯಕ್ತಿತ್ವದ ಜೀವಮಾನ ಸಾಧಕ ಎನ್.ವಿ. ರಮೇಶ್, ಮಂಡ್ಯದ ಕಾರ್ಯಕ್ರಮ ನಿರೂಪಕಿ ಭವಾನಿ ಲೋಕೇಶ್ ಅವರು ರೇಡಿಯೋ ಕ್ಷೇತ್ರಕ್ಕೆ ರಮೇಶ್ ಅವರ ಕೊಡುಗೆ ಕುರಿತು ಮಾತನಾಡಿದರು.

ಕೃತಜ್ಞತೆ ಸಲ್ಲಿಸಿ ಮಾತನಾಡಿದ ಎನ್.ವಿ. ರಮೇಶ್, ಸಾಫ್ಟ್‌ವೇರ್‌ನವರು ಹಾರ್ಡ್‌ವೇರ್‌ನಂತೆ ವರ್ತಿಸಬಾರದು. ಎಲ್ಲೇ ಇದ್ದರೂ ಕನ್ನಡದ ಬಗ್ಗೆ ಪ್ರೀತಿ ಹೊಂದಿ ಜೀವನ ಸಾಗಿಸಬೇಕು. ಪ್ರಪಂಚದ ಎಲ್ಲಿಯೇ ಹೋದರೂ ಭಾರತವೇ ಶ್ರೇಷ್ಠವೆನಿಸುತ್ತದೆ ಎಂದರು.

ವಿಜ್ಞಾನ ಲೇಖಕ ಎಸ್. ರಾಮಪ್ರಸಾದ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದಾವಣಗೆರೆ ಜಿಲ್ಲಾ ಪ್ರತಿನಿಧಿ ಪಿ.ಎಂ. ಸಿದ್ದಯ್ಯ ಹೊನ್ನಾಳಿ ಮಾತನಾಡಿದರು. ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಿಎಫ್‌ಟಿಆರ್‌ಐ ನಿವೃತ್ತ ವಿಜ್ಞಾನಿ, ರಂಗಕರ್ಮಿ ಶ್ರೀಮತಿ ಹರಿಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು.

ಸುಗಂಧಮ್ಮ ಜಯಪ್ಪ ಹೊನ್ನಾಳಿ ಪ್ರಾರ್ಥಿಸಿದರು. ಜಿಲ್ಲಾ ಕಸಾಪ ಕಾರ್ಯದರ್ಶಿ ಮ.ನ. ಲತಾ ಮೋಹನ್ ಸ್ವಾಗತಿಸಿದರು. ಸುಮಾ ಕಾರ್ಯಕ್ರಮ ನಿರೂಪಿಸಿದರು. ಸಾಹಿತಿಗಳಾದ ಎಂ. ಮುತ್ತುಸ್ವಾಮಿ, ಉಷಾ ನರಸಿಂಹನ್, ಕೆರೋಡಿ ಎಂ. ಲೋಲಾಕ್ಷಿ ಜಯಪ್ಪ ಹೊನ್ನಾಳಿ, ಡಾ.ಎಚ್.ಎ. ಪಾರ್ಶ್ವನಾಥ್, ಗೋವಿಂದಾ ಚಾರಿ, ವಿ.ಮಾ. ಜಗದೀಶ್, ಮಂಡ್ಯದ ಆರ್.ಎ. ಕುಮಾರ್, ಸಿ.ವಿ. ಶ್ರೀಧರಮೂರ್ತಿ, ಅಂಬಾದಾಸ್ ಜೋಶಿ, ಜಗದೇವ್ ಸ. ಗಲಗಲಿ, ಕೆಂಪರಾಜು ಮೊದಲಾದವರು ವಿವಿಧ ಗೋಷ್ಠಿಗಳಲ್ಲಿ ಭಾಗವಹಿಸಿದ್ದರು.

ಪೊಲೀಸರಿಗೆ 'ಆರಕ್ಷಕ ರತ್ನ', ಕೊರೊನಾ ವಾರಿಯರ್‌ಗೆ 'ಆಪತ್ಬಾಂಧವ' ಪ್ರಶಸ್ತಿ



ಮೈಸೂರು, ನ.27(ಜಿಎ)– ಕನ್ನಡ ರಾಜ್ಯೋತ್ಸವದ ಅಂಗವಾಗಿ ಕರ್ನಾಟಕ ರಾಜ್ಯ ಜನ ಜಾಗೃತಿ ವೇದಿಕೆ ವತಿಯಿಂದ ಪೊಲೀಸ್ ಸಿಬ್ಬಂದಿಗೆ 'ಆರಕ್ಷಕ ರತ್ನ' ಹಾಗೂ ಕೊರೊನಾ ವಾರಿಯರ್‌ಗೆ 'ಆಪತ್ಬಾಂಧವ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಗರದ ಪುರಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನರಸಿಂಹರಾಜ ಪೊಲೀಸ್ ಠಾಣೆ, ಮಂಡಿ ಪೊಲೀಸ್ ಠಾಣೆ, ಲಷ್ಕರ್ ಪೊಲೀಸ್ ಠಾಣೆ, ನರಸಿಂಹರಾಜ ಸಂಚಾರ ಪೊಲೀಸ್ ಠಾಣೆ, ಸಿದ್ಧಾರ್ಥ ಸಂಚಾರ ಪೊಲೀಸ್ ಠಾಣೆ ಹಾಗೂ ದೇವರಾಜ ಸಂಚಾರ ಪೊಲೀಸ್ ಠಾಣೆಯ 65 ಪೊಲೀಸರಿಗೆ 'ಆರಕ್ಷಕ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕೊರೊನಾ ಸಂದರ್ಭದಲ್ಲಿ ಸಮಾಜಮುಖಿ ಕಾರ್ಯಗಳ ಮೂಲಕ ಗುರುತಿಸಿಕೊಂಡ ವೈದ್ಯರು, ಮಾಧ್ಯಮ ಪ್ರತಿನಿಧಿಗಳು ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರು ಮಾಡಿದ ಸೇವೆಗಾಗಿ 59 ಮಂದಿಗೆ 'ಆಪತ್ಬಾಂಧವ' ಪ್ರಶಸ್ತಿ ನೀಡಲಾಯಿತು. ಇದೇ ವೇಳೆ ಚಾಮರಾಜ ಮತ್ತು ನರಸಿಂಹರಾಜ ಕ್ಷೇತ್ರದ 225 ಮಂದಿಗೆ ಪ್ರಧಾನಮಂತ್ರಿ ಉಜ್ವಲ್ ಯೋಜನೆ ಅಡಿ ಗ್ಯಾಸ್ ಸ್ಟೌವ್, ಸಿಲಿಂಡರ್ ವಿತರಿಸಲಾಯಿತು.

ನಂತರ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮುಖಂಡರಾದ ಅಜೀಜ್ ಉಲ್ಲಾ(ಅಜ್ಜು) ಮಾತನಾಡಿ, ಕನ್ನಡ ರಾಜ್ಯೋತ್ಸವ ಎಂಬುದು ಒಂದು ದಿನಕ್ಕೆ ಸೀಮಿತವಾಗಬಾರದು. ಅದು ನಿರಂತರವಾಗಿ ವರ್ಷಪೂರ್ತಿ ನಡೆಯಬೇಕು. ಕನ್ನಡ ಹೆಸರಿನಲ್ಲಿ ಹೋರಾಟಗಳ ಮಾಡಿದರೆ ಸಾಲದು. ಅದರೊಟ್ಟಿಗೆ ನಾಡಿಗಾಗಿ ವಿಶೇಷ ಸೇವೆ ಸಲ್ಲಿಸಬೇಕು. ಈ ರೀತಿಯ ಕಾರ್ಯಕ್ರಮಗಳು ಜನಪ್ರತಿನಿಧಿಗಳಿಗೆ ಮಾತ್ರ ಸೀಮಿತವಲ್ಲ. ಪ್ರತಿಯೊಬ್ಬರು ಇದರಲ್ಲಿ ಪಾಲ್ಗೊಳ್ಳಬೇಕಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಉಪಮಹಾಪೌರ, ಪಾಲಿಕೆ ಸದಸ್ಯ ಶಫೀ ಅಹಮ್ಮದ್, ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್, ಮುಖಂಡರಾದ ಮೊಹಮ್ಮದ್ ಷರೀಫ್, ಕರ್ನಾಟಕ ರಾಜ್ಯ ಜನ ಜಾಗೃತಿ ವೇದಿಕೆ ಸಂಸ್ಥಾಪಕ ಮತ್ತು ರಾಜ್ಯಾಧ್ಯಕ್ಷ ಅಸ್ಮತ್ ಷರೀಫ್, ರಾಜ್ಯ ಉಪಾಧ್ಯಕ್ಷ ಸುಜಯ್ ಕುಮಾರ್ ಸಿಂಗ್, ರಾಜ್ಯ ಉಪಾಧ್ಯಕ್ಷ ಸಲೀಂ ಪಾಷ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ನಂಜನಗೂಡು ಮುಖ್ಯಮಂತ್ರಿ ಕಾರ್ಯಕ್ರಮಕ್ಕೆ ವಿಪಕ್ಷ ನಾಯಕ ಸಿದ್ದರಾಮಯ್ಯರ ಆಹ್ವಾನಿಸದೇ ಶಿಷ್ಟಾಚಾರ ಉಲ್ಲಂಘನೆ

ಕಾಂಗ್ರೆಸ್ ಮುಖಂಡರ ಅಸಮಾಧಾನ



ಮೈಸೂರು, ನ.27(ಆರ್‌ಕೆಬಿ)– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ (ನ.28) ನಂಜನಗೂಡಿನಲ್ಲಿ ವಿವಿಧ ಜನಪರ ಯೋಜನೆಗಳಿಗೆ ಶಂಕುಸ್ಥಾಪನೆ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡುತ್ತಿರುವುದು ಸ್ವಾಗತಾರ್ಹ. ಆದರೆ, ಮುದ್ರಿತ ಆಹ್ವಾನ ಪತ್ರಿಕೆಯಲ್ಲಿ ಬಹಳಷ್ಟು ಶಿಷ್ಟಾಚಾರ ಉಲ್ಲಂಘನೆ ಮಾಡಲಾಗಿದೆ ಎಂದು ನಂಜನಗೂಡು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಇಂದಿಲ್ಲಿ ದೂರಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯಲ್ಲಿ ನಡೆಯುತ್ತಿರುವ ಕಾರ್ಯಕ್ರಮಕ್ಕೆ ಜಿಲ್ಲೆಯವರೇ ಆದ ವಿರೋಧ ಪಕ್ಷದ ನಾಯಕ ಸಿದ್ಧರಾಮಯ್ಯ ಅವರ ಹೆಸರನ್ನು ಆಹ್ವಾನ ಪತ್ರಿಕೆಯಲ್ಲಿ ಕೈಬಿಟ್ಟು ಶಿಷ್ಟಾಚಾರ ಉಲ್ಲಂಘನೆ ಮಾಡಲಾಗಿದೆ. ಈ ಲೋಪಕ್ಕೆ ಕಾರಣರಾದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಆಗಿರುವ ಲೋಪವನ್ನು ಸರಿಪಡಿಸಬೇಕು ಎಂದು ಅವರು ಒತ್ತಾಯಿಸಿದರು.

ಇದೇ ಕಾರ್ಯಕ್ರಮಕ್ಕೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಆಹ್ವಾನಿಸಲಾಗಿದ್ದು, ಇದಕ್ಕೆ ನಮ್ಮ ಆಕ್ಷೇಪವೇನೂ ಇಲ್ಲ ಹಾಗೆಯೇ ನುಗು ಏತ ನೀರಾವರಿ ಯೋಜನೆಗೆ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಸಚಿವ ಬೆಂಕಿ ಮಹದೇವು ಅವರ ಕಾಲದಲ್ಲೇ ಅಡಿಪಾಯ ಹಾಕಲಾಗಿತ್ತು. ನಂತರ 2016ರಲ್ಲಿ ಹುರ ಗ್ರಾಮಕ್ಕೆ ಬಂದಿದ್ದ ವೇಳೆ ಅಧಿಕಾರದಲ್ಲಿದ್ದ ಸಿದ್ದರಾಮಯ್ಯ ಅವರು ನುಗು ಏತ ನೀರಾವರಿ ಯೋಜನೆಗೆ ಚಾಲನೆ ನೀಡುವುದಾಗಿ ಪ್ರಕಟಿಸಿದರು. ಅಲ್ಲದೇ ಸಚಿವ ಸಂಪುಟ ಸಭೆಯಲ್ಲಿ ಇದಕ್ಕೆ ಅಂಗೀಕಾರವನ್ನೂ ಪಡೆದುಕೊಂಡು, 42 ಕೋಟಿ ರೂ. ಹಣವನ್ನು ಬಿಡುಗಡೆ ಮಾಡಿಸಿದ್ದರು. ಹೀಗಿರುವಾಗ ಆಹ್ವಾನ ಪತ್ರಿಕೆ ಯಲ್ಲಿ ಅವರ ಹೆಸರು ಮುದ್ರಣವಾಗಿಲ್ಲ. ಕಾರ್ಯಕ್ರಮಕ್ಕೆ ಅವರನ್ನು ಆಹ್ವಾನಿಸದೇ ಅವಮಾನಿಸಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಯೋಜನೆಗೆ ಈ ಹಿಂದೆಯೇ ಶಂಕುಸ್ಥಾಪನೆ ನೆರವೇರಿಸಲಾಗಿತ್ತಾದರೂ ಕಾವೇರಿ ನ್ಯಾಯಾಧೀಕರಣದಿಂದ ಆಕ್ಷೇಪ ಬಂದ ಕಾರಣ ಅನುಷ್ಠಾನಕ್ಕೆ ಚಾಲನೆ ಸಿಗದೆ ಸ್ಥಗಿತಗೊಂಡಿತ್ತು. ಯೋಜನೆಗೆ ಅಂದಿನ ಕಾಂಗ್ರೆಸ್ ಸರ್ಕಾರವೇ ಹಣ ಬಿಡುಗಡೆ ಮಾಡಿತ್ತು. ತಾಂತ್ರಿಕ ಕಾರಣದಿಂದಷ್ಟೇ ಅಡ್ಡಿಯಾಗಿತ್ತು. ಹೀಗಾಗಿ ಈ ಯೋಜನೆ ರೂಪುಗೊಳ್ಳಲು ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಸರ್ಕಾರವೇ ಕಾರಣ ಎಂದು ಹೇಳಿದರು.

ನಂತರ ಮಾತನಾಡಿದ ಮಹರ್ಷಿ ವಾಲ್ಮೀಕಿ ಸಮುದಾಯದ ಮುಖಂಡ, ಜಿಪಂ ಮಾಜಿ ಅಧ್ಯಕ್ಷ ಎಸ್.ಸಿ. ಬಸವರಾಜು, ನಂಜನಗೂಡಿನ ಸ್ವಲ್ಪ ಭಾಗ ವರುಣಾ ಕ್ಷೇತ್ರಕ್ಕೂ ಸೇರುತ್ತದೆ. ಆ ವೇಳೆ ವರುಣಾ ಕ್ಷೇತ್ರ ಪ್ರತಿನಿಧಿಸುತ್ತಿದ್ದ ಸಿದ್ದರಾಮಯ್ಯ ಅವರು ತಾಲೂಕಿನಲ್ಲಿ ವಾಲ್ಮೀಕಿ ಭವನ ನಿರ್ಮಾಣಕ್ಕೆ 3 ಕೋಟಿ ರೂ. ನೀಡಿದ್ದಾರೆ. ಜೊತೆಗೆ ಭವನ ನಿರ್ಮಾಣಕ್ಕೆ ಕಾರಣಕರ್ತರೂ ಆಗಿದ್ದಾರೆ. ಹೀಗಾಗಿ ಉದ್ಘಾಟನಾ ಸಮಾರಂಭಕ್ಕೆ ಅವರನ್ನೂ ಆಹ್ವಾನಿಸಬೇಕಿತ್ತು ಎಂದರು.

ನಂಜನಗೂಡಿನ ಗೌರಿಘಟ್ಟದಲ್ಲಿರುವ ಸಮುದಾಯ ಭವನ ಸಮುದಾಯಕ್ಕೆ ಸೇರಿದ ಆಸ್ತಿಯಾಗಿದೆ. ಸಮುದಾಯದವರು ಕೊಟ್ಟ ದೇಣಿಗೆ ಜೊತೆಗೆ ಎಲ್ಲಾ ಪಕ್ಷಗಳ ಹಲವಾರು ಜನಪ್ರತಿನಿಧಿಗಳು ನೀಡಿದ ಹಣದಿಂದ ಸಮುದಾಯ ಭವನದ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಹೀಗಾಗಿ ಉದ್ಘಾಟನೆ ವೇಳೆ ದೇಣಿಗೆ ನೀಡಿದ ಸಮುದಾಯದ ಮುಖಂಡರನ್ನು ಆಹ್ವಾನಿಸಿ, ಅವರನ್ನು ಸನ್ಮಾನಿಸುವ ಕಾರ್ಯ ನಡೆಯಬೇಕಿತ್ತು. ಆದರೆ ನ.28 ರಂದು ಸಮುದಾಯದ ಮುಖಂಡರನ್ನು ದೂರ ಇಟ್ಟು, ಇದನ್ನು ಏಕಪಕ್ಷೀಯವಾಗಿ ಉದ್ಘಾಟಿಸುವ ಕೆಲಸವನ್ನು ಶಾಸಕ ಬಿ.ಹರ್ಷವರ್ಧನ್ ಮಾಡಬಾರದು ಎಂದು ಆಗ್ರಹಿಸಿದರು.

ವರುಣಾ ಕ್ಷೇತ್ರದ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಅವರ ಹೆಸರನ್ನು ಸಹ ಆಹ್ವಾನಪತ್ರಿಕೆಯಲ್ಲಿ ನಗಣ್ಯ ಸ್ಥಾನದಲ್ಲಿ ಮುದ್ರಿಸಲಾಗಿದೆ ಎಂದು ಬಸವರಾಜು ಆಕ್ಷೇಪ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ಮುಖಂಡರಾದ ಮಹೇಶ್, ಶ್ರೀಕಂಠ ನಾಯಕ, ಶಂಕರೇಗೌಡ, ಹೆಡಿಯಾಲ ದೊರೆಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

ಪ್ರಯಾಣಿಕರ ತಂಗುದಾಣ ವಿವಾದ: ಬಿಜೆಪಿ ನಾಯಕರ ವರ್ತನೆಗೆ ಖಂಡನೆ



ಮೈಸೂರು, ನ.27– ಮೈಸೂರಿನ ಪ್ರಯಾಣಿಕರ ತಂಗುದಾಣವೊಂದರ ವಿಷಯವಾಗಿ ಬಿಜೆಪಿ ನಾಯಕರ ಹುಚ್ಚಾಟ ಖಂಡನಾರ್ಹ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದ್ದಾರೆ.

ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಅವರು, ನಮ್ಮ ಮೈಸೂರಿನ ಭವ್ಯ ಪರಂಪರೆಯ ಮಹತ್ವವನ್ನು ತಿಳಿಯದ ಬಿಜೆಪಿ ಸಂಸದರು ಮತ್ತು ಶಾಸಕರ ನಡೆ ಖಂಡನಾರ್ಹ. ಸಾರ್ವಜನಿಕರ ಹಣದಿಂದ ನಿರ್ಮಿಸಿರುವ ಬಸ್ ಶೆಲ್ಟರ್‌ಗಳ ಮೇಲಿನ ಗುಂಬಜ್ ಅನ್ನು ಒಡೆದು ಹಾಕುವ ಹುಚ್ಚಾಟ ನಡೆಸಿದ್ದಾರೆ. ಈ ಮೂಲಕ ತೆರಿಗೆ ಹಣವನ್ನು ಹಾಳು ಮಾಡುತ್ತಿದ್ದಾರೆ. ಈ ರೀತಿಯ ನಡವಳಿಕೆ ನಿಜಕ್ಕೂ ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಹಲವೆಡೆ ಗುಂಬಜ್ ಮಾದರಿಯುಳ್ಳ ಹಲವು ಬಸ್ ಶೆಲ್ಟರ್‌ಗಳಿದ್ದು, ಅವುಗಳ ವಿಶಿಷ್ಟ ವಿನ್ಯಾಸ ನಗರದ ಅಂದ ಹೆಚ್ಚಿಸುವಂತಿದೆ. ಇದರಿಂದ ಪ್ರವಾಸಿಗರಿಗೂ ಒಂದು ರೀತಿಯ ಪಾರಂಪರಿಕ ಭಾವನೆಯನ್ನು ಮೂಡಿಸುತ್ತದೆ. ಆದರೆ ಇದ್ಯಾವುದರ ಅರಿವಿಲ್ಲದ ಬಿಜೆಪಿ ನಾಯಕರು, ಸಾಮಾಜಿಕ ಜವಾಬ್ದಾರಿ ಮರೆತು ವರ್ತಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ಮೊಘಲರು, ಮೌರ್ಯರು, ಡಚ್ಚರು, ಫ್ರೆಂಚರು, ಪೋರ್ಚುಗೀಸರೂ, ಬ್ರಿಟಿಷರು ಹೀಗೆ ಯಾರೇ ಆಳಿದ್ದರೂ ಭಾರತ ಯಾವುದೋ ಒಂದು ಧರ್ಮದ ದೇಶವಾಗದೆ ವೈವಿಧ್ಯತೆಯಲ್ಲಿ ಏಕತೆಯನ್ನು ಉಳಿಸಿಕೊಂಡಿದೆ. ಆದರೆ ಬಿಜೆಪಿ ನಾಯಕರು ಚುನಾವಣಾ ಕಾಲದಲ್ಲಿ ಅನಗತ್ಯ ಗೊಂದಲ ಸೃಷ್ಟಿಸುವ ಮೂಲಕ ಅಭಿವೃದ್ಧಿಯ ವಿಷಯಗಳನ್ನು ಮರೆಮಾಚುವ ಯತ್ನ ನಡೆಸಿದ್ದಾರೆ. ಈಗಲಾದರೂ ಕೋಮು ಸೌಹಾರ್ದವನ್ನು ಹಾಳು ಮಾಡದಂತೆ ಬಿಜೆಪಿ ನಾಯಕರು ವರ್ತಿಸಬೇಕೆಂದು ಆಗ್ರಹಿಸಿದ್ದಾರೆ.

ಇಂದು ನಂಜನಗೂಡಿಗೆ ಮುಖ್ಯಮಂತ್ರಿ ಭೇಟಿ ಹಿನ್ನೆಲೆ ಭಾರೀ ವಾಹನಗಳ ಸಂಚಾರ ಮಾರ್ಗ ಬದಲಾವಣೆ

ಮೈಸೂರು, ನ.27– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೋಮವಾರ ನಂಜನಗೂಡಿನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ.



ಈ ಹಿನ್ನೆಲೆಯಲ್ಲಿ ಸುಗಮ ಸಂಚಾರದ ಸಲುವಾಗಿ ನಂಜನಗೂಡು ಪಟ್ಟಣ ಮಾರ್ಗವಾಗಿ ಸಂಚರಿಸುವ ಭಾರೀ ವಾಹನಗಳ ಸಂಚಾರ ಮಾರ್ಗವನ್ನು ಬೆಳಗ್ಗೆ 8ರಿಂದ ಮಧ್ಯಾಹ್ನ 2 ಗಂಟೆವರೆಗೂ ಬದಲಾವಣೆ ಮಾಡಲಾಗಿದೆ.

ಅದರಂತೆ ಚಾಮರಾಜನಗರ ಕಡೆಯಿಂದ ಮೈಸೂರಿಗೆ ಬರುವ ಬಸ್ಸು ಲಾರಿ ಸೇರಿದಂತೆ ಇತರೆ ಭಾರೀ ವಾಹನಗಳು ಗೋಳೂರು ಕ್ರಾಸ್ – ಟಿ.ನರಸೀಪುರ ರಸ್ತೆ– ಸುತ್ತೂರು– ಹೊಸಕೋಟೆ ಮಾರ್ಗದ ಮೂಲಕ ಮೈಸೂರಿಗೆ ತೆರಳಬಹುದು.

ಮೈಸೂರಿನಿಂದ ಚಾಮರಾಜನಗರಕ್ಕೆ ತೆರಳುವ ಬಸ್ಸು ಲಾರಿ ಇತರೆ ಭಾರೀ ವಾಹನಗಳು ಟಿ.ನರಸೀಪುರ–ಮೂಗೂರು–ಸಂತೆಮರಳ್ಳಿ ಮಾರ್ಗವಾಗಿ ಚಾಮರಾಜನಗರಕ್ಕೆ ಸಂಚರಿಸಬಹುದು. ಇನ್ನು ಉಳಿದಂತೆ ಬೈಕ್, ಕಾರಿನಂತಹ ಇತರ ಲಘು ವಾಹನಗಳು ದಿನನಿತ್ಯದ ಮಾರ್ಗದಲ್ಲೇ ಸಂಚರಿಸಬಹುದಾಗಿದ್ದು, ಸಾರ್ವಜನಿಕರು ಸಹಕರಿಸುವಂತೆ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗಂಡ : ಲೇ ನಿನಗೆ ಹಬ್ಬಕ್ಕೆ ಸೀರೆ ತರಲಾ, ಚೂಡಿದಾರ ತರಲಾ?
ಹೆಂಡತಿ : ನಿಮಗೆ ಒಗೆಯೋದಕ್ಕೆ ಯಾವುದು ಸುಲಭ ಅನ್ನುತ್ತೋ ಅದನ್ನೇ ತನ್ರೀ...!

ಮೈಸೂರು ಮಿತ್ರ
ಸೋಮವಾರ, 28 ನವೆಂಬರ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ತನಗೂ ಒಂದು ದಿನ ಸಾವಿದೆ ಎಂದು ಅರಿತವನು ಇನ್ನೊಬ್ಬರಿಗೆ ಎಂದೂ ತೊಂದರೆ ಕೊಡುವುದಿಲ್ಲ. – ಗೌತಮ ಬುದ್ಧ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಂಕೆ ಇಲ್ಲದ ಚತುರೆ ಲಗಾಮು ಇಲ್ಲದ ಕುದುರೆ

ನಿಮ್ಮ ಪತ್ರಗಳು

ಮಿತಿಮೀರಿದ ಆನ್‌ಲೈನ್ ವಂಚನೆ

ಮಾನ್ಯರೇ,



ಸುಲಭವಾಗಿ ಹಣ ಗಳಿಸುವ ವಾಂಛೆ ಮತ್ತು ತೃಷೆ ಉಳ್ಳವರನ್ನು ಗುರಿಯಾಗಿಸಿಕೊಂಡು ನೌಕರಿ ಆಮಿಷ, ಉಡುಗೊರೆ, ಮೊಬೈಲ್ ನಂಬರ್ ರೀಚಾರ್ಜ್ ಹೆಸರಿನಲ್ಲಿ ವಂಚನೆ, ಬ್ಯಾಂಕ್ ಅಧಿಕಾರಿಗಳ ಹೆಸರೇಳಿ ಎಟಿಎಂ ಕಾರ್ಡ್ ನಂಬರ್ ಪಡೆದು ವಂಚನೆ, ಸಾಲ, ಹೂಡಿಕೆಯ ಹೆಸರಿನಲ್ಲಿ ವಂಚನೆ, ಮನೆಯಿಂದಲೇ ಕೆಲಸ ಮಾಡಬಹುದು ಎಂದು ನಂಬಿಸಿ, ವಂಚಕರು ಮುಗ್ಧ ಜನರನ್ನು ವಂಚಿಸುತ್ತಿದ್ದಾರೆ. ಪೊಲೀಸ್ ಇಲಾಖೆಯು ಸೈಬರ್ ವಂಚನೆಗಳನ್ನು ತಡೆಗಟ್ಟುವ ಸಂಬಂಧ ಜನರಲ್ಲಿ ಜಾಗೃತಿ ಮೂಡಿಸಲು ವಿಫಲವಾಗಿದೆ ಕೆಲ ಯುವತಿಯರು, ವಿದ್ಯಾವಂತರಿಗೆ ಮನೆಯಿಂದಲೇ ಕೆಲಸ (ವರ್ಕ್ ಫ್ರಮ್ ಹೋಂ) ಮಾಡಬಹುದು, ಉತ್ತಮ ಆದಾಯ ಗಳಿಸಬಹುದು ಎಂದು ಕಾಲ್ ಮಾಡಿ ನಂಬಿಸಿ ಆನ್‌ಲೈನ್ ವಂಚಕರು ಲಕ್ಷಾಂತರ ರೂಪಾಯಿ ವಂಚಿಸುತ್ತಿದ್ದಾರೆ.

ಕೆಲವು ಪ್ರಕರಣಗಳಲ್ಲಿ ಅಸಹಾಯಕರು, ಬಡವರು ಸಹ ಈ ಆನ್‌ಲೈನ್ ವಂಚಕರ ಜಾಲಕ್ಕೆ ಬಿದ್ದು ಹಣ ಕಳೆದುಕೊಂಡಿದ್ದಾರೆ. ವಾಟ್ಸಾಪ್, ಎಸ್‌ಎಂಎಸ್‌ಗಳ ಮೂಲಕ ಬಂದ ಲಿಂಕ್‌ಗಳನ್ನು ಕ್ಲಿಕ್ ಮಾಡಿ ನೂರಾರು ಜನ ಹಣ ಕಳೆದುಕೊಂಡಿದ್ದಾರೆ. ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಿದರೆ ಒಳ್ಳೆಯದು. ಸೈಬರ್ ಅಪರಾಧಗಳಿಗೆ ಸಂಬಂಧಿಸಿದಂತೆ ಜನರೇ ಹೆಚ್ಚು ಜಾಗೃತರಾಗಬೇಕು ಎಂದು ಸೈಬರ್ ಪೊಲೀಸ್ ಹೇಳಿಕೆ ನೀಡಿ ಜಾರಿಕೊಂಡಿದೆ. ಮನೆಯಿಂದಲೇ ಕೆಲಸ ಮಾಡಬಹುದು, ಆದಾಯ ಗಳಿಸಬಹುದು ಎಂದು ಆಮಿಷವೊಡ್ಡಿ ಇತ್ತೀಚೆಗೆ ಅಮೆಜಾನ್, ಫ್ಲಿಪ್‌ಕಾರ್ಟ್ ಡಾಟ್ ಕಾಂ ಹೆಸರಿನಲ್ಲಿ ವಂಚನೆ ಹೆಚ್ಚಿದೆ. ಇನ್ನು ರಾಷ್ಟ್ರೀಯ ಹೆದ್ದಾರಿ ಭೂಸ್ವಾಧೀನ ಕಚೇರಿ ಸಿಬ್ಬಂದಿ ಎಂದು ಹೆಸರು ಹೇಳಿ ವಂಚಿಸಿದ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಉತ್ತರ ಭಾರತದ ರಾಜ್ಯಗಳಿಂದ ಕರೆ ಮಾಡಿ ಜಿಲ್ಲೆಯ ಜನರಿಗೆ ವಂಚಿಸಿರುವ ವಂಚಕರನ್ನು ಪತ್ತೆ ಮಾಡಲು ಪೊಲೀಸರು ಉತ್ತರ ಭಾರತದ ರಾಜ್ಯಗಳಿಗೆ ತೆರಳಿದಾಗ ವಂಚಕರ ಮಹಾ ಮೋಸಗಳು ಸಹ ಕಂಡಿವೆ. ವಂಚಕರ ಬ್ಯಾಂಕ್ ಖಾತೆಗಳು ಒಂದು ರಾಜ್ಯದಲ್ಲಿ ಇದ್ದರೆ, ಕರೆ ಮಾಡಿದ ಮೊಬೈಲ್ ಸಂಖ್ಯೆಯ ಆಧಾರ್ ಕಾರ್ಡ್ ಜಾಡು ಹಿಡಿದು ಹೊರಟರೆ ಅದು ಮತ್ತೊಂದು ರಾಜ್ಯವನ್ನು ತಲುಪುತ್ತದೆ! ಆಟೋ ಚಾಲಕರು, ಬೀದಿ ಬದಿ ವ್ಯಾಪಾರಿಗಳು ಹೀಗೆ ತೀರಾ ಬಡತನದ ಕುಟುಂಬಗಳ ಆಧಾರ್ ಕಾರ್ಡ್‌ಗಳನ್ನು ವಂಚಕರು ಸಿಮ್ ಕಾರ್ಡ್‌ಗಳನ್ನು ಪಡೆಯಲು ಬಳಸಿಕೊಳ್ಳುತ್ತಿದ್ದಾರೆ. ಸರಕಾರ ಮತ್ತು ಪೊಲೀಸ್ ಇಲಾಖೆ ಇದಕ್ಕೆಲ್ಲ ಸಾಮಾನ್ಯ ಜನರಿಗೆ ಅರಿವು ಮೂಡಿಸುವುದು ಅಗತ್ಯ.

– ವಿಜಯಕುಮಾರ್ ಎಚ್.ಕೆ, ರಾಯಚೂರು

ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನ ದೇವಾಲಯಕ್ಕೆ ರಸ್ತೆ ನಿರ್ಮಾಣವಾಗಲಿ

ಮಾನ್ಯರೆ,

ಈ ಪ್ರಕೃತಿ ಯಾವಾಗಲೂ ಅಚ್ಚರಿ ಮತ್ತು ಕೌತುಕವೇ ಸರಿ. ಹಾಗಾಗಿ ನಿಸರ್ಗಕ್ಕೆ ಎಂದೆಂದಿಗೂ ನಿಸರ್ಗವೇ ಸಾಟಿ. ಅದಕ್ಕೆ ಹೋಲಿಕೆ ಇಲ್ಲ ಹಾಗೆಯೇ ಪರ್ಯಾಯವೂ ಇಲ್ಲ. ಇಂತಹ ಪ್ರಕೃತಿಯ ಸಹಜ ಸಮೃದ್ಧ ಸೊಬಗನ್ನು ಅದರ ನೈಜ ಸೌಂದರ್ಯವನ್ನು ಸವಿಯಲು ನಮಗೆ ಬೆಟ್ಟಗುಡ್ಡಗಳನ್ನು ನಿಸರ್ಗವು ಸ್ವಾಭಾವಿಕವಾಗಿ ನಿರ್ಮಾಣ ಮಾಡಿದೆ ಸಹಜವಾದ ನಿಸರ್ಗ ನಿರ್ಮಿತ ಬೆಟ್ಟಗಳು ಮಳೆಯ ಮಾರುತಗಳನ್ನು ತಡೆದು ನೀರುಣಿಸಿ ಬೆಳೆಗಳನ್ನು ಫಲವತ್ತಾಗಿಸುತ್ತವೆ. ಇಂತಹ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಪಿರಿಯಾಪಟ್ಟಣದ ಬೆಟ್ಟದಪುರದ ಬೆಟ್ಟವೂ ಒಂದಾಗಿದೆ. ಇಲ್ಲಿ ಶ್ರೀ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ನೆಲೆಯಾಗಿರುವ ಶಿವನ ದೇವಾಲಯವಿದೆ. ಇಲ್ಲಿ ಶಿವನು ಗಿರಿಜೆಯೊಂದಿಗೆ ನೆಲೆಯಾದುದಕ್ಕೆ ಒಂದು ಐತಿಹಾಸಿಕ ಹಿನ್ನೆಲೆ ಇದೆ. ಇಂತಹ ಬೆಟ್ಟದಲ್ಲಿ ಇರುವ ಮಲ್ಲಿಕಾರ್ಜುನ ಶಿವನನ್ನು ಮಲೆರಾಯ, ಆತನ ಮಡದಿ ಪಾರ್ವತಿಯನ್ನು ಗಿರಿಜೆಯೆಂದು ಕರೆಯುವ ಪದ್ಧತಿ ಆಗಿನಿಂದಲೂ ನಡೆಯುತ್ತಾ ಬಂದಿದೆ. ಇಂತಹ ಐತಿಹ್ಯ ಇರುವ ಬೆಟ್ಟಕ್ಕೆ ಸುತ್ತಲಿನ ಜನರು ದೀಪಾವಳಿ ಹಬ್ಬದ ಸಂದರ್ಭದಲ್ಲಿ ಕುಟುಂಬ ಸಮೇತ ಬೆಟ್ಟವೇರಿ ಮಲ್ಲಿಕಾರ್ಜುನನ ದರ್ಶನ ಪಡೆಯುತ್ತಾರೆ. ಈ ಬೆಟ್ಟಕ್ಕೆ ದೀಪಾವಳಿ ಹಬ್ಬದಲ್ಲಿ ಎಲ್ಲರೂ ಅದರಲ್ಲೂ ಹೊಸದಾಗಿ ಮದುವೆಯಾದ ನೂತನ ಜೋಡಿ ಜೊತೆಜೊತೆಗೇ ಬೆಟ್ಟವನ್ನು ಮೆಟ್ಟಿಲು ಏರಿ ಹೋಗುವುದು ವಿಶೇಷ ಮತ್ತು ವಿಭಿನ್ನ.

ಇಷ್ಟೇ ಅಲ್ಲದೇ ಉತ್ಸಾಹದಿಂದ ಸುಮಾರು 6600 ಮೆಟ್ಟಿಲುಗಳ ಹತ್ತಿ ಇಳಿವ ಯುವಕರು–ವಯಸ್ಕರು ಬಟ್ಟೆಯಿಂದ ಸುತ್ತಿದ ಪಂಜಿನ ದೀವಟಿಗೆ ಬತ್ತಿ ಹಚ್ಚಿ ಪ್ರಾರ್ಥನೆ ಸಲ್ಲಿಸಿ ಸಂತೋಷ ಹೊಂದುವುದು ಸಂಸ್ಕೃತಿಯ ನೆಲೆಗೆ ಸಾಕ್ಷಿ ಎನಿಸಿದೆ.

ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ರಸ್ತೆ ಸಾರಿಗೆ ಸಂಪರ್ಕ ಕಲ್ಪಿಸಿರುವಂತೆ ಬೆಟ್ಟದಪುರದ ಶ್ರೀ ಸಿಡಿಲು ಮಲ್ಲಿಕಾರ್ಜುನ ದೇವಾಲಯಕ್ಕೆ ರಸ್ತೆ ನಿರ್ಮಾಣ ಮಾಡಿದರೆ ಎಷ್ಟೋ ಭಕ್ತರಿಗೆ, ಚಾರಣಪ್ರಿಯರಿಗೆ ಅನುಕೂಲವಾಗಬಹುದು. ಜತೆಗೆ ಪ್ರವಾಸೋದ್ಯಮವೂ ಸಹ ಅಭಿವೃದ್ಧಿಯಾಗಬಹುದು. ಈ ನಿಟ್ಟಿನಲ್ಲಿ ಮೈಸೂರು ಮತ್ತು ಕೊಡಗು ಸಂಸದರು, ಪಿರಿಯಾಪಟ್ಟಣದ ವಿಧಾನಸಭಾ ಶಾಸಕರು, ಹಿಂದೂ ದೇವಾಲಯಗಳ ಧಾರ್ಮಿಕ ಮತ್ತು ದತ್ತಿ ಇಲಾಖೆ, ಕರ್ನಾಟಕ ಪ್ರವಾಸೋದ್ಯಮ ಇಲಾಖೆ, ಜಿಲ್ಲಾಡಳಿತ, ತಾಲೂಕಿನ ಆಡಳಿತ, ಸ್ಥಳೀಯ ಜನಪ್ರತಿನಿಧಿಗಳು ಕಾರ್ಯೋನ್ಮುಖರಾದರೆ ಈ ಕೆಲಸ ಅಸಾಧ್ಯವಲ್ಲ ಎಂಬುದು ನನ್ನ ಅಭಿಪ್ರಾಯ.

– ಎ.ಎಸ್. ಗೋವಿಂದೇಗೌಡ, ಅರೇನಹಳ್ಳಿ ಗ್ರಾಮ, ಪಿರಿಯಾಪಟ್ಟಣ ತಾ.

ಪೊಲೀಸ್ ಪಾಯಿಂಟ್ ಬುಕ್ ಹಾಕುವಂತೆ ಮನವಿ

ಮಾನ್ಯರೆ,

ಮೈಸೂರಿನ ರಾಮಕೃಷ್ಣನಗರದಲ್ಲಿನ ತಪೋವನ ಸಾಲೆಸ್ ಅಪಾರ್ಟ್ ಮೆಂಟ್ ನಿವಾಸಿಗಳಾದ ನಾವೆಲ್ಲರೂ 65 ವರ್ಷ ಮೇಲ್ಪಟ್ಟವರೇ ಆಗಿದ್ದು, ನಿವೃತ್ತಿ ಜೀವನ ನಡೆಸುತ್ತಿರುವ ನಮಗೆ ಸ್ವಯಂ ನಿರ್ವಹಣೆ ಸಾಧ್ಯವಾಗದೇ ಇರುವ ಕಾರಣ ಈ ಸಾಂತ್ವನ ಕೇಂದ್ರದಲ್ಲಿ ಆಶ್ರಯ ಪಡೆದಿದ್ದೇವೆ. ಹೀಗೆ ನೂರಾರು ಸಂಖ್ಯೆಯಲ್ಲಿ ನೆಲೆಸಿದ್ದೇವೆ. ಈ ಇಳಿವಯಸ್ಸಿನಲ್ಲಿ ನಮಗೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು ನಾವೇ ಕಲ್ಪಿಸಿಕೊಂಡಿದ್ದೇವೆ.

ಆದರೆ ರಾತ್ರಿ ವೇಳೆ ಅನಧಿಕೃತ ವ್ಯಕ್ತಿಗಳು ನಮ್ಮ ಅಪಾರ್ಟ್‌ಮೆಂಟ್ ಬಳಿ ಬಂದು ಅನಗತ್ಯವಾಗಿ ಸದ್ದು ಮಾಡುವುದು, ಏರು ಧನಿಯಲ್ಲಿ ವಾಗ್ವಾದ ನಡೆಸುವುದು, ಕೆಲವೊಮ್ಮೆ ಕಲ್ಲು ತೂರುವುದು, ನಮ್ಮ ಸೆಕ್ಯೂರಿಟಿಯವರ ಮೇಲೆಯೇ ಹರಿಹಾಯ್ದು ಭಯಭೀತ ವಾತಾವರಣ ಸೃಷ್ಟಿಸುವಂತಹ ಪ್ರಸಂಗಗಳು ಇತ್ತೀಚೆಗೆ ಆಗಾಗ ನಡೆಯುತ್ತಿವೆ.

ಆದ ಕಾರಣ ನಮ್ಮ ಅಪಾರ್ಟ್‌ಮೆಂಟ್‌ನ ನಿಮಗೆ ಸೂಕ್ತವೆನಿಸಿದ ಸ್ಥಳದಲ್ಲಿ ಪೊಲೀಸ್ ಪಾಯಿಂಟ್ ಬುಕ್ ಹಾಕಿ, ಪ್ರತಿ ದಿನ ರಾತ್ರಿ ಬೀಟ್ ಪೊಲೀಸರು ಅದಕ್ಕೆ ಸಹಿ ಮಾಡುವಂತಹ ವ್ಯವಸ್ಥೆ ಮಾಡಿದರೆ ನಮಗೆ ಮಾನಸಿಕ ಸ್ಥೈರ್ಯ ತುಂಬಿದಂತಾಗುತ್ತದೆ. ನಮ್ಮ ಮನವಿಗೆ ಆದಷ್ಟು ಶೀಘ್ರ ಪರಿಹಾರ ಕಲ್ಪಿಸುವ ವಿಶ್ವಾಸ ಹೊಂದಿದ್ದೇವೆ.

– ತಪೋವನ ಸಾಲೆಸ್ ಅಪಾರ್ಟ್‌ಮೆಂಟ್ ನಿವಾಸಿಗಳು

ಈಗಿನ ಮಕ್ಕಳ ಹೇಗೆ ನಡೆಸಿಕೊಳ್ಳುವುದು ನೀವೇ ಹೇಳಿ...!



ಇತ್ತೀಚೆಗೆ ಪತ್ರಿಕೆ ತಿರುವುತ್ತಿದ್ದೆ.. ಶಾಲೆಯ ವಿದ್ಯಾರ್ಥಿನಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡಿದ್ದಳು. ಕಾರಣ ಪರೀಕ್ಷೆಯಲ್ಲಿ ಚೀಟಿ ಇಟ್ಟಿದ್ದಳೆಂದು ಕ್ಲಾಸ್ ಟೀಚರ್ ಬೈದಿದ್ದರು. ಅವಮಾನ ತಾಳಲಾರದೆ ಮನೆಯಲ್ಲಿ ನೇಣುಬಿಗಿದುಕೊಂಡಿದ್ದಳು.ಪೋಷಕರು ಮತ್ತು ಊರವರು ಶಾಲೆಯ ಮುಂದೆ ವಿದ್ಯಾರ್ಥಿನಿಯ ಶವ ಇಟ್ಟು ಧರಣಿ ಕೂತಿದ್ದರು. ಅವರ ಬೇಡಿಕೆ ಸ್ಪಷ್ಟ "ಹುಡುಗಿಯ ಸಾವಿಗೆ ಟೀಚರೇ ಕಾರಣ, ಅವರನ್ನು ನಮ್ಮ ಕೈಗೆ ಕೊಡಿ" ಬಹುಶಃ ಕೈಗೆ ಸಿಕ್ಕರೆ ಮಗುವಿನೊಂದಿಗೆ ಟೀಚರನ್ನೂ ಸಮಾಧಿ ಮಾಡುವ ಯೋಚನೆ ಇರಬಹುದು.

ಸ್ವಲ್ಪ ದಿನದ ಮುಂಚೆ ಇದೇ ರೀತಿಯ ಪ್ರಸಂಗ ನಡೆದಿತ್ತು. ಪರೀಕ್ಷೆಯಲ್ಲಿ ಚೀಟಿ ಇಟ್ಟು ಸಿಕ್ಕಿಬಿದ್ದ ಹುಡುಗನೊಬ್ಬನನ್ನು ಶಿಕ್ಷಕಿ ಹೊರಗೆ ನಿಲ್ಲುವಂತೆ ಸೂಚಿಸಿದ್ದರು. ಹುಡುಗ ನೇರ ಅಪಾರ್ಟ್‌ಮೆಂಟ್‌ಗೆ ತೆರಳಿ, ಕಟ್ಟಡದ ಮೇಲಿಂದ ಧುಮುಕಿ ಆತ್ಮಹತ್ಯೆ ಮಾಡಿಕೊಂಡಿದ್ದ. ಕಾರಣ ಆತನಿಗೆ ಅದು ಸಹಿಸಲಾರದ ಅವಮಾನವಾಗಿತ್ತು. ಪೋಷಕರು ರೊಚ್ಚಿಗೆದ್ದು ಶಿಕ್ಷಕಿ ಮೇಲೆ ಕೇಸು ದಾಖಲಿಸಿದ್ದರು. ಈ ಎರಡೂ ಪ್ರಕರಣದಲ್ಲಿ ವಿದ್ಯಾರ್ಥಿಗಳು ಹತ್ತನೇ ತರಗತಿ ಕಲಿಯುತ್ತಿದ್ದರು..

ಈ ಮೇಲಿನ ಎರಡು ಘಟನೆಗಳಲ್ಲದೆ ಇನ್ನೂ ನೂರಾರು ಘಟನೆಗಳು ನಮ್ಮ ಮುಂದಿವೆ. ಏಳನೇ ತರಗತಿ ವಿದ್ಯಾರ್ಥಿಯೊಬ್ಬ ಅಪ್ಪ ಬೈದ ಕಾರಣಕ್ಕಾಗಿ ಅವಮಾನಗೊಂಡು ಆತ್ಮಹತ್ಯೆ ಮಾಡಿಕೊಂಡದ್ದು ಅದರಲ್ಲೊಂದು. ಅಮ್ಮ ಮೊಬೈಲ್ ಮುಟ್ಟಬೇಡ, ಓದು ಎಂದು ಹೇಳಿದ ತಕ್ಷಣ ಮಗಳು ಮೊಬೈಲ್ ಬದಿಗಿಟ್ಟು, ಮೈಕೊಡವಿ ರೂಮಿನೊಳಗೆ ತೆರಳುತ್ತಾಳೆ. ಬಹಳ ಹೊತ್ತು ಹೊರಗೆ ಬರದಿದ್ದಾಗ, ಬಾಗಿಲು ತೆಗೆದು ಒಳಗಡೆ ನೋಡಿದರೆ ಮಗಳು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾಳೆ. ಅಧಿಕೃತ ವರದಿಯ ಪ್ರಕಾರ ಪ್ರತಿ 55 ನಿಮಿಷಕ್ಕೆ ಒಬ್ಬ ವಿದ್ಯಾರ್ಥಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಆತ್ಮಹತ್ಯೆ ಪ್ರಕರಣ ಕಳೆದ ವರ್ಷ ಶೇಕಡಾ 7ರಷ್ಟು ಹೆಚ್ಚಾಗಿರುವುದು ಪ್ರಜ್ಞಾವಂತ ಸಮಾಜವನ್ನು ಕಳವಳಕ್ಕೀಡು ಮಾಡಿದೆ..

ಅಭಿಮನ್ಯು ತನ್ನ ಹದಿಮೂರನೇ ವಯಸ್ಸಿನಲ್ಲಿ ಚಕ್ರವ್ಯೂಹಕ್ಕೆ ನುಗ್ಗಿದ ಬಗ್ಗೆ ಓದಿದ್ದೇವೆ. ಚಿಕ್ಕ ವಯಸ್ಸಿನಲ್ಲೇ ಆತನಲ್ಲಿ ಅಷ್ಟೊಂದು ಪ್ರಬುದ್ಧತೆ ಇತ್ತು. ರಾಮ ಲಕ್ಷ್ಮಣರು ವಿದ್ಯೆ ಅರಸಿ ಅರಮನೆ ತೊರೆದು ಕಾಡಿಗೆ ಹೋಗುವಾಗ ಇನ್ನೂ ಚಿಕ್ಕ ವಯಸ್ಸಿನವರೇ ಆಗಿದ್ದರು. ಅಷ್ಟೇಕೇ ಖ್ಯಾತ ವಿಜ್ಞಾನಿ ಐನ್‌ಸ್ಟೈನ್ ತನ್ನ ಹದಿನೈದನೇ ವಯಸ್ಸಿಗೆ ಪ್ರಸಿದ್ಧಿ ಪಡೆದಿದ್ದ. ಇನ್ನು ಸ್ವಾತಂತ್ರ್ಯ ಹೋರಾಟವನ್ನೇ ಗಮನಿಸಿದರೂ ಹದಿಹರೆಯದ ಅದೆಷ್ಟೋ ಹೋರಾಟಗಾರರು ನಮ್ಮ ಚರಿತ್ರೆಯ ಪುಟ ತುಂಬಿದ್ದಾರೆ. ಹಾಗಾದರೆ ಈಗಿನ ಮಕ್ಕಳ ಅವಸ್ಥೆಗೆ ಕಾರಣವೇನು ಎಂದು ಯೋಚಿಸುವ ಪ್ರಯತ್ನ ಮಾಡಬೇಡವೇ.?

ಹಿಂದೆ ನಾವು ಶಾಲೆಗೆ ಹೋಗುತ್ತಿದ್ದ ಕಾಲ ನೆನಪಾಗುತ್ತಿದೆ. ಸ್ವಲ್ಪ ಎಡವಟ್ಟಾದರೂ ಬಾಸುಂಡೆ ಬರುವಂತೆ ಮನೆಯಲ್ಲಿ ಅಪ್ಪನ ಪೆಟ್ಟು, ಕಡೆಗೆ ರಾತ್ರಿ ಅಮ್ಮ ಅಪ್ಪನಿಗೆ ಕದ್ದು ಎಣ್ಣೆ ಹಚ್ಚಿದ್ದೂ ಇದೆ. ಶಾಲೆಗೆ ಹೋದರೆ ಮೇಸ್ಟ್ರ ಭಯ. ಸ್ವಲ್ಪ ತಪ್ಪಾದರೂ ಬೀಳುತ್ತಿದ್ದ ಛಡಿಯೇಟು. ಮನೆಗೆ ದೂರು ತಂದರೆ ಮನೆಯಲ್ಲಿ ಮತ್ತೆ ಪೆಟ್ಟು, ಹಾಗಾಗಿ ಶಾಲೆಯ ವಿಚಾರ ಮನೆಗೆ ಬರುತ್ತಾನೇ ಇರಲಿಲ್ಲ. ಕೆಲವೊಮ್ಮೆ ಮಕ್ಕಳನ್ನು ಹೆದರಿಸಲು, "ನಿನ್ನ ಮೇಸ್ಟರಿಗೆ ಹೇಳುತ್ತೇನೆ" ಎಂದು ಹೆದರಿಸಿ ಬಾಯಿ ಮುಚ್ಚಿಸಿದ್ದೂ ಇದೆ. ಆಶ್ಚರ್ಯವೆಂದರೆ ಅಂತಹ ಪರಿಸ್ಥಿತಿಯಲ್ಲೇ ಬೆಳೆದುಬಂದ ಅನೇಕ ಮಹನೀಯರು ನಮ್ಮ ಮುಂದಿದ್ದಾರೆ.. ಜ್ಯೋತಿ ಭಾಫುಲೆ, ಡಾ. ಬಿ. ಆರ್. ಅಂಬೇಡ್ಕರ್, ವಿಶ್ವೇಶ್ವರಯ್ಯ, ಸಿ.ವಿ.ರಾಮನ್, ಗಾಂಧೀಜಿ, ಅಬ್ದುಲ್ ಕಲಾಂ.. ಹೀಗೇ ಇವರೆಲ್ಲಾ ಹಿಂದಿನ ಪದ್ಧತಿಯಲ್ಲೇ ಬೆಳೆದು ಖ್ಯಾತಿ ಪಡೆದವರು..

> **‘Platform Hero ಮತ್ತು Heroine ಗಳಾದ ನಮ್ಮ ಮಕ್ಕಳು Practically Zero ಗಳಾಗುತ್ತಿದ್ದಾರೆ. Mentally strong ಆಗಬೇಕಿತ್ತು, ಆದರೆ Strongly mental ಆಗುತ್ತಿದ್ದಾರೆ.’**

ಇತ್ತೀಚೆಗೆ ಮಕ್ಕಳ ಮೇಲಿನ ಮಮತೆ ಬಹಳನೇ ಅತಿರೇಕವಾಗಿದೆ. ಮಕ್ಕಳು ಕೇಳಿದರೆ ಚಂದ್ರನನ್ನೂ ತರಲು ಚಂದ್ರಯಾನಕ್ಕೂ ತಯಾರಿದ್ದೇವೆ. ಎಳೆ ಮಗು ಅತ್ತಾಗ ಮೊಬೈಲ್ ಕೈಗಿಟ್ಟು ಸಮಾಧಾನಪಡಿಸಲಾಗುತ್ತಿದೆ..

ಮನೆಯಲ್ಲಿರುವ ನಾಲ್ಕು ಮಂದಿ ನಾಲ್ಕು ದಿಕ್ಕಿಗೆ ಮುಖಹಾಕಿ ಮೊಬೈಲ್‌ನಲ್ಲಿ ಬ್ಯುಸಿಯಾಗಿರುವ ಚಿತ್ರಣ ಬಹುತೇಕ ಮನೆಯದ್ದು. ಮನೆಯ ಯಾವ ಕೆಲಸವೂ ಮಕ್ಕಳಲ್ಲಿ ಮಾಡಿಸಲಾರೆವು. ಏಕೆಂದರೆ ಅವರು ಓದಬೇಕು. ಪದವಿ ಪಡೆದ ಮಗಳಿಗೆ ಚಹಾ ಪುಡಿ ಮತ್ತು ಸಾಸಿವೆ ಇಲ್ಲವೇ ಸಕ್ಕರೆ ಮತ್ತು ಉಪ್ಪಿನ ನಡುವಿನ ವ್ಯತ್ಯಾಸ ಗೊತ್ತಿಲ್ಲವಾಗಿದೆ.!

‘Platform Hero ಮತ್ತು Heroine ಗಳಾದ ನಮ್ಮ ಮಕ್ಕಳು Practically Zero ಗಳಾಗುತ್ತಿದ್ದಾರೆ. Mentally strong ಆಗಬೇಕಿತ್ತು, ಆದರೆ Strongly mental ಆಗುತ್ತಿದ್ದಾರೆ.’

ಇವತ್ತು ಮಕ್ಕಳಲ್ಲಿ ತರಗತಿ ಕೋಣೆ ಗುಡಿಸಲು ಹೇಳಿದರೆ ಅಪರಾಧ, ಕಸ ಹೆಕ್ಕಿಸಿದರೆ ಅಪರಾಧ, ಶುಚಿಗೊಳಿಸಿದರೆ ಅಪರಾಧ..... ಹೀಗೇ ಅಪರಾಧಗಳ ಪಟ್ಟಿಯೇ ಬೆಳೆಯುತ್ತದೆ. ಹಾಗಾದರೆ ಮಕ್ಕಳಲ್ಲಿ ಮಾಡಿಸೋ ಕೆಲಸ ಯಾವುದು?.... ಇಂದಿನ ಪರಿಸ್ಥಿತಿ ಅವಲೋಕಿಸಿದರೆ ಅತ್ಯಂತ ಕ್ಲಿಷ್ಟಕರವಾದ ವೃತ್ತಿಯೆಂದರೆ ಶಿಕ್ಷಕ ವೃತ್ತಿಯಾಗಿದೆ. ಹಲವಾರು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಡಿಯಿಂದ ಮುಡಿಯವರೆಗೆ ಅವ್ಯವಹಾರ,ನಕಲು ನಡೆಯಲು ಕಾರಣವೇನು?.... ಅದು ಶಾಲೆಯ ಪರೀಕ್ಷೆಯಲ್ಲಿ ಚೀಟಿ ಇಟ್ಟು ಬರೆದ ಪ್ರತಿಫಲನವಾಗಿರಬಹುದಲ್ಲವೇ?

ಪರೀಕ್ಷೆಯಲ್ಲಿ ಚೀಟಿ ಇಟ್ಟರೂ ಶಿಕ್ಷಕರು ಮೌನವಾಗಿರಬೇಕೆಂದು ಸಮಾಜದ ನಿರೀಕ್ಷೆಯೇ?.... ಹಾಗಾದರೆ ಪರೀಕ್ಷೆಯೆಂಬ ನಾಟಕವೇಕೆ?.... ಹೋಮ್ ವರ್ಕ್ ಕೊಡದಿದ್ದರೆ ಮೇಲಾಧಿಕಾರಿಯಿಂದ ತರಾಟೆ. ಹೋಂ ವರ್ಕ್ ಮಾಡಿದ ಬಗ್ಗೆ ವಿಚಾರಿಸಿದರೆ ಮಕ್ಕಳಿಗೆ ಅವಮಾನ. ಪರೀಕ್ಷೆಯಲ್ಲಿ ಅಂಕ ಕಡಿಮೆ ಬಂದರೆ ಶಿಕ್ಷಕರು ಅಪರಾಧಿಗಳು, ಮಾರ್ಕ್ ಹೆಚ್ಚು ಬರಲು ಪ್ರಯತ್ನಿಸಿದರೆ ಮಕ್ಕಳಿಗೆ ಒತ್ತಡ..... ಹೀಗೇ ಮಕ್ಕಳಿಗೆ ರಕ್ಷಣೆ ನೀಡುವ ವಿಪರೀತ ಪ್ರಯತ್ನ ಮಕ್ಕಳ ಒತ್ತಡ ನಿರೋಧಕ ಶಕ್ತಿಯನ್ನೇ ಕಸಿದುಕೊಂಡಿಲ್ಲವೇ..?

ಮಕ್ಕಳಲ್ಲಿ ನಿದ್ರಾಹೀನತೆ ಇಂದು ಅಸಹಿಷ್ಣುತೆಗೆ ಬಹುಮುಖ್ಯ ಕಾರಣಗಳಲ್ಲಿ ಒಂದು. ಖಿನ್ನತೆ, ಅತಿಯಾದ ಮೊಬೈಲ್ ಬಳಕೆಗಳಲ್ಲದೆ ಮಾದಕ ವಸ್ತುಗಳು ಮಕ್ಕಳ ಮನಸ್ಸನ್ನು ಕದಡುತ್ತಿದೆ. ಇಂದು ಶಿಕ್ಷಕರು ಅಸಹಾಯಕರಾಗಿದ್ದಾರೆಂದರೆ ತಪ್ಪಾಗದು. ಮಕ್ಕಳನ್ನು ಯಾವ ಬಗೆಯಲ್ಲಿ ನಿರ್ವಹಿಸಬೇಕೆಂಬುವುದೇ ಯಕ್ಷಪ್ರಶ್ನೆ. ಹೇಗಿರಬೇಕೆಂದು ಹೇಳುವುದಕ್ಕೂ, ಅದನ್ನು ಕಾರ್ಯರೂಪಕ್ಕೆ ತರುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ತರಗತಿಯಲ್ಲಿ ಮಕ್ಕಳನ್ನು ವಿಚಾರಿಸಿದಾಗ ನಾಲ್ಕು ಮಂದಿಯಲ್ಲಿ ಮೊಬೈಲ್ ಪತ್ತೆಯಾಯಿತು. ಮೊಬೈಲ್ ತೆಗೆದು ಒಳಗಿಟ್ಟೆವು. ಆದರೆ ರಾತ್ರಿಪೂರ್ತಿ ನಿದ್ರೆಯಿಲ್ಲ. ಮಕ್ಕಳು ಏನಾದರೂ ಅನಾಹುತ ಮಾಡಿಕೊಂಡರೆ..! ಮರುದಿನ ಗೌರವದಿಂದ ಅವುಗಳನ್ನು ಕೊಟ್ಟು ಕಳಿಸಿದೆವು. ಏಕೆಂದರೆ ನಾವು ಬದುಕಬೇಕಿತ್ತು..

ಇಂತಹದ್ದೇ ಇನ್ನೊಂದು ಪ್ರಸಂಗ ನೆನಪಾಗುತ್ತಿದೆ. ಹುಡುಗನೊಬ್ಬ ಶಾಲೆಗೆ ಆಗಾಗ ತಪ್ಪಿಸುತ್ತಿದ್ದ. ಪೋಷಕರ ಗಮನಕ್ಕೆ ತಂದಿದ್ದೆ. ಅಂದು ಆತ ಶಾಲೆಗೆ ಬಂದಿರಲಿಲ್ಲ. ಸಂಜೆ ಅಪ್ಪನಿಂದ ಫೋನಿನಲ್ಲಿ ಮಗನ ಬಗ್ಗೆ ವಿಚಾರಿಸಿದರು. ಮಗ ಶಾಲೆಗೆ ಬಂದಿಲ್ಲ ಅಂದೆ. ಆಗ ಮೊಬೈಲ್ ಮಗನ ಕೈಗೆ ಕೊಟ್ಟರು. " ಸರ್, ನೀವ್ಯಾಕೆ ಸುಳ್ಳು ಹೇಳೋದು, ನಾನು ಕ್ಲಾಸಲ್ಲೇ ಕುಳಿತಿದ್ದೆ. ನೀವೇ ಇವತ್ತು ಶಾಲೆಗೆ ಬಂದಿಲ್ಲ." ಅನ್ನಬೇಕೆ. ನನಗೆ ಶಾಕ್. "ಎಲ್ಲಿ ಮಾರಾಯಾ, ನಾನು ಎಂಟುಗಂಟೆಗೆ ಶಾಲೆಯಲ್ಲಿದ್ದೆ. ನಿನ್ನ ಕ್ಲಾಸಿಗೆ ಎರಡು ಅವಧಿ ಪಾಠ ಮಾಡಿದ್ದೆ" ಅಂದಾಗ..! "ಸರ್, ನೀವು ಈ ರೀತಿ ಸುಳ್ಳು ಯಾಕೆ ಹೇಳುತ್ತೀರಿ? ಮಾಸ್ಟ್ರಾಗಿ ನೀವು ಸುಳ್ಳು ಹೇಳಬಹುದಾ?" ಎಂದು ಕೇಳಿದಾಗ ನಾನು ತತ್ತರಿಸಿದ್ದೆ. ಕರೆ ಕಟ್ ಮಾಡಿ ಒಂದಿಬ್ಬರು ವಿದ್ಯಾರ್ಥಿಗಳಲ್ಲಿ ವಿಚಾರಿಸಿದೆ. ಶಿಕ್ಷಕರಲ್ಲೂ ವಿಚಾರಿಸಿದೆ. ಆತ ಶಾಲೆಗೆ ಬಂದಿಲ್ಲ ಎಂಬುವುದನ್ನು ದೃಢಪಡಿಸಿದೆ. ಮತ್ತೆ ಕಾಲ್ ಮಾಡಿದೆ. ತೆಗೆದದ್ದು ಅಪ್ಪ. ಅಪ್ಪನಿಗೆ ನನ್ನ ಮಾತಲ್ಲಿ ನಂಬಿಕೆ ಬರಲೇ ಇಲ್ಲ. "ನನ್ನ ಮಗ ಯಾಕೆ ಸುಳ್ಳು ಹೇಳುತ್ತಾನೆ.?" ಎಂದು ನನ್ನನ್ನೇ ಪ್ರಶ್ನಿಸಬೇಕೇ.?*

ಇಂತಹದ್ದೇ ಇನ್ನೊಂದು ಪ್ರಸಂಗದಲ್ಲಿ ವಿದ್ಯಾರ್ಥಿನಿಯ ತಾಯಿಯೊಬ್ಬರು " ನನ್ನ ಮಗಳು ಈ ತನಕ ಸುಳ್ಳು ಹೇಳಿಲ್ಲ, ಮುಂದೇನು ಹೇಳಲ್ಲ" ಎಂದು ನನ್ನ ಮೇಲೆ ರೇಗಿದ್ದರು..

ನಾವೆಲ್ಲಾ ಈ ನಿಟ್ಟಿನಲ್ಲಿ ಮತ್ತೊಮ್ಮೆ ಯೋಚಿಸುವ ಅಗತ್ಯವಿದೆ. ಇಲ್ಲವಾದಲ್ಲಿ ಕೆಲವೇ ವರ್ಷಗಳಲ್ಲಿ ತೀರಾ ಹದಗೆಟ್ಟ ಪರಿಸ್ಥಿತಿ ನಮ್ಮದಾಗಬಹುದು. ಸರಿಪಡಿಸಲಾರದ ಸ್ಥಿತಿಗೆ ತಲುಪಿದ ಪಶ್ಚಾತ್ತಾಪವೊಂದೇ ನಮ್ಮ ಮುಂದೆ ಉಳಿದ ದಾರಿಯಾಗಬಹುದು..!

–ರಾಹುಲ್ ದೇವ್ ಎಸ್., ಉಪನ್ಯಾಸಕರು

ಶಿಕ್ಷಕರು ನೀನು ಸುಳ್ಳುಗಾರ್ತಿ ಎಂದಿದ್ದಕ್ಕೆ ಮಹಡಿಯಿಂದ ಜಿಗಿದ ವಿದ್ಯಾರ್ಥಿನಿ

ಚೆನ್ನೈ: ಶಿಕ್ಷಕರೊಬ್ಬರು ವಿದ್ಯಾರ್ಥಿನಿಯನ್ನು ಸುಳ್ಳುಗಾರ್ತಿ ಎಂದಿದ್ದಕ್ಕೆ ಮನನೊಂದು ಆಕೆ ಸರ್ಕಾರಿ ಶಾಲೆಯ ಮೊದಲ ಮಹಡಿಯಿಂದ ಜಿಗಿದ ಘಟನೆ ತಮಿಳುನಾಡಿನ ಕರೂರ್‌ನಲ್ಲಿ ನಡೆದಿದೆ.

ಘಟನೆಯ ನಂತರ 10ನೇ ತರಗತಿಯ ವಿದ್ಯಾರ್ಥಿನಿಯನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆಗೆ ಸಂಬಂಧಿಸಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದು, ವಿದ್ಯಾರ್ಥಿನಿ ಎಡವಿ ಬಿದ್ದಿದ್ದಾಳೆಯೇ ಎಂದು ಖಚಿತಪಡಿಸಿಕೊಳ್ಳಲು ತನಿಖೆ ನಡೆಸಿದ್ದಾರೆ. ಈ ವೇಳೆ ಆ ವಿದ್ಯಾರ್ಥಿನಿ ಏನಾಯಿತು ಎಂದು ವಿವರಿಸಿದ ವೀಡಿಯೋ ವೈರಲ್ ಆಗಿದೆ.

ವೀಡಿಯೋದಲ್ಲಿ ಏನಿದೆ: ನಮ್ಮ ಶಾಲೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿತ್ತು. ಈ ಹಿನ್ನೆಲೆಯಲ್ಲಿ ಓರ್ವ ಹುಡುಗಿ ಬಂದು ಆಕೆಯ ಮೊಬೈಲ್‌ನಲ್ಲಿ ಕಾರ್ಯಕ್ರಮದ ವೀಡಿಯೋವನ್ನು ತೆಗೆದುಕೊಡಲು ಹೇಳಿದಳು. ಮೊದಲು ನಾನು ಒಪ್ಪಿರಲಿಲ್ಲ. ಈ ಹಿನ್ನೆಲೆಯಲ್ಲಿ ಆಕೆ ಮೊಬೈಲ್‌ನ್ನು ಬೇರೆಯವರಿಗೆ ರವಾನಿಸಲು ತಿಳಿಸಿದಳು. ಆದರೆ ಆ ವ್ಯಕ್ತಿ ದೂರದಲ್ಲಿದ್ದ ಕಾರಣ ನಾನೇ ಕಾರ್ಯಕ್ರಮದ ವೀಡಿಯೋವನ್ನು ಮಾಡುವ ಪರಿಸ್ಥಿತಿ ಬಂತು. ಹಾಗೆ ಮಾಡಿದ್ದಕ್ಕೆ ಟೀಚರ್ ನನ್ನನ್ನು ಗದರಿಸಿದ್ದರು.

ಆಗ ನಾನು ನಡೆದ ವಿಷಯ ತಿಳಿಸಿದರೂ ಅವರು ನನ್ನ ಮಾತನ್ನು ನಂಬಲಿಲ್ಲ. ಅಷ್ಟೇ ಅಲ್ಲದೇ ಎಲ್ಲರ ಮುಂದೆ ನನ್ನನ್ನು ಸುಳ್ಳು ಗಾರ್ತಿ ಎಂದು ಕರೆದರು. ಇದರಿಂದಾಗಿ ಬೇರೆ ವಿದ್ಯಾರ್ಥಿಗಳು ನನ್ನನ್ನು ಅದೇ ಭಾವನೆಯಿಂದ ನೋಡಿದರು. ಈ ಹಿನ್ನೆಲೆಯಲ್ಲಿ ಮನನೊಂದು ಮಹಡಿಯಿಂದ ಜಿಗಿದೆ ಎಂದು ತಿಳಿಸಿದಳು. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಬೆಂಗಳೂರು–ಹೌರಾ ಎಕ್ಸ್‌ಪ್ರೆಸ್ ರೈಲಿನಲ್ಲಿ ಆಕಸ್ಮಿಕ ಬೆಂಕಿ

ಚಿತ್ತೂರು(ಆಂಧ್ರಪ್ರದೇಶ): ಬೆಂಗಳೂರು– ಹೌರಾ ಎಕ್ಸ್‌ಪ್ರೆಸ್ ರೈಲಿನಲ್ಲಿ ಆಕಸ್ಮಿಕ ಬೆಂಕಿ ಕಾಣಿಸಿಕೊಂಡಿದೆ. ಇಂದು (ನವೆಂಬರ್ 27) ಆಂಧ್ರಪ್ರದೇಶದ ಚಿತ್ತೂರಿನಲ್ಲಿ ಬೆಂಗಳೂರು–ಹೌರಾ ಎಕ್ಸ್‌ಪ್ರೆಸ್ ರೈಲಿ ಬೋಗಿಯೊಂದರಲ್ಲಿ ಬೆಂಕಿ ಹೊತ್ತಿಕೊಂಡಿದ್ದು, ಸ್ಥಳೀಯ ಪೊಲೀಸರು ಹಾಗೂ ಅಗ್ನಿಶಾಮಕ ದಳ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ.

ಅದೃಷ್ಟವಶಾತ್ ಅಗ್ನಿ ಅವಘಡದಲ್ಲಿ ಯಾವುದೇ ಸಾವು ನೋವು ಸಂಭವಿಸಿಲ್ಲ ಎಂದು ತಿಳಿದುಬಂದಿದೆ. ಆದರೆ, ಬೆಂಕಿ ಕಾಣಿಸಿಕೊಳ್ಳಲು ಕಾರಣವೇನು ಎನ್ನುವುದು ತಿಳಿದುಬಂದಿಲ್ಲ. ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನಿರೀಕ್ಷಿಸಲಾಗಿದೆ.

ಮಹಾರಾಷ್ಟ್ರ ಸರ್ಕಾರದ ವಿರುದ್ಧ ವಾಟಾಳ್ ನಾಗರಾಜ್ ಪ್ರತಿಭಟನೆ



ಮೈಸೂರು,ನ.27(ಪಿಎಂ)– ರಾಜ್ಯಗಡಿ ಸಂಬಂಧ ಮಹಾರಾಷ್ಟ್ರ ಸರ್ಕಾರದ ನಿಲುವು ಖಂಡಿಸಿ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಬೆಂಬಲಿಗರೊಂದಿಗೆ ಭಾನುವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಜಯಚಾಮರಾಜ ಒಡೆಯರ್ ವೃತ್ತದಲ್ಲಿ ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದ ಅವರು, ಇದೇ ವೇಳೆ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂಧೆ ಭಾವಚಿತ್ರ ಹರಿದು ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ವಾಟಾಳ್, ಮಹಾರಾಷ್ಟ್ರ ಸರ್ಕಾರ ಗಡಿ ವಿಚಾರದಲ್ಲಿ ಗೂಂಡಾಗಿರಿ ನಡೆಸುತ್ತಿದ್ದು, ಅವಿವೇಕದಿಂದ ವರ್ತಿಸುತ್ತಿದೆ. ಈಗಾಗಲೇ ಗಡಿ ಸಮಸ್ಯೆ ಮುಗಿದ ಅಧ್ಯಾಯ. ರಾಜ್ಯ ಪುನರ್ ವಿಂಗಡಣಾ ಸಮಿತಿ ಬೆಳಗಾವಿ, ನಿಪ್ಪಾಣಿ ಮತ್ತು ಕಾರವಾರ ಕರ್ನಾಟಕಕ್ಕೆ ಸೇರಿದ್ದೆಂದು ಹೇಳಿದೆ ಎಂದು ತಿಳಿಸಿದರು.


ಮಹಾರಾಷ್ಟ್ರ ಸರ್ಕಾರ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಗಡಿ ವಿವಾದ ಮುನ್ನೆಲೆಗೆ ತಂದಿದೆ. ಕರ್ನಾಟಕದ ಬಸ್‌ಗಳ ಮೇಲೆ ಕಲ್ಲು ತೂರಿದರೆ, ಮಸಿ ಬಳಿದರೆ ಇಡೀ ಮಹಾರಾಷ್ಟ್ರದವರು ಕರ್ನಾಟಕದೊಳಗೆ ಕಾಲಿಡಲು ಬಿಡುವುದಿಲ್ಲ. ಗಡಿಯನ್ನು ಸಂಪೂರ್ಣ ಬಂದ್ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಗಡಿ ಸಮಸ್ಯೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಲಘುವಾಗಿ ಪರಿಗಣಿಸಬಾರದು. ಜೊತೆಗೆ ಪ್ರಧಾನಿಗಳು, ಕೇಂದ್ರ ಗೃಹಸಚಿವರು ಮಹಾರಾಷ್ಟ್ರ ಸರ್ಕಾರಕ್ಕೆ ತಿಳುವಳಿಕೆ ಹೇಳಬೇಕು ಎಂದು ಒತ್ತಾಯಿಸಿದರು.

ಸರ್ಕಾರ ಕ್ರಮ ಕೈಗೊಳ್ಳಬೇಕಿತ್ತು: ‘ಟಿಪ್ಪು ನಿಜ ಕನಸುಗಳು’ ಕೃತಿ ಮತ್ತು ನಾಟಕ ಪ್ರದರ್ಶನ ಸಂಬಂಧ ಪ್ರತಿಕ್ರಿಯಿಸಿ, ಈ ನಾಟಕ ಮತ್ತು ಪುಸ್ತಕ ಯಾರಿಗೆ ತಾನೇ ಬೇಕಿತ್ತು. ಇವರು ಬರೆದಿದ್ದೇ ನಿಜವೇ? ಟಿಪ್ಪು ಈ ದೇಶದ ಮಹಾವೀರ. ಸ್ವಾರ್ಥಕ್ಕಾಗಿ ಇಂತಹ ಪುಸ್ತಕ ಮತ್ತು ನಾಟಕದ ಮೂಲಕ ಸೌಹಾರ್ದಯುತ ವಾತಾವರಣ ಹಾಳು ಮಾಡಬಾರದು. ಕೃತಿ ಕರ್ತೃ ಹಾಗೂ ನಾಟಕದ ನಿರ್ದೇಶಕರ ವಿರುದ್ಧ ಸರ್ಕಾರ ಈಗಾಗಲೇ ಕ್ರಮ ಕೈಗೊಳ್ಳಬೇಕಿತ್ತು ಎಂದು ಹೇಳಿದರು.

ಗುಮ್ಮಟ ತೆಗೆದಿದ್ದು ಸರಿಯಲ್ಲ: ನಂಜನಗೂಡು ರಸ್ತೆಯ ಪ್ರಯಾಣಿಕ ತಂಗುದಾಣದ ಎರಡು ಗುಮ್ಮಟ ತೆರವು ಮಾಡಿದ್ದು ಸರಿಯಲ್ಲ ಎಂದು ಪ್ರತಿಕ್ರಿಯಿಸಿದರು. ತಂಗುದಾಣದ ಗುಮ್ಮಟ ವಿರೋಧಿಸುವ ಮೂಲಕ ಮೈಸೂರು ಸಂಸದರು ಸಣ್ಣತನದಿಂದ ವರ್ತಿಸುತ್ತಿದ್ದಾರೆ. ಸಂಸದರಾಗಿ ಜನರ ಕೆಲಸಗಳನ್ನು ಮಾಡುವುದು ಬಿಟ್ಟು ವಿವಾದ ಉಂಟು ಮಾಡುತ್ತಿದ್ದಾರೆ. ಟಿಪ್ಪು ಎಕ್ಸ್‌ಪ್ರೆಸ್ ಹೆಸರು ಬದಲಿಸಿ ಯಾವ ಪ್ರಯೋಜನವಾಗಿದೆ? ಸಂಸದರು ಜನಸಾಮಾನ್ಯರಿಗೆ ತೊಂದರೆ ಕೊಡುವ ಜೊತೆಗೆ ಮೈಸೂರಿಗೆ ಕೆಟ್ಟ ಹೆಸರು ತರುತ್ತಿದ್ದಾರೆ ಎಂದು ದೂರಿದರು.

ಟಿಪ್ಪು ನಿಜಕನಸುಗಳು ನಾಟಕಕ್ಕೆ ದಿನೇ ದಿನೆ ಹೆಚ್ಚಿದ ಪ್ರೇಕ್ಷಕರು

ನಾಟಕದ ಪಾತ್ರಧಾರಿಗಳ ಅಭಿನಯಕ್ಕೆ ಅಪಾರ ಮೆಚ್ಚುಗೆ



ಮೈಸೂರು, ನ.27(ಎಂಕೆ)– ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ರಚಿತ ‘ಟಿಪ್ಪು ನಿಜಕನಸುಗಳು’ ನಾಟಕದ ನೋಡುಗರ ಸಂಖ್ಯೆ ಹೆಚ್ಚಾಗುತ್ತಲೇ ಇದ್ದು, ಕಲಾವಿದರ ಅಭಿನಯವನ್ನು ಹಾಡಿ–ಹೊಗಳುತ್ತಿದ್ದಾರೆ.

ರಂಗಾಯಣ ಭೂಮಿಗೀತ ವೇದಿಕೆಯಲ್ಲಿ ಭಾನುವಾರ 5ನೇ ಭರ್ತಿ ಪ್ರದರ್ಶನ ಕಂಡ ‘ಟಿಪ್ಪು ನಿಜಕನಸುಗಳು’ ನಾಟಕ ರಂಗಾಸಕ್ತರ ಮನಗೆದ್ದಿದ್ದು, ನಾಟಕ ನೋಡುವವರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಮೊದಲ ಪ್ರದರ್ಶನ ದಿಂದಲೂ ಭೂಮಿಗೀತ ವೇದಿಕೆ ಭರ್ತಿಯಾಗುತ್ತಿದ್ದು, ಟಿಕೆಟ್ ಸಿಗದೆ ಹಲವರು ವಾಪಸ್ ಆಗುವ ಪರಿಸ್ಥಿತಿ ನಿರ್ಮಾಣವಾಗಿದೆ.

‘ಟಿಪ್ಪು ನಿಜಕನಸುಗಳು’ ನಾಟಕದಲ್ಲಿ ಅಭಿನಯಿಸಿರುವ ಕಲಾವಿದರ ಅಮೋಘ ಅಭಿನಯವನ್ನು ಹಾಡಿ–ಹೊಗಳುತ್ತಿರುವ ಪ್ರೇಕ್ಷಕರು ನಾಟಕದಲ್ಲಿ ಬಳಸಿರುವ ಸಂಭಾಷಣೆ, ಬೆಳಕಿನ ವಿನ್ಯಾಸ, ಸಂಗೀತ ಅಚ್ಚುಕಟ್ಟಾಗಿದೆ ಎಂದು ಬಣ್ಣಿಸುತ್ತಿದ್ದಾರೆ.

ಕಲಾವಿದರಾದ ವಿಜಯ್ ಕಾರ್ತಿಕ್ (ದಿವಾನ್ ಪೂರ್ಣಯ್ಯ ಪಾತ್ರದಲ್ಲಿ), ದುರ್ಗಾ ಪರಮೇಶ್(ಸೈಯದ್ ಹುಸೇನ್ ಆಲಿ ಕಿರ್ಮಾನಿ), ಸಚಿನ್ ಎಂ(ಟಿಪ್ಪು ಸುಲ್ತಾನ್), ಕೆಮಹೇಂದ್ರ ನಾಯಕ(ಬದ್ರುಖಾನ್, ಕೊಡವ ಅಪ್ಪಣ್ಣ, ಮರಾಠ ಹಾಗೂ ಅಹಮದೀಯ ಸೈನಿಕ), ಅಭಿಷೇಕ್ ಗಾಣಿಗ(ಮೌಲ್ವಿ ಮುಜಾಹಿದ್ದೀನ್, ಮೇಜರ್ ಅಲಾನ್, ನಾನಾ ಫಡ್ನವೀಸ್, ಕಾರ್ನ್ ವಾಲಿಸ್, ಉರಿಗೌಡ), ಸಂಜಯ್ ಜಿ ಸಜ್ಜಾ (ಗುಲಾವವ್ ಅಲಿಖಾನ್), ಚಂದನ್ ಎಂ ಕೆಬ್ಬೇಹುಂಡಿ (ಹೈದರ್, ಟಿಪ್ಪು ಮತ್ತು ನಿಜಾಮ ಸೈನಿಕ ಹಾಗೂ ಕಲ್ಲಿಕೋಟೆ ಸೇನಾಪತಿ), ಪವನ್ (ಜಾಫರ್ ಆಲಿ ಕುಲಿಬೇಗ್, ವೆಲ್ಲೆಸ್ಲಿ, ಕೊಡವ, ನಂಜೇಗೌಡ), ಶರೀಫ್ ಕೆ.ಎ. ಕೊಪ್ಪಳ (ಸಾಧಿಕ್ ಅಲಿ, ಟಿಪ್ಪು ಸೈನಿಕ), ಬಿ.ಜಿ ಕೌಶಿಕ್(ಮೀರ್ ಸಾಧಿಕ್, ಬ್ರಿಟಿಷ್ ಸೈನಿಕ), ನಾಗರಾಜ ಹರನೂರ(ಉಮರ್, ಶೇಕ್ ಕುತುಬುದ್ದೀನ್, ಟಿಪ್ಪು ಸೈನಿಕ ಹಾಗೂ ವೃದ್ಧ ಬ್ರಾಹ್ಮಣ), ದರ್ಶನ್ ನಾಯಕ್ (ವ್ಯಾಂಕೇರಘು, ಕೊಡವ, ಬ್ರಿಟಿಷ್ ಹಾಗೂ ಖಾಸರ್ ಕೈಸಗಿ), ಕೆ.ಶ್ರೀನಿವಾಸ(ಡಿ.ಲಾಲಿ, ಕ್ಯಾಪ್ಟನ್ ವಿಲ್ಸ್, ಶೃಂಗೇರಿ ಪಂಡಿತ ಹಾಗೂ ಕುಲ್ಲೇಟಿ ಪೊನ್ನಣ್ಣ), ಆರ್.ವಿ.ಹೃತಿಕ್ (ಕೃಷ್ಣರಾಯ, ಕೊಡವ, ಹರಿಪಂಥ್, ಮರಾಠ ಹಾಗೂ ಬ್ರಿಟಿಷ್ ಸೈನಿಕ), ಸಹಾಸ್ ಪಂಡಿತ್ (ರಾಜನ್ ನಾಯರ್, ಜೈನಾಲುಬ್ದೀನ್ ಸೋಸ್ತ್ರೀ, ಟಿಪ್ಪು ಮತ್ತು ಬ್ರಿಟಿಷ್ ಸೈನಿಕ), ಎಲ್. ಅಭಿಷೇಕ್ (ಸೈಯದ್ ಅಬ್ದುಲ್ ಮಹಮ್ಮದ್, ಟಿಪ್ಪು ಮತ್ತು ಬ್ರಿಟಿಷ್ ಸೈನಿಕ), ಅಧಿಶ್ ಮನು (ವೀರರಾಜ ತೇಜವಂಶ ಬಲರಾಮ, ಕರ್ನಲ್ ಹ್ಯಾರೀಸ್, ಕೊಡವ ಹಿರಿಯ ಉತ್ತಯ್ಯ), ಆರ್.ಕೆ.ತೀರ್ಥೇಶ್ (ಲಿಂಗರಾಜ ಒಡೆಯ, ಬದ್ರುಸುಸ್ಕಾನ್ ಖಾನ್, ಟಿಪ್ಪು ಮತ್ತು ಬ್ರಿಟಿಷ್ ಸೈನಿಕ), ಎಂ.ಉಜ್ವಲ್(ಕೊಡಂಗೇರಿ ಅಬ್ದುಲ್ ಖಾದ್ರಿ, ನದೀಮ್ ಖಾನ್, ಮೈಸೂರು ಸಂಸ್ಥಾನದ ಸೇವಕ, ಟಿಪ್ಪು ಮತ್ತು ಬ್ರಿಟಿಷ್ ಸೈನಿಕ), ಸೌಮ್ಯ ಪಾಣಾಜೆ (ರುಕಿಯಾ ಬಾನು, ಬೇಗಂ, ಲಕ್ಷ್ಮಿ ಅಮ್ಮಣ್ಣಿ), ಹೆಚ್.ಕೆ. ವನಿತಾ(ದೇವಾಜಮ್ಮಣ್ಣಿ, ಫಾತಿಮಾ), ಭಾಗ್ಯಲಕ್ಷ್ಮಿ ಕಾಳೆ(ಹಸೀನಾ, ಟಿಪ್ಪು ಮತ್ತು ಮೈಸೂರು ಸಂಸ್ಥಾನದ ಸೇವಕಿ) ಹಾಗೂ ಟಿ.ಎಲ್.ರಕ್ಷಿತ(ಫಾತಿಮಾ ಉನ್ನೀಸಾ, ನಾಗರಿಕ ಹೆಂಗಸು ಮತ್ತು ಟಿಪ್ಪು ಸೇವಕಿ) ‘ಟಿಪ್ಪು ನಿಜಕನಸುಗಳು’ ನಾಟಕದಲ್ಲಿ ಅಭಿನಯಿಸಿ ಎಲ್ಲರ ಮೆಚ್ಚುಗೆ ಗಳಿಸಿದ್ದಾರೆ.



ಅಡ್ಡಂಡ ಸಿ.ಕಾರ್ಯಪ್ಪ

ಮುಂದುವರೆದ ಪೊಲೀಸ್ ಭದ್ರತೆ: ‘ಟಿಪ್ಪು ನಿಜಕನಸುಗಳು’ ನಾಟಕ ಪ್ರದರ್ಶನಕ್ಕೆ ಅಡಚಣೆಯುಂಟಾಗದಂತೆ ಒದಗಿಸಿರುವ ಪೊಲೀಸ್ ಭದ್ರತೆ ಮುಂದು ವರೆದಿದ್ದು, ನಾಟಕ ನೋಡಲು ಬರುವವರನ್ನು ತಪಾಸಣೆಗೆ ಒಳಪಡಿಸಿ ಅವಕಾಶ ಮಾಡಿಕೊಡಲಾಗುತ್ತಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಭಾರತ–ನ್ಯೂಜಿಲೆಂಡ್ ಎರಡನೇ ಏಕದಿನಕ್ಕೆ ಮಳೆ ಅಡ್ಡಿ; ಪಂದ್ಯ ರದ್ದು

ಹ್ಯಾಮಿಲ್ಟನ್: ಭಾರತ–ನ್ಯೂಜಿಲೆಂಡ್ ನಡುವಿನ 2ನೇ ಏಕದಿನ ಪಂದ್ಯಕ್ಕೆ ಮಳೆ ಅಡ್ಡಿಪಡಿಸಿದ್ದು, ಪಂದ್ಯವನ್ನು ಅಂಪೈರ್‌ಗಳು ರದ್ದು ಮಾಡಿದ್ದಾರೆ.

ಬೆಳಗ್ಗಿನಿಂದಲೂ ನಿರಂತರವಾಗಿ ಸುರಿದ ಮಳೆಯಿಂದಾಗಿ ಇಂದಿನ ಪಂದ್ಯ ರದ್ದಾಗಿದ್ದು, ಇಂದು ಇಡೀ ದಿನ ಕೇವಲ 12.5 ಓವರ್ ಮಾತ್ರ ಆಡಲು ಸಾಧ್ಯವಾಯಿತು. ಹೀಗಾಗಿ ಅನ್ಯ ಮಾರ್ಗವಿಲ್ಲದೇ ಅಂಪೈರ್ ಗಳು ಪಂದ್ಯವನ್ನು ರದ್ದು ಮಾಡಿದ್ದಾರೆ.

ಟಾಸ್ ಸೋತು ಬ್ಯಾಟಿಂಗ್ ಆರಂಭಿಸಿದ್ದ ಭಾರತ: ಟಾಸ್ ಸೋತರೂ ಬ್ಯಾಟಿಂಗ್ ಆರಂಭಿಸಿದ್ದ ಭಾರತ ತಂಡ 5ನೇ ಓವರ್ ಬ್ಯಾಟಿಂಗ್ ಮಾಡುತ್ತಿದ್ದಾಗ ಮಳೆ ಅಡ್ಡಿ ಪಡಿಸಿತು. ಈ ವೇಳೆ ಭಾರತ 4.5 ಓವರ್ ನಲ್ಲಿ ವಿಕೆಟ್ ನಷ್ಟವಿಲ್ಲದೇ 22 ರನ್ ಗಳಿಸಿತ್ತು. ಶುಭಮನ್ ಗಿಲ್ ಮತ್ತು ನಾಯಕ ಶಿಖರ್ ಧವನ್ ಕ್ರೀಸ್ ನಲ್ಲಿದ್ದರು. ಈ ವೇಳೆ ಸುರಿದ ಮಳೆ ನಿರಂತರ 3 ಗಂಟೆಗಳ ಕಾಲ ಸುರಿಯಿತು. ಬಳಿಕ ಮಳೆ ನಿಂತ ಹಿನ್ನಲೆಯಲ್ಲಿ ತಲಾ 29ಓವರ್ ಗಳಿಗೆ ಪಂದ್ಯವನ್ನು ಕಡಿತಗೊಳಿಸಿ ಆಟ ಮುಂದುವರೆಸಲಾಯಿತು.

ಆರಂಭಿಕ ಆಘಾತ ಎದುರಿಸಿದ ಭಾರತ: ಮಳೆ ನಿಂತ ಬಳಿಕ ಆಟ ಆರಂಭಿಸಿದ ಭಾರತಕ್ಕೆ ಆರಂಭಿಕ ಆಘಾತ ಎದುರಾಗಿತ್ತು. ಕೇವಲ 3 ರನ್ ಗಳಿಸಿದ್ದ ನಾಯಕ ಶಿಖರ್ ಧವನ್ ರನ್ನು ಮ್ಯಾಟ್ ಹೆನ್ರಿ ಔಟ್ ಮಾಡಿದರು. ಮತ್ತೊಂದು ತುದಿಯಲ್ಲಿ ಶುಭಮನ್ ಗಿಲ್ 31 ರನ್ ಗಳಿಸಿ ಕ್ರೀಸ್ ಕಾಯ್ದುಕೊಂಡಿದ್ದು, ಧವನ್ ಬಳಿಕ ಕ್ರೀಸ್‌ಗೆ ಆಗಮಿಸಿದ್ದ ಸೂರ್ಯ ಕುಮಾರ್ ಯಾದವ್ ಭಾರತಕ್ಕೆ ಅತ್ಯುತ್ತಮ ಜೊತೆಯಾಟ ನೀಡಿದರು.

ಈ ಜೋಡಿ 85 ರನ್ ಗಳ ಜೊತೆಯಾಟದೊಂದಿಗೆ ಉತ್ತಮವಾಗಿ ಆಡುತ್ತಿತ್ತು. ಈ ವೇಳೆ ಮತ್ತೆ ಮಳೆ ಅಡ್ಡಿ ಪಡಿಸಿ ಆಟ ನಿಂತಿತು. ಈ ವೇಳೆ ಗಿಲ್ 42 ಎಸೆತಗಳಲ್ಲಿ 1 ಸಿಕ್ಸರ್ ಮತ್ತು 4 ಬೌಂಡರಿಗಳ ನೆರವಿನಿಂದ 44ರನ್ ಗಳಿಸಿ ಅರ್ಧಶತಕದ ಹೊಸ್ತಿಲಲ್ಲಿದ್ದರೆ, ಅವರಿಗೆ ಉತ್ತಮ ಸಾಥ್ ನೀಡುತ್ತಿದ್ದ ಸೂರ್ಯ ಕುಮಾರ್ ಯಾದವ್ ಕೇವಲ 25 ಎಸೆತಗಳಲ್ಲಿ 3 ಸಿಕ್ಸರ್, 2 ಬೌಂಡರಿ ನೆರವಿನಿಂದ 34 ರನ್ ಗಳಿಸಿ ಭರ್ಜರಿಯಾಗಿ ಆಡುತ್ತಿದ್ದರು. ಆದರೆ ಮಳೆಯಿಂದಾಗಿ ಇದೀಗ ಇಡೀ ಪಂದ್ಯವನ್ನು ರದ್ದು ಮಾಡಲಾಗಿದೆ.

ಜೀವಬೆದರಿಕೆ: ಶಾರಿಕ್ ದಾಖಲಾಗಿರುವ ಮಂಗಳೂರು ಆಸ್ಪತ್ರೆಗೆ ಬಿಗಿ ಭದ್ರತೆ

ಮಂಗಳೂರು: ಮಂಗಳೂರು ಬಾಂಬ್ ಸ್ಫೋಟ ಪ್ರಕರಣದ ರೂವಾರಿ ಮೊಹಮದ್ ಶಾರಿಕ್‌ಗೆ ಜೀವ ಬೆದರಿಕೆ ಇರುವ ಕಾರಣ ಆತ ದಾಖಲಾಗಿರುವ ಮಂಗಳೂರು ಆಸ್ಪತ್ರೆಗೆ ಬಿಗಿ ಪೊಲೀಸ್ ಭದ್ರತೆ ಒದಗಿಸಲಾಗಿದೆ.




ನವೆಂಬರ್ 19 ರಂದು ನಡೆದ ಬಾಂಬ್ ಸ್ಫೋಟ ಪ್ರಕರಣದ ಪ್ರಮುಖ ಶಂಕಿತ ಆರೋಪಿ ಮೊಹಮ್ಮದ್ ಶಾರಿಕ್ (24) ಚಿಕಿತ್ಸೆ ಪಡೆಯುತ್ತಿರುವ ಮಂಗಳೂರಿನ ಖಾಸಗಿ ಆಸ್ಪತ್ರೆಯ ಸುತ್ತಮುತ್ತ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ಸ್ಫೋಟದಲ್ಲಿ ಶಾರಿಕ್ ಮತ್ತು ಆಟೋರಿಕ್ಷಾ ಚಾಲಕ ಪುರುಷೋತ್ತಮ ಪೂಜಾರಿ ಗಾಯಗೊಂಡಿದ್ದು, ಇಬ್ಬರಿಗೂ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಸ್ಫೋಟದ ಹೊಣೆಗಾರಿಕೆಯನ್ನು ಕಡಿಮೆ–ಪ್ರಸಿದ್ಧ ಸಂಘಟನೆಯಾದ ಇಸ್ಲಾಮಿಕ್ ರೆಸಿಸ್ಟೆನ್ಸ್ ಕೌನ್ಸಿಲ್ ವಹಿಸಿಕೊಂಡಿದೆ.

ಶಾರಿಕ್ ನನ್ನು ಪೊಲೀಸರ ತಂಡ ನಿಗಾ ವಹಿಸಿದ್ದು, ಚಿಕಿತ್ಸೆಗೆ ಆತ ಉತ್ತಮವಾಗಿ ಸ್ಪಂದಿಸುತ್ತಿದ್ದಾನೆ ಎಂದು ವೈದ್ಯರು ತಿಳಿಸಿದ್ದಾರೆ. ಪೊಲೀಸರು ಆತನ ವಾರ್ಡ್‌ನಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಿದ್ದಾರೆ. ಪ್ರಕರಣದ ಪ್ರಮುಖ ಹ್ಯಾಂಡ್ಲರ್ ಆಗಿರುವ ಅರಾಫತ್ ಅಲಿ ಕೂಡ ತಲೆಮರೆಸಿಕೊಂಡಿದ್ದು, ಆತನ ವಿರುದ್ಧ ಲುಕ್‌ಔಟ್ ನೋಟಿಸ್ ಜಾರಿ ಮಾಡಲಾಗಿದೆ. ಇನ್ನು ಶಾರಿಕ್‌ಗೆ ಜೀವ ಬೆದರಿಕೆ ಇದೆ ಎಂಬ ಊಹಾಪೋಹಗಳಿದ್ದು, ಈ ಕಾರಣಕ್ಕಾಗಿ ಆಸ್ಪತ್ರೆಯಲ್ಲಿ ಅವರ ಭದ್ರತೆಯನ್ನು ಹೆಚ್ಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಒಬ್ಬ ಇನ್ಸ್‌ಪೆಕ್ಟರ್, ಇಬ್ಬರು ಪಿಎಸ್‌ಐಗಳು ಮತ್ತು ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಶಾರಿಕ್ ಕೊಠಡಿಯ ಬಳಿ ನಿಯೋಜಿಸಲಾಗಿದೆ. ಪ್ರವೇಶ ದ್ವಾರದಲ್ಲಿ ಮೆಟಲ್ ಡಿಟೆಕ್ಟರ್ ಕೂಡ ಅಳವಡಿಸಲಾಗಿದೆ. ಆಸ್ಪತ್ರೆ ಮೂಲಗಳ ಪ್ರಕಾರ ಶಾರಿಕ್ ಇನ್ನೂ ವೆಂಟಿಲೇಟರ್‌ನಲ್ಲಿದ್ದಾನೆ ಎಂದು ಹೇಳಲಾಗಿದೆ. ಮಂಗಳೂರು ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಆಸ್ಪತ್ರೆಗೆ ಭೇಟಿ ನೀಡಿ ಆಟೋ ಚಾಲಕ ಪೂಜಾರಿ ಅವರನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು. ಇನ್ನು ಶಾರಿಕ್‌ಗೆ ಸೋಂಕು ತಗುಲಬಹುದೆಂಬ ಕಾರಣಕ್ಕೆ ಆತನನ್ನು ಭೇಟಿಯಾಗಲು ಪೊಲೀಸರಿಗೆ ಇನ್ನೂ ಅವಕಾಶ ನೀಡಲಾಗಿಲ್ಲ ಎಂದು ಅವರು ಹೇಳಿದರು.

ಬೆಂಬಲ ಬೆಲೆಯಡಿ ಭತ್ತ, ರಾಗಿ ಖರೀದಿ ಕೇಂದ್ರ ಶೀಘ್ರ ಸ್ಥಾಪಿಸಿ

ಖರೀದಿಗೆ ಇರುವ ಮಿತಿ ತೆಗೆದುಹಾಕಿ; ಸಿಎಂ ಬೊಮ್ಮಾಯಿರವರಿಗೆ ಶಾಸಕ ದಿನೇಶ್ ಗೂಳಿಗೌಡ ಮನವಿ




ಬಸವರಾಜ ಬೊಮ್ಮಾಯಿ, ದಿನೇಶ್ ಗೂಳಿಗೌಡ

ಮಂಡ್ಯ,ನ.27– ಮುಂಗಾರು ಋತುವಿನಲ್ಲಿ (2022–23ನೇ ಸಾಲಿನ) ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಮಂಡ್ಯ ಜಿಲ್ಲೆಯಲ್ಲಿ ಬೆಳೆಯಲಾಗಿರುವ ಭತ್ತ ಮತ್ತು ರಾಗಿ ಖರೀದಿಗೆ ಖರೀದಿ ಕೇಂದ್ರ ಸ್ಥಾಪಿಸಬೇಕು. ರೈತರು ಬೆಳೆ ಮಾರಾಟ ಮಾಡಲು ವಿಧಿಸಿರುವ ಮಿತಿಯನ್ನು ತೆಗೆದುಹಾಕಬೇಕು ಎಂದು ಮಂಡ್ಯ ಜಿಲ್ಲೆ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ಆಯ್ಕೆಯಾಗಿರುವ ದಿನೇಶ್ ಗೂಳಿಗೌಡ ಅವರು ಭಾನುವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದರು.

ರಾಜ್ಯ ಸರ್ಕಾರವು ಈವರೆಗೂ ಖರೀದಿ ಕೇಂದ್ರಗಳ ಸ್ಥಾಪನೆ ಹಾಗೂ ಬೆಂಬಲ ಬೆಲೆ ದರ ನಿಗದಿಪಡಿಸುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಅಲ್ಲದೆ, ಒಬ್ಬ ರೈತನಿಂದ ಇಂತಿಷ್ಟೇ ಕ್ವಿಂಟಾಲ್ ಭತ್ತವನ್ನು ಖರೀದಿ ಮಾಡಬೇಕು ಎಂದು ಮಿತಿಯನ್ನು ವಿಧಿಸಿದೆ. ಇನ್ನು ನೋಂದಣಿ ಪ್ರಕ್ರಿಯೆ ಯಾವಾಗ ಪ್ರಾರಂಭವಾಗುತ್ತದೆ ಎಂಬುದನ್ನೂ ಖಾತ್ರಿಪಡಿಸಿಲ್ಲ. ಇದರಿಂದ ರೈತಾಪಿ ವರ್ಗ ಆತಂಕಕ್ಕೀಡಾಗಿದೆ. ತಾವು ಮಧ್ಯಪ್ರವೇಶ ಮಾಡಿ ಶೀಘ್ರ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

2021–22ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಸುಮಾರು 98 ಭತ್ತ ಖರೀದಿ ಏಜೆನ್ಸಿ ಮ್ಯಾಪಿಂಗ್ ಮಾಡಿದ ಮಿಲ್‌ಗಳಿಂದ ಖರೀದಿಸಲಾಗಿತ್ತು. ಸುಮಾರು 20 ಲಕ್ಷ ಕ್ವಿಂಟಾಲ್ ಭತ್ತವನ್ನು 75 ಸಾವಿರ ರೈತರಿಂದ ಬೆಂಬಲ ಬೆಲೆ ಯೋಜನೆಯಡಿ ಖರೀದಿ ಮಾಡಲಾಗಿತ್ತು.

ಪ್ರಸಕ್ತ ಸಾಲಿನ ಮುಂಗಾರು ಋತುವಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಸುಮಾರು 81,459 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿರುವ ಭತ್ತದ ಬೆಳೆಯು ಕಟಾವಿಗೆ ಬಂದಿದ್ದು, ಅಂದಾಜು 50 ಲಕ್ಷ ಕ್ವಿಂಟಾಲ್ ಭತ್ತ ಉತ್ಪಾದನೆಯಾಗಲಿದೆ ಎಂದು ಅಂದಾಜು ಮಾಡಲಾಗಿದೆ. ಇನ್ನು 15–20 ದಿನಗಳಲ್ಲಿ ಭತ್ತ ಕಟಾವಿಗೆ ಬರುತ್ತಿದೆ. ಸರ್ಕಾರ ಈವರೆಗೂ ಖರೀದಿ ಕೇಂದ್ರಗಳ ಬಗ್ಗೆಯಾಗಲೀ ಹಾಗೂ ಬೆಂಬಲ ಬೆಲೆ ನಿಗದಿಪಡಿಸುವುದಾಗಲೀ, ಒಬ್ಬ ರೈತನಿಂದ ಎಷ್ಟು ಕ್ವಿಂಟಾಲ್ ಭತ್ತವನ್ನು ಖರೀದಿ ಮಾಡಲಾಗುತ್ತದೆ ಎಂಬುದನ್ನು ತಿಳಿಸಿಲ್ಲ. ಅಲ್ಲದೆ, ನೋಂದಣಿ ಯಾವಾಗ ಶುರುವಾಗುತ್ತದೆ ಎಂಬ ಬಗ್ಗೆ ಇನ್ನೂ ಖಾತರಿಪಡಿಸಿಲ್ಲ. ಇದರಿಂದ ರೈತಾಪಿ ವರ್ಗದವರು ಬಹಳವೇ ಆತಂಕಕ್ಕೀಡಾಗಿದ್ದಾರೆ.

ಇನ್ನು ರಾಗಿ ಬೆಳೆಗೆ ಸಂಬಂಧಪಟ್ಟಂತೆ 2021–22ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ 30,000 ರೈತರಿಂದ 5 ಲಕ್ಷ ಕ್ವಿಂಟಾಲ್ ರಾಗಿಯನ್ನು ಬೆಂಬಲ ಬೆಲೆಯಡಿ ಖರೀದಿಸಲಾಗಿತ್ತು. 2022–23ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಸುಮಾರು 50,000 ಹೆಕ್ಟೇರ್ ವಿಸ್ತೀರ್ಣದಲ್ಲಿ ರಾಗಿ ಬೆಳೆಯಲಾಗಿದೆ. ಹೀಗಾಗಿ ಸುಮಾರು 10 ಲಕ್ಷಕ್ಕೂ ಹೆಚ್ಚು ಕ್ವಿಂಟಾಲ್ ರಾಗಿ ಉತ್ಪಾದನೆಯಾಗಲಿದೆ ಎಂದು ಅಂದಾಜಿಸಲಾಗಿದೆ. ಆದರೆ, ಇನ್ನೂ ಖರೀದಿ ಕೇಂದ್ರಗಳನ್ನು ತೆರೆಯದೇ ಇರುವುದರಿಂದ ರಾಗಿ ಬೆಳೆದ ರೈತರು ಆತಂಕಕ್ಕೊಳಗಾಗಿದ್ದಾರೆ.

ಈಗಾಗಲೇ ಬೆಲೆ ಕುಸಿತ ಹಾಗೂ ರಾಸಾಯನಿಕ ಗೊಬ್ಬರಗಳ, ಕೀಟನಾಶಕಗಳ ಬೆಲೆ ಏರಿಕೆಯಾಗಿದೆ. ಜೊತೆಗೆ ಉತ್ಪಾದನಾ ವೆಚ್ಚ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದ್ದು, ರೈತನ ಬದುಕು ದುಸ್ತರವಾಗಿದ್ದಲ್ಲದೆ, ಆತ್ಮಹತ್ಯೆ ಹಾದಿ ಹಿಡಿಯುವಂತಾಗುತ್ತಿದೆ. ಕೃಷಿ ವಲಯ ಸಂಕಷ್ಟಕ್ಕೆ ಸಿಲುಕಿ ನಷ್ಟದ ದಾರಿ ಹಿಡಿದಿದೆ. ಕೃಷಿ ಕಾರ್ಮಿಕರ ಕೊರತೆಯು ಕೂಡ ತೀವ್ರವಾಗಿ ರೈತರನ್ನು ಕಾಡುತ್ತಿದೆ. ಖರೀದಿ ಕೇಂದ್ರಗಳನ್ನು ತೆರೆಯುವುದು ವಿಳಂಬವಾದಲ್ಲಿ ಮಧ್ಯವರ್ತಿಗಳ ಕಪಿಮುಷ್ಟಿಗೆ ಸಿಲುಕಿ ರೈತರು ಕಡಿಮೆ ಬೆಲೆಗೆ ಭತ್ತ ಮತ್ತು ರಾಗಿಯನ್ನು ತಮ್ಮ ತುರ್ತು ಅಗತ್ಯತೆಗಳಿಗೆ ಮಾರಾಟ ಮಾಡಿ ನಷ್ಟಕ್ಕೊಳಗಾಗುತ್ತಾರೆ.

ಆದ್ದರಿಂದ ಸರ್ಕಾರ ಕೂಡಲೇ ರೈತರ ಹಿತ ಕಾಪಾಡುವ ದೃಷ್ಟಿಯಿಂದ ಮಂಡ್ಯ ಜಿಲ್ಲೆಯ ಜೊತೆಗೆ ಮೈಸೂರು, ಚಾಮರಾಜನಗರ, ಮಡಿಕೇರಿ, ಹಾಸನ ಹಾಗೂ ಇನ್ನಿತರ ಜಿಲ್ಲೆಗಳಲ್ಲೂ ಕೂಡಲೇ ನೋಂದಣಿ ಕೇಂದ್ರ ಪ್ರಾರಂಭ ಮಾಡಬೇಕು. ಹಾಗೆಯೇ ದರ ಏರಿಕೆ ಮಾಡಬೇಕು. ಕಳೆದ ಬಾರಿ ಇದ್ದಂತಹ ಒಬ್ಬ ರೈತನಿಂದ ಇಂತಿಷ್ಟೇ ಕ್ವಿಂಟಾಲ್ ಖರೀದಿ ಮಾಡಬೇಕು ಎಂಬ ನಿಯಮವನ್ನು ತೆಗೆದುಹಾಕಬೇಕಿದೆ. ರೈತ ಉತ್ಪಾದಿಸಿದ ಎಲ್ಲ ಭತ್ತ ಮತ್ತು ರಾಗಿಯನ್ನು ಖರೀದಿ ಮಾಡಬೇಕು ಎಂದು ಈ ಭಾಗದ ರೈತರ ಪರವಾಗಿ ಮನವಿ ಮಾಡಿಕೊಳ್ಳುತ್ತೇನೆ ಎಂದು ಶಾಸಕ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿಯವರಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಕೆ.ಆರ್.ಪೇಟೆಯಲ್ಲಿ ಕನ್ನಡ ರಾಜ್ಯೋತ್ಸವ



ಕೆ.ಆರ್.ಪೇಟೆ,ನ.27– ಕನ್ನಡಿಗರಾದ ನಾವು ಮಾತೃಭಾಷೆಯನ್ನು ಹೆತ್ತತಾಯಿಯನ್ನು ಪ್ರೀತಿಸುವಂತೆ ಪ್ರೀತಿಸಬೇಕು. ಯಾವತ್ತೂ ಕಡೆಗಣಿಸಬಾರದು. ಕನ್ನಡ ಭಾಷೆಯ ಉಳಿವಿಗೆ ಹೋರಾಟ ನಡೆಸುವ ಕನ್ನಡಪರ ಸಂಘಟನೆಗಳಿಗೆ ಎಲ್ಲಾ ಸಾರ್ವಜನಿಕರು ಸಹಕಾರ ನೀಡಬೇಕು. ಈ ಮೂಲಕ ಭಾಷೆಯ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಸಮಾಜ ಸೇವಕರಾದ ಆರ್‌ಟಿಓ ಮಲ್ಲಿಕಾರ್ಜುನ್ ಸಲಹೆ ನೀಡಿದರು.

ಅವರು ಪಟ್ಟಣದಲ್ಲಿರುವ ಚನ್ನಬಸವೇಶ್ವರ ಕಲ್ಲುಮಠದ ದೇವಾಲಯದ ಆವರಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ಕೃಷ್ಣರಾಜಪೇಟೆ ತಾಲೂಕು ಘಟಕದ ವತಿಯಿಂದ 67ನೇ ವರ್ಷದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಉದ್ಘಾಟಿಸಿ ಮಾತನಾಡಿದರು.

ತಾಲೂಕಿನಲ್ಲಿರುವ ಎಲ್ಲಾ ಕನ್ನಡ ಸಂಘಟನೆಗಳು ಒಂದುಗೂಡಿ ನವೆಂಬರ್ ತಿಂಗಳಿನಲ್ಲಿ ಎಲ್ಲಾ ಸಂಘ ಸಂಸ್ಥೆಗಳ ಸಹಕಾರದಿಂದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡರೆ ತುಂಬಾ ಒಳ್ಳೆಯದು ಎಂದು ಸಂಘಟಕರಿಗೆ ಕಿವಿಮಾತು ಹೇಳಿದರು. ಮಕ್ಕಳಲ್ಲಿ ಕನ್ನಡ ಭಾಷೆಯ ಬಗ್ಗೆ ಮಹತ್ವವನ್ನು ತಿಳಿಸಬೇಕು ಎಂದರು.

ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪತ್ರಾಂಕಿತ ವ್ಯವಸ್ಥಾಪಕರಾದ ಬಳ್ಳೇಕೆರೆ ಮಂಜುನಾಥ್ ಮಾತನಾಡಿ, ಇತರ ಭಾಷೆಗಳನ್ನು ಒಪ್ಪಿಕೊಳ್ಳುವ ಸಂದರ್ಭದಲ್ಲಿ ನಮ್ಮತನವನ್ನು ಬಿಟ್ಟು ಕೊಡದೇ ಉಳಿಸಿಕೊಂಡು ನಮ್ಮ ಭಾಷೆಯನ್ನು ಉಳಿಸುವ ಬಹುದೊಡ್ಡ ಹೊಣೆಗಾರಿಕೆ ನಮ್ಮ ಮೇಲಿದೆ.ಹಿಂದಿ ಭಾಷೆಯನ್ನು ನಮ್ಮ ಭಾಷೆಯ ಮೇಲೆ ಏರಿಕೆ ಮಾಡಲು ಹೊರಟಿರುವ ವಿರುದ್ಧ ಹೋರಾಟ ನಡೆಸಬೇಕು. ಕರ್ನಾಟಕದಲ್ಲಿ ಕನ್ನಡಿಗನೇ ಸಾರ್ವಭೌಮನಾಗಬೇಕು. ಏಕತೆಯಲ್ಲಿ ಸಮಗ್ರತೆಯನ್ನು ಕಾಪಾಡಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಚನ್ನಬಸವೇಶ್ವರ ಕಲ್ಲು ಮಠದ ಶ್ರೀಗಳಾದ ಶ್ರೀ ವಿರೂಪಾಕ್ಷ ಶಿವಯೋಗಿ ಹಿರೇಮಠ್ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ರೈತ ಸಂಘದ ಮಾಜಿ ಅಧ್ಯಕ್ಷ ಮುದುಗೆರೆ ರಾಜೇಗೌಡ, ತಾಲೂಕು ಅಂಬರೀಶ್ ಅಭಿಮಾನಿ ಸೇನೆಯ ಅಧ್ಯಕ್ಷ ಜಬೀವುಲ್ಲಾ, ಕರವೇ ಸ್ವಾಭಿಮಾನಿ ಸೇನೆಯ ತಾಲೂಕು ಅಧ್ಯಕ್ಷ ಅಮ್ಜದ್ ಖಾನ್, ಜಿಲ್ಲಾ ಉಪಾಧ್ಯಕ್ಷ ಸಮೀರ್, ಗೌರವಾಧ್ಯಕ್ಷ ದೇವರಾಜು, ಎಸ್.ವಿ.ವಿನಯ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಆರ್.ಪೇಟೆ ಪೂರ್ಣಚಂದ್ರ ತೇಜಸ್ವಿ, ಡಾ.ರವಿ, ಪುರಸಭಾ ಸದಸ್ಯ ಕೆಆರ್.ನೀಲಕಂಠ, ಮಹೇಶ್, ಕೆಆರ್‌ಎಸ್ ಪಕ್ಷದ ಜಿಲ್ಲಾಧ್ಯಕ್ಷೆ, ನಂದಿನಿ ಗ್ರಾ.ಪಂ ಸದಸ್ಯ ಅಗ್ರಹಾರಬಾಚಹಳ್ಳಿ ಶ್ರೀನಿವಾಸ್, ತಾಲೂಕು ಅಬಕಾರಿ ಅಧಿಕಾರಿ ಭವ್ಯ, ದೇವರಾಜು, ವಕೀಲ ದಯಾನಂದ್, ಸಲ್ಮಾನ್, ಹರೀಶ್, ನಾಗಮಂಗಲ ಅಧ್ಯಕ್ಷ ಹರೀಶ್ ಗೌಡ, ಯುವ ಘಾಕಸ ಅಧ್ಯಕ್ಷ ಆಸೀಫ್, ಜಿಲ್ಲಾ ಯುವ ಘಟಕದ ಅಧ್ಯಕ್ಷ ರೋಹಿತ್, ತಾಲೂಕು ಯುವ ಘಟಕದ ಅಧ್ಯಕ್ಷ ಸಲ್ಮಾನ್ ಖಾನ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಪುನೀತೋತ್ಸವದಲ್ಲಿ ಕಥಕ್ ನೃತ್ಯ, ಮಲ್ಲಕಂಬ ಪ್ರದರ್ಶನ, ಗಾಯಕರ ರಾಗಸುಧೆ





ಪಾಂಡವಪುರ, ನ.27– ಕನ್ನಡ ರಾಜ್ಯೋತ್ಸವದ ಅಂಗವಾಗಿ ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು ಅವರ ನೇತೃತ್ವದಲ್ಲಿ ನಡೆಯುತ್ತಿರುವ ಪುನೀತೋತ್ಸವ ಕಾರ್ಯಕ್ರಮದ ಎರಡನೇ ದಿನದ ವೇದಿಕೆ ಕಾರ್ಯಕ್ರಮವನ್ನು ಪ್ರೇರಣಾ ಅಂಧ ಶಾಲೆಯ ವಿದ್ಯಾರ್ಥಿಗಳು ದೀಪ ಬೆಳಗಿ ರಾಜಕುಮಾರ ಚಿತ್ರದ ಬೊಂಬೆ ಹೇಳುತೈತೆ ಎಂಬ ಹಾಡು ಹಾಡುವ ಮೂಲಕ ಕಾರ್ಯಕ್ರಮಕ್ಕೆ ಅರ್ಥಪೂರ್ಣವಾಗಿ ಚಾಲನೆ ನೀಡಿದರು. ಅಂಧ ಮಕ್ಕಳಿಗೆ ಶಾಸಕ ಸಿ.ಎಸ್. ಪುಟ್ಟರಾಜು, ಡಿವೈಎಸ್‌ಪಿ ಸಂದೇಶ್ ಅವರು ಸಾಥ್ ನೀಡಿದರು.

ಶಾಲೆಯ ಮುಖ್ಯಸ್ಥ ರವಿ ಮಾತನಾಡಿ, ಅಪ್ಪು ಅವರು ಸಮಾಜಮುಖಿ, ಸಮಾಜದ ಬಗ್ಗೆ ಸಾಕಷ್ಟು ಕಳಕಳಿ ಹೊಂದಿದ್ದ ಮಹಾನ್ ನಾಯಕ. ಪುನೀತ್ ರಾಜ್‌ಕುಮಾರ್ ಅವರದ್ದು ಮೇರು ವ್ಯಕ್ತಿತ್ವ, ಅಪ್ಪು ಕಳೆದುಕೊಂಡು ನಾಡು ಬಡವಾಗಿದೆ. ಅಪ್ಪು ಸಾವನ್ನಪ್ಪಿಲ್ಲ. ಎಲ್ಲರ ಮನಸ್ಸಿನಲ್ಲೂ ಚಿರಾಯು ಆಗಿ ನೆಲೆಸಿದ್ದಾರೆ. ನಮ್ಮ ಪ್ರೇರಣಾ ಅಂಧ ಶಾಲೆ ಮಕ್ಕಳಿಂದ ಪುನೀತೋತ್ಸವದಂತಹ ಕಾರ್ಯಕ್ರಮವನ್ನು ಉದ್ಘಾಟಿಸಲು ಅವಕಾಶ ಮಾಡಿಕೊಟ್ಟ ಶಾಸಕ ಸಿ.ಎಸ್.ಪುಟ್ಟರಾಜು ಅವರಿಗೆ ಪ್ರೇರಣಾ ಟ್ರಸ್ಟ್ ವತಿಯಿಂದ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದರು.

ಅರ್ಜುನ್ ಜನ್ಯ ಸಂಗೀತಕ್ಕೆ ತಲೆದೂಗಿದ ಪ್ರೇಕ್ಷಕರು: ಪುನೀತೋತ್ಸವ ಕಾರ್ಯಕ್ರಮದ ಎರಡನೇ ದಿನವಾದ ಶನಿವಾರ ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್‌ಜನ್ಯ ಅವರಿಂದ ಸಂಗೀತೋತ್ಸವ ಕಾರ್ಯಕ್ರಮ ಅದ್ಭುತವಾಗಿ ಮೂಡಿಬಂತು. ಅರ್ಜುನ್‌ಜನ್ಯ ಮತ್ತು ತಂಡದ ಗಾಯಕರು ಕನ್ನಡದ ಹಲವು ಚಿತ್ರಗಳ ಗೀತೆಗಳನ್ನು ಮನೋಜ್ಞವಾಗಿ ಹಾಡುವ ಮೂಲಕ ನೆರೆದಿದ್ದ ಪ್ರೇಕ್ಷಕರಿಗೆ ಮೋಡಿ ಮಾಡಿದರು.

ಡಿವೈಎಸ್‌ಪಿಯ ಇಂಪಾದ ಹಾಡು: ಶ್ರೀರಂಗಪಟ್ಟಣದ ಡಿವೈಎಸ್‌ಪಿ ಸಂದೇಶ್ ಅವರು ಪ್ರೇಕ್ಷಕರು, ಜನರ ಒತ್ತಾಯದ ಮೇರೆಗೆ ರಾಜ್‌ಕುಮಾರ್ ಅಭಿನಯದ 'ಜಯತು ಜಯ ವಿಠಲಾ ನಿನ್ನ ನಾಮವು ಶಾಂತಿ ಧಾಮವು ಸೌಖ್ಯದ ರಾಮ'... ಭಾಗ್ಯದಾ ಲಕ್ಷ್ಮಿ ಬಾರಮ್ಮ ಚಿತ್ರದ 'ಯಾವ ಕವಿಯೂ ಬರೆಯಲಾರ ಒಲವಿ ನಿಂದ ಕಣ್ಣೋಟದಿಂದ ಹೃದಯದಿಂದ ನೀ ಬರೆದ ಈ ಪ್ರೇಮ ಗೀತೆಯ'.... ಎಂಬ ಗೀತೆಯನ್ನು ಹಾಡುವ ಮೂಲಕ ನೆರೆದಿದ್ದ ಎಲ್ಲಾ ಸಾರ್ವಜನಿಕರನ್ನು ರಂಜಿಸಿದರು.

ಐಶ್ವರ್ಯ ಅನಂತ ಕಾರ್ತಿಕ್ ಅವರಿಂದ ಕಥಕ್ ನೃತ್ಯ ಪ್ರದರ್ಶನ ನಡೆಯಿತು. ಸಿದ್ದರಾಜು ಹೂಗಾರ ತಂಡದಿಂದ ನಡೆದ ಮಲ್ಲಕಂಬ ಪ್ರದರ್ಶನ ಎಲ್ಲರ ಗಮನ ಸೆಳೆಯಿತು. ಪುಟಾಣಿ ಮಕ್ಕಳು ನೀಡಿದ ಮಲ್ಲಕಂಬ ಪ್ರದರ್ಶನಕ್ಕೆ ಪ್ರೇಕ್ಷಕರಿಂದ ಸಾಕಷ್ಟು ಮೆಚ್ಚುಗೆ ವ್ಯಕ್ತವಾಯಿತು. ಬಳಿಕ ಹಾಸ್ಯನಟಿ ನಯನ ಮತ್ತು ತಂಡದಿಂದ ಹಾಸ್ಯ ಪ್ರದರ್ಶನ ನಡೆಯಿತು.


ನಟಿಯರಾದ ಗೌತಮಿ(ಸತ್ಯ), ಶುಭಾ ಪೂಂಜ, ರಂಜಿನಿ, ಭವ್ಯಗೌಡ ಅವರು ಹಲವು ಚಲನಚಿತ್ರ ಗೀತೆಗಳಿಗೆ ನೃತ್ಯ ಪ್ರದರ್ಶನ ಮಾಡಿದರು. ನಟಿಯರ ನೃತ್ಯ ಪ್ರದರ್ಶನ ಕಂಡ ಯುವಕರು, ಪ್ರೇಕ್ಷಕರು ಶಿಳ್ಳೆ ಹೊಡೆದು ಸಂಭ್ರಮಿಸಿದರು.

ವಿದ್ಯುತ್ ತಂತಿ ತಗುಲಿ ಕಬ್ಬು ಬೆಳೆ ನಾಶ

ಕಿಕ್ಕೇರಿ, ನ.27– ಹೋಬಳಿಯ ಗೋವಿಂದನಹಳ್ಳಿ ಗ್ರಾಮದ ಹೊರವಲಯದಲ್ಲಿರುವ ಕಬ್ಬಿನ ಗದ್ದೆಗೆ ವಿದ್ಯುತ್ ತಂತಿಯ ಕಿಡಿ ಹಾರಿ ಅಪಾರ ನಷ್ಟವಾಗಿದೆ.

ಲಕ್ಷ್ಮೀಪುರ ಗ್ರಾಮದ ನಿವಾಸಿ ರಾಜಮ್ಮ ಅವರು ಗೋವಿಂದನಹಳ್ಳಿ ಗ್ರಾಮದ ಹೊರವಲಯದಲ್ಲಿರುವ ತಮ್ಮ ಜಮೀನಿನಲ್ಲಿ ಕಬ್ಬು, ತೆಂಗು ಬೆಳೆದಿದ್ದರು. ಕಬ್ಬು ಕಟಾವಿಗೆ ಬಂದಿದ್ದು, ಕೆಲವು ದಿನಗಳಲ್ಲಿ ಕಟಾವು ಮಾಡಿಸಲು ಮುಂದಾಗಿದ್ದರು. ಮಧ್ಯಾಹ್ನ ಜಮೀನಿನಲ್ಲಿದ್ದ ವಿದ್ಯುತ್ ತಂತಿಯಿಂದ ಬೆಂಕಿಯಕಿಡಿ ಕಬ್ಬಿನ ಗದ್ದೆಗೆ ಹಾರಿದೆ. ಪರಿಣಾಮ ಒಣಗಿದ್ದ ಕಬ್ಬು, ತೆಂಗಿನಮರಗಳು ಸುಟ್ಟು ಭಸ್ಮವಾಗಿದೆ.



ಪಾಪೇಗೌಡ ನಿಧನ



ಶ್ರೀರಂಗಪಟ್ಟಣ, ನ.27– ತಾಲೂಕಿನ ಮೇಳಾಪುರ ಗ್ರಾಮದ ದೊಡ್ಡ ಯಜಮಾನರಾದ ಪಾಪೇಗೌಡ(86) ಅವರು ಇಂದು ನಿಧನರಾದರು.ಮೃತರು ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಸೋಮವಾರ) ಮಧ್ಯಾಹ್ನ 12ಕ್ಕೆ ಗ್ರಾಮದ ಅವರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕನಿಷ್ಠ ಮೂಲ ಸೌಕರ್ಯದಿಂದಲೂ ವಂಚಿತವಾಗಿದೆ ನಾಚನಹಳ್ಳಿ ಕೊಪ್ಪಲೂರು

ಬೀದಿದೀಪ ಇಲ್ಲ; ಅಶುಚಿತ್ವ ತಾಂಡವ

ಮೈಸೂರು, ನ.27(ಎಸ್‌ಬಿಡಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಿರ್ಮಿತ ಬಡಾವಣೆಯೊಂದರ ನಿವಾಸಿಗಳು ಆತಂಕದಲ್ಲೇ ದಿನದೂಡುವ ದುಸ್ಥಿತಿ ನಿರ್ಮಾಣವಾಗಿದೆ.

ಮೈಸೂರಿನ ಜೆ.ಪಿ.ನಗರ 3ನೇ ಹಂತ 'ಎ' ವಲಯ(ನಾಚನಹಳ್ಳಿ ಕೊಪ್ಪಲೂರು) ಬಡಾವಣೆ ಕನಿಷ್ಟ ಮೂಲ ಸೌಕರ್ಯಗಳಿಂದಲೂ ವಂಚಿತವಾಗಿದೆ. ವಿದ್ಯುತ್ ಶುಲ್ಕ ಪಾವತಿಸಿಲ್ಲ ಎನ್ನುವ ಕಾರಣಕ್ಕೆ ಬಡಾವಣೆಗೆ ಬೀದಿದೀಪಗಳ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದ್ದು, ಸಂಜೆಯ ನಂತರ ಮನೆಯಿಂದ ಹೊರಬರುವುದಕ್ಕೂ ನಿವಾಸಿಗಳು ಹೆದರುತ್ತಿದ್ದಾರೆ.

ಬೀದಿದೀಪಗಳಿಲ್ಲದ ಕಾರಣ ಸಂಜೆಯಾಗುತ್ತಿದ್ದಂತೆ ಇಡೀ ಬಡಾವಣೆ ಕಗ್ಗತ್ತಲ ಕೂಪವಾಗುತ್ತದೆ. ಮೊನ್ನೆ ಮನೆಯೊಂದರ ಬೀಗ ಮುರಿದು ಕಳ್ಳತನಕ್ಕೆ ಯತ್ನ ನಡೆಸಿರುವ ಘಟನೆ ನಡೆದಿದೆ. ರಸ್ತೆಯಲ್ಲಿ ಪುಂಡರ ಉಪಟಳ ಹೆಚ್ಚಾಗಿದೆ. ಮದ್ಯ, ಮಾದಕ ವಸ್ತುಗಳನ್ನು ಸೇವಿಸಿ ಮನಬಂದಂತೆ ವರ್ತಿಸುತ್ತಾರೆ. ರಾತ್ರಿ ವೇಳೆ ಕಾರುಗಳಲ್ಲಿ ಓಡಾಡುವುದಕ್ಕೂ ಭಯವಾಗುತ್ತದೆ. ಮಹಿಳೆಯರು, ಮಕ್ಕಳಂತೂ ಸಂಜೆಯಾದರೆ ಭಯದಿಂದ ತತ್ತರಿಸುವಂತಾಗಿದೆ ಎಂದು ನಿವಾಸಿಗಳು ದೂರಿದ್ದಾರೆ.

ಮುಡಾ 2004ರಲ್ಲಿ ನಿರ್ಮಿಸಿರುವ ಈ ಬಡಾವಣೆಯನ್ನು 2009ರಲ್ಲಿ ಮೈಸೂರು ನಗರ ಪಾಲಿಕೆಗೆ ಹಸ್ತಾಂತರಿಸಲಾಗಿದೆ. ಇತ್ತೀಚೆಗೆ ರಸ್ತೆಗೆ ಡಾಂಬರೀಕರಣ ಮಾಡಿದ್ದನ್ನು ಹೊರತುಪಡಿಸಿ ಮತ್ಯಾವ ಮೂಲ ಸೌಕರ್ಯಗಳೂ ಇಲ್ಲ. ಗಿಡಗಂಟಿಗಳು ಆಳೆತ್ತರಕ್ಕೆ ಬೆಳೆದು ನಿಂತಿವೆ. ಕುಡಿಯುವ ನೀರು, ಚರಂಡಿ, ಬೀದಿದೀಪ ಹೀಗೆ ಕನಿಷ್ಟ ಸೌಲಭ್ಯಗಳನ್ನೂ ಕಲ್ಪಿಸಿಲ್ಲ. ಬಡಾವಣೆ ನಾಮಫಲಕ, ಪಾರ್ಕ್ ಅಭಿವೃದ್ಧಿ, ನಗರ ಬಸ್ ವ್ಯವಸ್ಥೆ, ತಂಗುದಾಣ, ಹೈಮಾಸ್ಟ್ ದೀಪ, ವಾಟರ್ ಟ್ಯಾಂಕ್ ಇಂತಹ ಸೌಲಭ್ಯಗಳಂತೂ ಮರೀಚಿಕೆಯಾಗಿವೆ. ವರ್ಷದ ಹಿಂದೆಯೇ ಮುಡಾಗೆ ಮನವಿ ನೀಡಿ, ಸೌಕರ್ಯಕ್ಕೆ ಮನವಿ ಮಾಡಿದ್ದರೂ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಬೀದಿದೀಪ ವಿದ್ಯುತ್ ಬಿಲ್ ಪಾವತಿಸಿಲ್ಲ ಎಂದು ಸೆಸ್ಕ್ ಸಿಬ್ಬಂದಿ ಕೆಲ ದಿನಗಳ ಹಿಂದೆ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದಾರೆ. ಪರಿಣಾಮ ಇಡೀ ಬಡಾವಣೆಯಲ್ಲಿ ಸಂಜೆಯಾದರೆ ಕಗ್ಗತ್ತಲು ಆವರಿಸುತ್ತದೆ. ಓಡಾಡುವುದಕ್ಕೆ ತುಂಬಾ ಭಯವಾಗುತ್ತದೆ. ಬೀದಿದೀಪ ಇಲ್ಲವೆಂದು ತಿಳಿದ ಖದೀಮರು ಕಳ್ಳತನಕ್ಕೆ ಯತ್ನಿಸಿದ್ದಾರೆ. ಬೋರ್‌ವೆಲ್ ವಿದ್ಯುತ್ ಸಂಪರ್ಕವನ್ನೂ ಕಡಿತಗೊಳಿಸಿರುವುದರಿಂದ ಕುಡಿಯುವ ನೀರಿಗೂ ತುಂಬಾ ಸಮಸ್ಯೆಯಾಗಿದೆ. ಇಲ್ಲಿನ ಅವ್ಯವಸ್ಥೆಯ ಕಾರಣಕ್ಕೆ ಹೆಚ್ಚು ಮನೆಗಳನ್ನು ನಿರ್ಮಿಸಲು ನಿವೇಶನದಾರರು ಹಿಂದೇಟು ಹಾಕುತ್ತಿದ್ದಾರೆ. ಬಡಾವಣೆ ನಿರ್ಮಿಸಿದ ಮುಡಾ ಹಾಗೂ ಕಂದಾಯ ಪಾವತಿಸಿಕೊಳ್ಳುತ್ತಿರುವ ಪಾಲಿಕೆ ಮೇಲಿನ ನಂಬಿಕೆಯಿಂದ ಇಲ್ಲಿ ವಾಸವಿರುವವರ ನಮ್ಮ ದುಃಸ್ಥಿತಿ ಹೇಳತೀರದ್ದಾಗಿದೆ. ಈಗಲಾದರೂ ಸಂಬಂಧಪಟ್ಟ ಅಧಿಕಾರಿಗಳು ಬಡಾವಣೆಗೆ ಕನಿಷ್ಟ ಸೌಕರ್ಯ ಕಲ್ಪಿಸಿಕೊಡಬೇಕು. ತುರ್ತಾಗಿ ಬೀದಿದೀಪ ಹಾಗೂ ಬೋರ್‌ವೆಲ್ ವಿದ್ಯುತ್ ಸಂಪರ್ಕ ಕೊಡಿಸಬೇಕೆಂದು ಮನವಿ ಮಾಡಿದ್ದಾರೆ.

ಕೆ.ಆರ್.ಆಸ್ಪತ್ರೆಯಲ್ಲಿ ಇಂದು ಮುಖ್ಯಮಂತ್ರಿಗಳಿಂದ 10 ಬೆಡ್‌ವುಳ್ಳ ಐಸಿಯು ಘಟಕ, ಟೆಲಿ ಐಸಿಯು ಉದ್ಘಾಟನೆ



ಮೈಸೂರು, ನ.27– ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಸ್ಥಾಪಿಸಲಾಗಿರುವ '10 ಹಾಸಿಗೆಗಳುಳ್ಳ ಐಸಿಯು ಘಟಕ'(10 ಬೆಡ್–ಐಸಿಯು) ಹಾಗೂ 'ಟೆಲಿ ಐಸಿಯು ಹಬ್' ಅನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಾಳೆ(ನ.28) ಉದ್ಘಾಟಿಸಲಿದ್ದಾರೆ.

ರಾಜ್ಯದಾದ್ಯಂತ 41 ಸರ್ಕಾರಿ ಆಸ್ಪತ್ರೆಯಲ್ಲಿ (40 10–ಬೆಡ್–ಐಸಿಯು ಹಾಗೂ 1 ಟೆಲಿ ಐಸಿಯು ಹಬ್) 10 ಬೆಡ್ ಟೆಲಿ ಐಸಿಯು ಹಾಗೂ ಟೆಲಿ ಐಸಿಯು ಘಟಕಗಳಿಂದ ದಿನದ 24 ಗಂಟೆಯೂ ಸೇವೆ ಒದಗಿಸಲು ಸಿದ್ದತೆ ನಡೆಸಲಾಗಿದೆ. ಖಾಸಗಿ–ಸಾರ್ವಜನಿಕ ಪಾಲುದಾರಿಕೆಯಡಿಯ ಯೋಜನೆ ಇದಾಗಿದ್ದು, ದೇಶದ ಪ್ರತಿ ಜಿಲ್ಲೆಯಲ್ಲಿ ಕನಿಷ್ಟ 10 ಸರ್ಕಾರಿ ಆಸ್ಪತ್ರೆಗಳಲ್ಲಿ 10 ಬೆಡ್ ಐಸಿಯು ಘಟಕಗಳನ್ನು ಸ್ಥಾಪಿಸುವುದಾಗಿದೆ.

ಎನ್‌ಜಿಓ ಸಂಸ್ಥೆಗಳಾದ ಇ–ಗವರ್ನ್‌ಮೆಂಟ್ಸ್ ಫೌಂಡೇಶನ್, ಕ್ರೆಫ್ಟೋ ರಿಲೀಫ್, ಗಿವ್‌ಇಂಡಿಯಾ, ಕರುಣಾ ಟ್ರಸ್ಟ್ ಹಾಗೂ ಖಾಸಗಿ ಸಂಸ್ಥೆಗಳಾದ ಹೆಚ್‌ಡಿಎಫ್‌ಸಿ ಬ್ಯಾಂಕ್ ಪರಿವರ್ತನ್ ಮತ್ತು ಸ್ವಿಸ್ ಮೂಲದ ಹ್ಯಾಮಿಲ್ಟನ್ ಮೆಡಿಕಲ್ ಮತ್ತು ಗೂಗಲ್ ಕ್ಲೌಡ್ ಸಂಸ್ಥೆಗಳ ಸಹಯೋಗದೊಂದಿಗೆ 10 ಬೆಡ್ ಐಸಿಯು ಘಟಕಗಳನ್ನು ಸ್ಥಾಪಿಸಲಾಗುತ್ತಿದೆ.

ಪ್ರಮುಖವಾಗಿ ನುರಿತ ವೈದ್ಯರ ಕೊರತೆ ಇರುವ ತಾಲೂಕು ಸರ್ಕಾರಿ ಆಸ್ಪತ್ರೆಗಳಲ್ಲಿ 10 ಬೆಡ್ ಐಸಿಯು ಘಟಕಗಳ ಸ್ಥಾಪಿಸಿ ಅದರ ನಿರ್ವಹಣೆಗಾಗಿ ಟೆಲಿ ಐಸಿಯು ಘಟಕವನ್ನು ಸ್ಥಾಪಿಸಲಾಗುತ್ತಿದೆ. ಅತ್ಯಾಧುನಿಕ ವೈದ್ಯಕೀಯ ಉಪಕರಣಗಳ ಬಳಸಿ ಸೂಕ್ತ ಮಾರ್ಗದರ್ಶನದ ಮೂಲಕ ತಾಲೂಕು ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಗುಣಮಟ್ಟದ ಚಿಕಿತ್ಸೆ ನೀಡಲು 10 ಬೆಡ್ ಐಸಿಯು ಹಾಗೂ ಟೆಲಿ ಐಸಿಯು ಘಟಕ ನೆರವಾಗಲಿದೆ ಎಂದು ಆಧಾರ್ ಸೇವಾ ಕೇಂದ್ರದ ಸಂಸ್ಥಾಪಕ ಮುಖ್ಯ ತಾಂತ್ರಿಕ ಅಧಿಕಾರಿ, 10 ಬೆಡ್–ಐಸಿಯುನ ಸಹ ಸಂಸ್ಥಾಪಕರೂ ಆದ ಇ–ಗವರ್ನ್‌ಮೆಂಟ್ಸ್ ಫೌಂಡೇಶನ್‌ನ ಶ್ರೀಕಾಂತ್ ನಾದಮುನಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ವಿದ್ಯುತ್, ಆಕ್ಸಿಜನ್, ವೈದ್ಯಕೀಯ ನೆರವು, ದಾದಿಯರು, ವೈದ್ಯರು ಮತ್ತು ತಂತ್ರಜ್ಞರ ಒಳಗೊಂಡು ಈ ಘಟಕ ಸಮರ್ಪಕ ರೀತಿ ಕಾರ್ಯನಿರ್ವಹಿಸುತ್ತದೆ. ಪ್ರತಿ 10 ಬೆಡ್–ಐಸಿಯು ಘಟಕವು ಇನ್‌ಫ್ಯೂಷನ್ ಪಂಪ್‌ಗಳು, ಸಿರಿಂಜ್ ಪಂಪ್‌ಗಳು, ಮಲ್ಟಿ ಚಾನಲ್ ಮಾನಿಟರ್‌ಗಳು, ಡಿಫಿಬ್ರಿಲೇಟರ್‌ಗಳು ಅಥವಾ ಆಕ್ಸಿಜನ್‌ನ ಸಾಂದ್ರಕಗಳಂತಹ ಇತ್ತೀಚಿನ ಅತ್ಯಾಧುನಿಕ ವೈದ್ಯಕೀಯ ಸಲಕರಣೆಗಳನ್ನು ಒಳಗೊಂಡಿರುತ್ತದೆ. ಅಲ್ಲದೆ ಪ್ರತಿ ಐಸಿಯುಗೆ ಕನಿಷ್ಟ ಎರಡು ವೆಂಟಿಲೇಟರ್‌ಗಳನ್ನು ಅಳವಡಿಸಲಾಗಿದೆ ಎಂದರು.

ಹಲವು ಎನ್‌ಜಿಓ ಸಂಸ್ಥೆಗಳ ಸಹಕಾರದೊಂದಿಗೆ ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ, ಮಣಿಪುರ, ಅಸ್ಸಾಂ, ನಾಗಾಲ್ಯಾಂಡ್, ಸಿಕ್ಕಿಂ ಮತ್ತು ಮೇಘಾಲಯ ಸೇರಿದಂತೆ ಎಂಟು ರಾಜ್ಯಗಳಲ್ಲಿ 200 ಆಸ್ಪತ್ರೆಗಳಲ್ಲಿ 10 ಬೆಡ್–ಐಸಿಯು ಈಗಾಗಲೇ ಐಸಿಯು ಘಟಕಗಳು ಈಗಾಗಲೇ ನಿಯೋಜನೆಗೊಂಡಿವೆ ಎಂದು ಮಾಹಿತಿ ನೀಡಿದರು.

ನನ್ನ ತಾಯಿಗೆ ಸಮರ್ಪಣೆ...

ಕೆ.ಆರ್.ಆಸ್ಪತ್ರೆಯಲ್ಲಿಯೇ ನೀನು ಜನಿಸಿದ್ದು, ವೈದ್ಯರು ಸೇರಿದಂತೆ ಪ್ರತಿಯೊಬ್ಬರು ಆತ್ಮೀಯವಾಗಿ ನನಗೆ ಚಿಕಿತ್ಸೆ ನೀಡಿದ್ದರು ಎಂದು ಆಗಾಗ ನಮ್ಮ ತಾಯಿ ಹೇಳುತ್ತಿದ್ದರು.



ಈಗ ಇದೇ ಆಸ್ಪತ್ರೆಯಲ್ಲಿ ವೈಯಕ್ತಿಕವಾಗಿ ಸುಮಾರು 60 ಲಕ್ಷ ರೂ.ಗಳ ವೆಚ್ಚದಲ್ಲಿ 10 ಬೆಡ್ ಐಸಿಯು ಘಟಕ ಸ್ಥಾಪಿಸಿರುವುದು ತೃಪ್ತಿ ನೀಡಿದೆ. ಈ ಘಟಕವನ್ನು ನನ್ನ ತಾಯಿಗೆ ಸಮರ್ಪಣೆ ಮಾಡುತ್ತಿದ್ದೇನೆ ಎಂದ ಶ್ರೀಕಾಂತ್ ನಾದಮುನಿ ಅವರು 10 ಬೆಡ್ ಐಸಿಯು ಹಾಗೂ ಟೆಲಿ ಐಸಿಯು ಘಟಕ ಬಡ ರೋಗಿಗಳಿಗೆ ದೊಡ್ಡಮಟ್ಟದಲ್ಲಿ ನೆರವಾಗಲಿದೆ ಎಂದು ಹೇಳಿದರು.

ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ನಾನು ಮತ್ತು ನನ್ನ ಪತ್ನಿ ಸುನೀತಾ ನಾದಮುನಿ ಮೈಸೂರಿನಲ್ಲಿಯೇ ಕೆಲಸ ಮಾಡುತ್ತಿದ್ದೆವು. ಪ್ರತಿದಿನ ವೆಂಟಿಲೇಟರ್ ಹಾಗೂ ಐಸಿಯು ಬೆಡ್‌ಗಳ ಸಹಾಯ ಕೇಳಿ ಹಲವರು ಕರೆ ಮಾಡುತ್ತಿದ್ದರು. ಸಾಕಷ್ಟು ಜನರಿಗೆ ಸೂಕ್ತ ಚಿಕಿತ್ಸೆ ದೊರೆಯುವುದು ಕಷ್ಟವಾಗಿತ್ತು. ಅದರಲ್ಲೂ ಗ್ರಾಮೀಣ ಭಾಗದಲ್ಲಿ ಸಮರ್ಪಕ ಚಿಕಿತ್ಸೆಯಿಲ್ಲದೆ ಜನರು ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಆಗಲೇ ಸಾರ್ವಜನಿಕ ಆಸ್ಪತ್ರೆಗಳಲ್ಲಿ 10 ಬೆಡ್‌ಗಳ ಸಣ್ಣ ಟೆಲಿ ಐಸಿಯು ಘಟಕ ಸ್ಥಾಪಿಸುವ ಆಲೋಚನೆ ನಮಗೆ ಬಂದಿತು ಎಂದರು.

ರಕ್ತದಾನ ಶಿಬಿರಗಳಿಂದ ನೂರಾರು ಜೀವಗಳು ಉಳಿಯಲಿವೆ; ಜಾವಗಲ್ ಶ್ರೀನಾಥ್



ಮೈಸೂರು, ನ27– ರಕ್ತದಾನ ಶಿಬಿರಗಳಿಂದ ನೂರಾರು ಜೀವಗಳನ್ನು ಉಳಿಸಬಹುದಾಗಿದೆ. ನಾನು ಕೂಡ ವರ್ಷದಲ್ಲಿ ಕನಿಷ್ಟ ಐದು ಜನರಿಗಾದರೂ ರಕ್ತ ಕೊಡಿಸುವ ಸಹಾಯ ಮಾಡಬೇಕೆಂದು ನಿರ್ಧರಿಸಿದ್ದೇನೆ ಎಂದು ಅಂತರಾಷ್ಟ್ರೀಯ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಹೇಳಿದರು.

ಮೈಸೂರಿನ ಜೆ.ಪಿ.ನಗರದಲ್ಲಿ ರೋಟರಿ ಕ್ಲಬ್ ಜಯಪ್ರಕಾಶ್ ನಗರದ ವತಿಯಿಂದ ಆಯೋಜಿಸಿದ್ದ ಬೃಹತ್ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ನನ್ನ ತಾಯಿ ಅವರಿಗೆ ಆರೋಗ್ಯ ಸಮಸ್ಯೆ ಉಂಟಾಗಿ ಅವರನ್ನು ಆಸ್ಪತ್ರೆಗೆ ದಾಖಲಿಸಿದಾಗ ತುರ್ತಾಗಿ ರಕ್ತದ ಅವಶ್ಯಕತೆ ಇತ್ತು. ರಕ್ತದ ಹುಡುಕಾಟದಲ್ಲಿನ ಆ ಸಂದರ್ಭದಲ್ಲಿ, ನನಗಾದ ಭಯ, ಆತಂಕದಿಂದ ರಕ್ತದ ಮಹತ್ವ ಎಷ್ಟಿದೆ ಎಂಬುದರ ಅರಿವಾಯಿತು. ಅಂದಿನಿಂದ ವರ್ಷಕ್ಕೆ ಐದು ಜನರಿಗಾದರೂ ರಕ್ತವನ್ನು ಕೊಡಿಸಿ ಜೀವ ಉಳಿಸಲು ಸಹಾಯ ಮಾಡಬೇಕೆಂದು ನಿರ್ಧರಿಸಿದ್ದೇನೆ ಎಂದರು.

ರೋಟರಿ ಜಿಲ್ಲಾ ಗವರ್ನರ್ ಹೆಚ್.ಆರ್. ಕೇಶವ್, ಸಹಾಯಕ ಗವರ್ನರ್ ಆರ್. ವೆಂಕಟೇಶ್, ಜೆಪಿನಗರ ರೋಟರಿ ಕ್ಲಬ್ ಅಧ್ಯಕ್ಷ ಡಾ. ಮುಳ್ಳೂರು ನಂಜುಂಡಸ್ವಾಮಿ, ಜೀವಧಾರ ರಕ್ತನಿಧಿ ಕೇಂದ್ರದ ವ್ಯವಸ್ಥಾಪಕ ನಿರ್ದೇಶಕ ಗಿರೀಶ್, ನಗರ ಪಾಲಿಕೆ ಸದಸ್ಯೆ ಶಾರದಮ್ಮ ಮತ್ತಿತರರಿದ್ದರು.

ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಸಾಂಸ್ಕೃತಿಕ ಕಲರವ




ಮೈಸೂರು, ನ.27(ಎಂಕೆ)– ಮೈಸೂರು ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಸಾಂಸ್ಕೃತಿಕ ಕಲರವ.. ಅಂಧ ಕಲಾವಿದರ ಸಂಗೀತ ಸುಧೆ, ನೃತ್ಯ ಹಾಗೂ ಪೌರಾಣಿಕ ನಾಟಕ ಪ್ರದರ್ಶನಗಳು ಪ್ರವಾಸಿಗರನ್ನು ಸೆಳೆಯುತ್ತಿದೆ.

ದಸರಾ ವಸ್ತುಪ್ರದರ್ಶನದ ಪಿ.ಕಾಳಿಂಗ ರಾವ್ ಗಾನಮಂಟಪದಲ್ಲಿ ಮೈಸೂರು ಜಿಲ್ಲಾ ಕನ್ನಡ ವೃತ್ತಿಪರ ರಂಗಭೂಮಿ ಮಹಿಳಾ ಕಲಾವಿದರಿಂದ 'ಮೋಹಿನಿ ಭಸ್ಮಾಸುರ ಪೌರಾಣಿಕ ನಾಟಕ' ಬೆಂಗಳೂರಿನ ರಂಗರಸಧಾರೆ ತಂಡದ 'ಶ್ರೀ ಚಾಮುಂಡೇಶ್ವರಿ ವೈಭವ' ನೃತ್ಯ ರೂಪಕ, ನಿತ್ಯ ನಿರಂತರ ಟ್ರಸ್ಟ್‌ನ ವಿಶೇಷಚೇತನ ಮಕ್ಕಳ ನೃತ್ಯ ಹಾಗೂ ಹೆಮ್ಮೆಯ ಕೆಚ್ಚೆದೆಯ ಕನ್ನಡಿಗರ ಫೌಂಡೇಶನ್‌ನ ಅಂಧಕಲಾವಿದರಿಂದ ಸುಗಮ ಸಂಗೀತ ಕಲಾಭಿಮಾನಿಗಳಿಗೆ ಮನರಂಜನೆ ರಸದೌತಣ ನೀಡಿತು.

ಪ್ರಮಾಣ ಪತ್ರ ವಿತರಣೆ: ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ ಕಲಾವಿದರಿಗೆ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಪ್ರಮಾಣ ಪತ್ರ ವಿತರಿಸಿ, ಪ್ರೋತ್ಸಾಹಿಸಿದರು. ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಕೆ.ರುದ್ರೇಶ್, ದಸರಾ ವಸ್ತುಪ್ರದರ್ಶನ ನಿರೂಪಕ ಅಜಯ್ ಶಾಸ್ತ್ರಿ, ನಿರ್ವಾಹಕ ಮಧುಪ್ರಕಾಶ್ ಮತ್ತಿತರರಿದ್ದರು.

ಭಾರತೀಯ ಒಲಂಪಿಕ್ ಸಂಸ್ಥೆ ಅಧ್ಯಕ್ಷರಾಗಿ ಪಿಟಿ ಉಷಾ ಅವಿರೋಧ ಆಯ್ಕೆ



ನವದೆಹಲಿ: ಭಾರತೀಯ ಒಲಂಪಿಕ್ ಸಂಸ್ಥೆಯ ಅಧ್ಯಕ್ಷರಾಗಿ ಮಾಜಿ ಓಟಗಾರ್ತಿ, ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತೆ ಪಿಟಿ ಉಷಾ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇಂದು ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದ್ದು ಉಷಾ ಅವರನ್ನು ಹೊರತುಪಡಿಸಿ ಯಾರೊಬ್ಬರೂ ಉಮೇದುವಾರಿಕೆ ಸಲ್ಲಿಸದ ಕಾರಣ ಅವಿರೋಧ ಆಯ್ಕೆ ನಡೆದಿದೆ.

ಒಲಂಪಿಕ್ ಸಂಸ್ಥೆಗೆ ಆಯ್ಕೆಯಾದ ಮೊದಲ ಮಹಿಳೆ ಎಂಬ ಖ್ಯಾತಿಗೆ ಪಿಟಿ ಉಷಾ ಅವರು ಪಾತ್ರರಾದರು.

ಸ್ಕೌಟ್ಸ್ ಅಂಡ್ ಗೈಡ್ಸ್ ಶಿಕ್ಷಕರ ಮೂಲ ತರಬೇತಿ ಶಿಬಿರ



ಮಡಿಕೇರಿ,ನ.27– ಶಾಲಾ– ಕಾಲೇಜು ವಿದ್ಯಾರ್ಥಿಗಳಲ್ಲಿ ರಾಷ್ಟ್ರಪ್ರೇಮ, ರಾಷ್ಟ್ರೀಯ ಭಾವೈಕ್ಯತೆ, ಪ್ರಕೃತಿ ಪ್ರೇಮ, ಉತ್ತಮ ವ್ಯಕ್ತಿತ್ವ, ಸೇವಾ ಮನೋಭಾವ ಹಾಗೂ ಉತ್ತಮ ನಾಯಕತ್ವದ ಗುಣಗಳನ್ನು ಬೆಳೆಸಲು ಶಿಕ್ಷಕರು ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳು ಸ್ಕೌಟ್ಸ್ ಗೈಡ್ಸ್ ತತ್ವಗಳನ್ನು ಕಲಿಸಬೇಕು ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ರಾಜ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯಾ ಕರೆ ನೀಡಿದ್ದಾರೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಕೊಡಗು ಜಿಲ್ಲಾ ಸಂಸ್ಥೆಯ ವತಿಯಿಂದ ಮಡಿಕೇರಿ ನಗರದ ಪೊನ್ನಮ್ಮ ಕುಶಾಲಪ್ಪ ಸ್ಕೌಟ್ಸ್–ಗೈಡ್ಸ್ ಭವನದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಕರಿಗೆ ಒಂದು ವಾರ ಕಾಲ ಏರ್ಪಡಿಸಿದ್ದ ಮೂಲ ತರಬೇತಿ ಶಿಬಿರದಲ್ಲಿ ಅಂತಾರಾಷ್ಟ್ರೀಯ ಸ್ಕೌಟ್ಸ್ ಹಾಗೂ ಗೈಡ್ಸ್ ಸಂಸ್ಥೆಯು ಬೆಳೆದು ಬಂದ ದಾರಿ ಹಾಗೂ ಸಂಸ್ಥೆ ಸಮಾಜದ ವಿವಿಧ ಸ್ತರಗಳಲ್ಲಿ ಕೈಗೊಂಡಿರುವ ಸೇವಾ ಚಟುವಟಿಕೆಗಳ ಕುರಿತು ವಿವರಿಸಿದರು.

ವಿದ್ಯಾರ್ಥಿಗಳು ಉತ್ತಮ ನಾಯಕತ್ವ ಹಾಗೂ ದೇಶಸೇವಾ ಮನೋಭಾವ ಬೆಳೆಸಿಕೊಂಡು ಸತ್ಪ್ರಜೆಯಾಗಿ ರೂಪುಗೊಳ್ಳಲು ವಿದ್ಯಾರ್ಥಿಗಳಲ್ಲಿ ತರಬೇತಿ ನಿರತ ಶಿಕ್ಷಕರು ಸೂಕ್ತ ಮಾರ್ಗದರ್ಶನ ನೀಡಬೇಕು ಎಂದರು.

ರಾಜ್ಯದಲ್ಲಿ 2 ಕೋಟಿಯಷ್ಟು ವಿದ್ಯಾರ್ಥಿ ಸಮುದಾಯ ಈ ಸಂಸ್ಥೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಭವಿಷ್ಯದಲ್ಲಿ ಶಾಲಾ ಕಾಲೇಜುಗಳೊಂದಿಗೆ ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲೂ ಕೂಡ ಮತ್ತಷ್ಟು ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸಂಸ್ಥೆಯು ವಿವಿಧ ಯೋಜನೆಗಳನ್ನು ರೂಪಿಸಿದೆ.

ಕಷ್ಟದ ಸಮಯದಲ್ಲಿ ಸ್ಪಂದಿಸಿ ಸೇವಾ ಮನೋಭಾವದಿಂದ ಕರ್ತವ್ಯ ಮಾಡುವ ಸದ್ಗುಣಗಳನ್ನು ಹಾಗೂ ಹೃದಯವಂತಿಕೆಯನ್ನು ಸ್ಕೌಟ್ಸ್ ಹಾಗೂ ಗೈಡ್ಸ್ ಸಂಸ್ಥೆಯು ಕಲಿಸುತ್ತದೆ. ಕೊರೊನಾ ಸಂಕಷ್ಟದ ಅವಧಿಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ನ ಸ್ವಯಂ ಸೇವಕರು ಕೊಡಗು ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಕೈಗೊಂಡ ಆರೋಗ್ಯ ಹಾಗೂ ಸಾಮಾಜಿಕ ಸೇವಾ ಕಾರ್ಯ ಶ್ಲಾಘನೀಯವಾದುದು ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಸಂಸ್ಥೆಯ ಪ್ರಧಾನ ಆಯುಕ್ತ ಕೆ.ಟಿ.ಬೇಬಿ ಮ್ಯಾಥ್ಯೂ ಮಾತನಾಡಿ, ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಸಂಸ್ಥೆಯ ವತಿಯಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳಲ್ಲಿ ಶಿಸ್ತು–ಸಂಯಮ ಹಾಗೂ ನಾಯಕತ್ವ ಗುಣಗಳನ್ನು ಬೆಳೆಸುವ ದಿಸೆಯಲ್ಲಿ ಹಲವಾರು ತರಬೇತಿ ಹಾಗೂ ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತಿದೆ. ಜಿಲ್ಲೆಯಲ್ಲಿ ಪ್ರಕೃತಿ ವಿಕೋಪ ಹಾಗೂ ಕೋವಿಡ್–19 ಸಂಕಷ್ಟದ ಸಂದರ್ಭ ಸಂಸ್ಥೆಯ ವತಿಯಿಂದ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ತಮ್ಮನ್ನು ವಿವಿಧ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡು ಉತ್ತಮ ಸೇವೆ ಸಲ್ಲಿಸಿದ್ದು ಹೆಮ್ಮೆಯ ಸಂಗತಿ ಎಂದರು.

ಸಂಸ್ಥೆಯ ರಾಜ್ಯ ಮುಖ್ಯ ತರಬೇತುದಾರ ಬಾಲಕೃಷ್ಣ, ಗೋಪಾಲಕೃಷ್ಣ, ಶ್ರೀರಾಮ್, ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವಸಂತಿ, ಖಜಾಂಚಿ ಪುಷ್ಪವೇಣಿ, ಸ್ಥಾನೀಕ ಆಯುಕ್ತ ಎಚ್.ಆರ್.ಮುತ್ತಪ್ಪ ಜಿಲ್ಲಾ ಸಂಘಟಕಿ ಯು.ಸಿ. ದಮಯಂತಿ, ಸಂಪನ್ಮೂಲ ತರಬೇತುದಾರರಾದ ಮೈತ್ರಿರಾವ್, ಜಾಜಿ, ಸುಲೋಚನ, ಅಲೀಮ, ರವಿಚಂದ್ರ ಹಾಗೂ ಶಿಕ್ಷಕರು ಈ ಸಂದರ್ಭ ಹಾಜರಿದ್ದರು.

ಕಾವೇರಿ ನಿಸರ್ಗಧಾಮ ಪರ್ಯಾಯ ಸೇತುವೆ ಉದ್ಘಾಟನೆ



ಕುಶಾಲನಗರ, ನ.27– ಸಮೀಪದ ಪ್ರವಾಸಿ ತಾಣ ಕಾವೇರಿ ನಿಸರ್ಗಧಾಮದ ತೂಗುಸೇತುವೆಯ ದುರಸ್ತಿ ಕಾರ್ಯ ಹಿನ್ನೆಲೆ ಪ್ರವಾಸಿ ತಾಣಕ್ಕೆ ಪ್ರವೇಶಿಸಲು ತಾತ್ಕಾಲಿಕವಾಗಿ ನಿರ್ಮಿಸಿರುವ ಪರ್ಯಾಯ ಸೇತುವೆಯನ್ನು ಭಾನುವಾರ ಶಾಸಕ ಅಪ್ಪಚ್ಚುರಂಜನ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ತೂಗುಸೇತುವೆ ದುರಸ್ತಿಗಾಗಿ 20 ದಿನಗಳ ಕಾಲ ಪ್ರವಾಸಿ ತಾಣ ಬಂದ್ ಮಾಡಲಾಗಿದೆ. ಶೀಘ್ರದಲ್ಲೇ ದುರಸ್ಥಿ ಕಾರ್ಯ ಪೂರ್ಣಗೊಳ್ಳಲಿದೆ. ಅಲ್ಲಿ ತನಕ ಪ್ರವಾಸಿಗರ ಅನುಕೂಲಕ್ಕೆ ಈ ತಾತ್ಕಾಲಿಕ ಸೇತುವೆ ಉಪಯೋಗಕ್ಕೆ ಬರಲಿದೆ ಎಂದರು.

ನದಿಗೆ ಅಡ್ಡಲಾಗಿ ಶಾಶ್ವತ ಸೇತುವೆ ನಿರ್ಮಾಣದ ಬಗ್ಗೆ ಪ್ರತಿಕ್ರಿಯಿಸಿದ ಶಾಸಕರು, ತೂಗುಸೇತುವೆಗಳು ಮಾತ್ರ ಪ್ರವಾಸೋದ್ಯಮಕ್ಕೆ ಪೂರಕವಾಗುತ್ತವೆ. ಶಾಶ್ವತ ಸೇತುವೆ ಪ್ರವಾಸಿ ತಾಣಗಳಿಗೆ ಅಷ್ಟಾಗಿ ಸೂಕ್ತ ಎನಿಸುವುದಿಲ್ಲ ಎಂದು ತಿಳಿಸಿದರು.

ನಿಸರ್ಗಧಾಮದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ತೂಗುಸೇತುವೆ 27 ವರ್ಷದ ಹಳೆಯದಾದ ಕಾರಣ ಶಿಥಿಲಗೊಂಡಿದ್ದು ದುರಸ್ತಿ ಕಾರ್ಯ ಹಿನ್ನೆಲೆಯಲ್ಲಿ ಪ್ರವಾಸಿ ತಾಣ ಈಗಾಗಲೆ ಬಂದ್ ಮಾಡಲಾಗಿದೆ. ಪ್ರವಾಸಿಗರಿಗೆ ಒಳ ತೆರಳಲು ಪರ್ಯಾಯ ಮಾರ್ಗವಾಗಿ ಅರಣ್ಯ ಇಲಾಖೆ ಅಂದಾಜು 5 ಲಕ್ಷ ವೆಚ್ಚದಲ್ಲಿ ನದಿಗೆ ತಾತ್ಕಾಲಿಕ ಸೇತುವೆ ನಿರ್ಮಿಸಿದೆ. 2800 ಮರಳಿನ ಮೂಟೆ, 9 ಸಿಮೆಂಟ್ ಪೈಪ್‌ಗಳನ್ನು ನದಿಗೆ ಅಡ್ಡಲಾಗಿ ಅಳವಡಿಸಿ ಅದರ ಮೇಲೆ ಮರದ ಹಲಗೆಗಳನ್ನು ಹಾಕಿ ತಾತ್ಕಾಲಿಕ ಸೇತುವೆ ನಿರ್ಮಾಣ ಮಾಡಿ ಭಾನುವಾರದಿಂದ ಪ್ರವಾಸಿಗರ ಪ್ರವೇಶಕ್ಕೆ ಅನುವು ಮಾಡಿಕೊಟ್ಟಿದೆ.

ಈ ಸಂದರ್ಭ ಡಿಎಫ್‌ಒ ಎ.ಟಿ. ಪೂವಯ್ಯ, ಎಸಿಎಫ್ ಗೋಪಾಲ್, ಆರ್‌ಎಫ್‌ಒಗಳಾದ ಶಿವರಾಂ, ಚೇತನ್, ಡಿಆರ್‌ಎಫ್‌ಒ ವಿಲಾಸ್ ಮತ್ತು ಸಿಬ್ಬಂದಿಗಳು, ಸ್ಥಳೀಯ ಉದ್ಯಮಿ ಅಬ್ದುಲ್ ಸಲಾಂ, ಮುರಳಿ ಮತ್ತಿತರರು ಇದ್ದರು.

ಗೋಣಿಕೊಪ್ಪ ಬೈಪಾಸ್ ರಸ್ತೆ ಅಭಿವೃದ್ಧಿ ಕಾಮಗಾರಿಗಾಗಿ ಸಂಚಾರ ನಿಷೇಧ



ಗೋಣಿಕೊಪ್ಪ, ನ.27– ಇಲ್ಲಿನ ಬೈಪಾಸ್ ರಸ್ತೆ ಅಭಿವೃದ್ಧಿ ಕಾಮಗಾರಿ ಹಿನ್ನೆಲೆಯಲ್ಲಿ ಪಡಿಸಲು 30 ದಿನ ರಸ್ತೆ ಸಂಚಾರ ನಿಷೇಧಿಸಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದು, ಮೊದಲ ದಿನ ಕಾಮಗಾರಿ ನಡೆಯದೆ ವ್ಯರ್ಥವಾಯಿತು.

ಕಿತ್ತು ಹೋಗಿರುವ ರಸ್ತೆಗೆ ಕಾಂಕ್ರಿಟ್ ರಸ್ತೆ ನಿರ್ಮಿಸಲು 50 ಲಕ್ಷ ರೂ. ಅನುದಾನ ಬಿಡುಗಡೆಯಾಗಿದ್ದು, ರಸ್ತೆ ಕಾಮಗಾರಿ ನಡೆಸಲು ಪಂಚಾಯತ್‌ರಾಜ್ ಇಲಾಖೆ ಮನವಿಯಂತೆ ನವೆಂಬರ್ 26 ರಿಂದ ಡಿಸೆಂಬರ್ 25 ರವರೆಗೆ ರಸ್ತೆ ಸಂಚಾರ ನಿಷೇಧ ಮಾಡಿತ್ತಾದರೂ ಮೊದಲ ದಿನ ಕಾಮಗಾರಿ ನಡೆಯಲಿಲ್ಲ. ಸಂಪರ್ಕ ಕಡಿತ ಗೊಳಿಸುವ ಆದೇಶದಿಂದಾಗಿ ಅಲ್ಲಿನ ವ್ಯಾಪಾರಿಗಳು, ಸಾರ್ವಜನಿಕರು ಗೊಂದಲಗೊಂಡರು. 5 ದಿನಗಳ ಹಿಂದೆಯಷ್ಟೆ ಸ್ಥಳೀಯ ಗ್ರಾಮ ಪಂಚಾಯಿತಿ ರಸ್ತೆ ಸಂಚಾರ ಬಂದ್ ಮಾಡುವ ಸೂಚನೆ ನೀಡಿದ್ದಾಗ ಸ್ಥಳೀಯ ವ್ಯಾಪಾರಿಗಳು ವಿರೋಧ ವ್ಯಕ್ತಪಡಿಸಿದ್ದರು. ದಿಡೀರ್ ಬೆಳವಣಿಗೆಯಿಂದ ವ್ಯಾಪಾರಕ್ಕಾಗಿ ತಂದ ವಸ್ತುಗಳ ಮಾರಾಟಕ್ಕೆ ಬದಲಿ ವ್ಯವಸ್ಥೆಗೆ ಅವಕಾಶ ನೀಡಬೇಕಿತ್ತು ಎಂದು ಒತ್ತಾಯಿಸಿದ್ದರು. ಇದೀಗ ಸಂಚಾರ ನಿಷೇಧಿಸಿದ್ದರೂ ಕಾಮಗಾರಿ ಆರಂಭಿಸದೆ 30 ದಿನದ ನಿಷೇಧದಲ್ಲಿ 1 ದಿನ ವ್ಯರ್ಥಗೊಂಡಿರುವ ಬಗ್ಗೆ ಸ್ಥಳೀಯರು ಬೇಸರ ವ್ಯಕ್ತಪಡಿಸಿದರು. ಏಕಮುಖ ಸಂಚಾರ ನಿಯಮದಲ್ಲಿರುವ ಪಟ್ಟಣದ ಮುಖ್ಯರಸ್ತೆಯನ್ನು ದ್ವಿಮುಖ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗಿದ್ದು, ವಾಹನ ಸಂಚಾರ ಸುಲಲಿತವಾಗಿ ನಡೆಯಿತು.

ಇಂದು ವಿಕಲಚೇತನರಿಗೆ ಆಟೋಟ ಸ್ಪರ್ಧೆ

ಮಡಿಕೇರಿ, ನ.27– ನಗರದ ಶಿಶು ಅಭಿವೃದ್ಧಿ ಯೋಜನಾ ಇಲಾಖೆ ವತಿಯಿಂದ ವಿಶ್ವ ವಿಕಲಚೇತನರ ದಿನಾಚರಣೆ ಪ್ರಯುಕ್ತ ತಾಲೂಕಿನ ವಿಕಲಚೇತನರಿಗೆ ನಗರದ ಗಾಂಧಿ ಮೈದಾನದಲ್ಲಿ ನ.28 ರಂದು ಬೆಳಗ್ಗೆ 10 ಗಂಟೆಗೆ ಆಟೋಟ ಸ್ಪರ್ಧೆ ನಡೆಯಲಿದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ತಿಳಿಸಿದ್ದಾರೆ.

ಕುಶಾಲನಗರದಲ್ಲಿ ಕಾಂಗ್ರೆಸ್, ಬಿಜೆಪಿ ಕಾರ್ಯಕರ್ತರು ಜೆಡಿಎಸ್ ಸೇರ್ಪಡೆ



ಕುಶಾಲನಗರ, ನ.27– ಕೊಡಗು ಜಿಲ್ಲಾ ಯುವ ಜೆಡಿಎಸ್ ಆಶ್ರಯದಲ್ಲಿ ಜೆಡಿಎಸ್ ಪಕ್ಷ ಸೇರ್ಪಡೆ ಕಾರ್ಯಕ್ರಮ ಕುಶಾಲನಗರದ ಖಾಸಗಿ ಸಭಾಂಗಣದಲ್ಲಿ ನಡೆಯಿತು.

ಕಾಂಗ್ರೆಸ್ ಮತ್ತು ಬಿಜೆಪಿ ತೊರೆದು ಸುಮಾರು 250ಕ್ಕೂ ಅಧಿಕ ಮಂದಿ ಯುವಕರು ಜೆಡಿಎಸ್ ಸೇರ್ಪಡೆಯಾದರು. ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಜೆಡಿಎಸ್ ಮುಖಂಡ ನಾಪಂಡ ಮುತ್ತಪ್ಪ ಮಾತನಾಡಿ, ಜೆಡಿಎಸ್‌ನಿಂದ ಮಾತ್ರ ಕೊಡಗಿನ ಸಮಸ್ಯೆಗಳ ಪರಿಹಾರ ಸಾಧ್ಯ.

ಕೊಡಗಿನಲ್ಲಿ ಉದ್ಯೋಗಾವಕಾಶ ಇಲ್ಲದೇ ಯುವಜನರು ನಿರುದ್ಯೋಗಿಗಳಾಗಿದ್ದಾರೆ. ನಿರುದ್ಯೋಗ ಸಮಸ್ಯೆ ಪರಿಹರಿಸಲು ಕೃಷಿ ಅಥವಾ ಉತ್ಪಾದನಾ ವಲಯದಲ್ಲಿ ಉದ್ಯೋಗಾವಕಾಶ ಸೃಷ್ಟಿಸಬೇಕಿದೆ. ರಾಜ್ಯದಲ್ಲಿ ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಯುವಜನರ ಸಮಸ್ಯೆ ಪರಿಹಾರಕ್ಕೆ ಪರಿಹಾರ ಸೂತ್ರಗಳನ್ನು ಜಾರಿಗೆ ತರಲಾಗುವುದೆಂದರು. ಕೊಡಗಿನ ರಸ್ತೆಗಳು ತೀರಾ ದುಸ್ಥಿತಿಗೆ ತಲುಪಿದೆ ರಸ್ತೆಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲ. ಇದನ್ನು ಪ್ರತಿಯೊಬ್ಬರು ಪ್ರಶ್ನಿಸುವುದರ ಮೂಲಕ ರಸ್ತೆ ಕಾಮಗಾರಿ ಕೈಗೆತ್ತಿಕೊಳ್ಳುವಂತೆ ಮಾಡಬೇಕು. ಕೊಡಗಿಗೆ ಅಗತ್ಯವಾಗಿ ಬೇಕಾಗಿರುವ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಬಗ್ಗೆ ಗಟ್ಟಿಧ್ವನಿ ಮೊಳಗಿಸಬೇಕಿದೆ ಎಂದರು.

ಯುವ ಜೆಡಿ(ಎಸ್) ಜಿಲ್ಲಾಧ್ಯಕ್ಷ ಸಿ.ಎಲ್ ವಿಶ್ವ ಮಾತನಾಡಿ, ಮಡಿಕೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಜೆಡಿಎಸ್ ಬಲಿಷ್ಠವಾಗಿದ್ದು, ಮುಂದಿನ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಗೆಲುವು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಡಿಕೇರಿ ವಿಧಾನಸಭಾ ಕ್ಷೇತ್ರ ಅಧ್ಯಕ್ಷ ಎಚ್.ಆರ್. ಸುರೇಶ್ ಮಾತನಾಡಿ, ಕ್ಷೇತ್ರ ವ್ಯಾಪ್ತಿಯಲ್ಲಿ ಪಕ್ಷ ಸಂಘಟನೆಗೆ ಹೆಚ್ಚಿನ ನಿಗಾ ವಹಿಸಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜೆಡಿ(ಎಸ್) ಕುಶಾಲನಗರ ತಾಲೂಕು ಅಧ್ಯಕ್ಷ ಪಿ.ಡಿ.ರವಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ತ್ರಿನೇಶ್, ತಾಲೂಕು ಸಂಘಟನಾ ಕಾರ್ಯದರ್ಶಿ ಲಿಂಗರಾಜ್, ಯುವ ಮುಖಂಡ ನವೀನ್, ಅಪ್ಪುಣು, ಆಸಿಫ್, ರವಿ ಮಾದಪ್ಪ ಮತ್ತಿತರರು ಇದ್ದರು.

ನೌಕಪಡೆ ಸಬ್ ಲೆಫ್ಟಿನೆಂಟ್ ಆಗಿ ಕೊಡಗಿನ ಕುವರಿ ನೇಮಕ

ಸುಂಟಿಕೊಪ್ಪ, ನ.27– ಸುಂಟಿಕೊಪ್ಪ ನಿವಾಸಿ ಸುರೇಶ್ ಮತ್ತು ಪುಷ್ಪಾಲತ ದಂಪತಿ ಪುತ್ರಿ ಸ್ಪಂದನ ಭಾರತೀಯ ನೌಕಪಡೆಯಲ್ಲಿ ಸಬ್‌ಲೆಫ್ಟಿನೆಂಟ್ ಆಗಿ ನೇಮಕಗೊಂಡಿದ್ದಾರೆ.



ಸಿವಿಲ್ ಇಂಜಿನಿಯರಿಂಗ್ ಪದವಿ ಪಡೆದಿರುವ ಸ್ಪಂದನ ಭಾರತೀಯ ನೌಕಪಡೆಗೆ ಭರ್ತಿಯಾಗಿ ತರಬೇತಿ ಅವಧಿಯಲ್ಲಿ ತಮ್ಮ ತಂಡದ ನೇತೃತ್ವ ವಹಿಸಿ ಸಮಗ್ರ ಸಾಧನೆಯೊಂದಿಗೆ 4ನೇ ಸ್ಥಾನ ಪಡೆದಿದ್ದರು. ತರಬೇತಿಯ ಬಳಿಕ ವಿಶಾಖಪಟ್ಟಣಂನ ನೌಕಾನೆಲೆಯಲ್ಲಿ ತಮ್ಮ ಸೇನಾ ವೃತ್ತಿ ಜೀವನವನ್ನು ಸ್ಪಂದನ ಸುರೇಶ್ ಅವರು ಪ್ರಾರಂಭಿಸಲಿದ್ದಾರೆ. ಸ್ಪಂದನ ಸುರೇಶ್ ಅವರ ಈ ಸಾಧನೆಗೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

ನ.30 ರಂದು ಬೃಹತ್ ರಕ್ತದಾನ ಶಿಬಿರ

ಗೋಣಿಕೊಪ್ಪ,ನ.27– ಕೊಡಗು ಹಿಂದು ಮಲಯಾಳಿ ಸಮಾಜದ ಯೂತ್ ವಿಂಗ್ ವತಿಯಿಂದ ಕೊಡಗು ರಕ್ತನಿಧಿ ಕೇಂದ್ರದ ಸಹಯೋಗದಲ್ಲಿ ನ.30 ರಂದು ಬೃಹತ್ ರಕ್ತದಾನ ಶಿಬಿರವನ್ನು ಗೋಣಿಕೊಪ್ಪದಲ್ಲಿರುವ ಕೊಡಗು ಹಿಂದು ಮಲಯಾಳಿ ಸಮಾಜದ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಯೂತ್‌ವಿಂಗ್ ಅಧ್ಯಕ್ಷ ಎ.ಎಂ.ಅಖಿಲ್ ತಿಳಿಸಿದ್ದಾರೆ.

ಸಮಾಜ ಸದಸ್ಯರಲ್ಲಿ ರಕ್ತದಾನದ ಮಹತ್ವದ ಜಾಗೃತಿ ಕೂಡ ನೀಡಲಾಗುತ್ತದೆ. ಹೆಚ್ಚು ಜನರು ರಕ್ತದಾನ ಮಾಡಲು ಅವಕಾಶ ಮಾಡಿಕೊಡಲಾಗುತ್ತಿದ್ದು, ಸಾರ್ವಜನಿಕರು, ವಿದ್ಯಾರ್ಥಿಗಳು, ಆಟೋ ಚಾಲಕರು, ಕಾರ್ಮಿಕ ವರ್ಗ ಸೇರಿದಂತೆ ಎಲ್ಲ ವರ್ಗದವರು ರಕ್ತದಾನದಲ್ಲಿ ಪಾಲ್ಗೊಳ್ಳಲು ಜಾಗೃತಿ ಮೂಡಿಸಲಾಗುತ್ತಿದೆ. ರಕ್ತದ ಬೇಡಿಕೆ ಹೆಚ್ಚಿರುವುದರಿಂದ ಸಮರ್ಪಕವಾಗಿ ರಕ್ತ ದೊರೆಯುವಂತೆ ಮಾಡಲು ಎಲ್ಲರ ಸಹಕಾರ ಮುಖ್ಯ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮಾಹಿತಿಗೆ 9535531574, 8277021212 ಸಂಖ್ಯೆ ಸಂಪರ್ಕಿಸಬಹುದಾಗಿದೆ.

ಸುರೇಶ್ ಅವರೆದಾಳು ನಿಧನ



ಕುಶಾಲನಗರ, ನ.27– ಪಟ್ಟಣದ ಹೌಸಿಂಗ್ ಬೋರ್ಡ್‌ನಲ್ಲಿ ವಾಸವಿದ್ದ ಮೂಲತಃ ಶನಿವಾರಸಂತೆ ಬಳಿಯ ಅವರೆದಾಳು ಗ್ರಾಮದವರಾದ ಸುರೇಶ್ ಅವರೆದಾಳು (60 ವರ್ಷ) ಭಾನುವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಹಾಗೂ ಬಂಧುವರ್ಗವನ್ನು ಅಗಲಿದ್ದಾರೆ. ಇವರ ನಿಧನಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಕೇಶವ ಕಾಮತ್ ಹಾಗೂ ತಾಲೂಕು ಅಧ್ಯಕ್ಷ ಕೆ.ಎಸ್.ಮೂರ್ತಿ ಸಂತಾಪ ಸೂಚಿಸಿದ್ದಾರೆ.

ಉತ್ತಮ ಸಂಸ್ಕೃತಿ, ಸಂಸ್ಕಾರವೇ ಮಕ್ಕಳ ಬಾಳಿನ ದಾರಿದೀಪ

ಶ್ರೀ ಮುರುಘ ರಾಜೇಂದ್ರ ಸ್ವಾಮೀಜಿ ಅಭಿಮತ



ಚಾಮರಾಜನಗರ, ನ.27– ಶಿಕ್ಷಕರು, ಪೋಷಕರು ಮಕ್ಕಳಿಗೆ ಬಾಲ್ಯದಲ್ಲಿ ಕಲಿಸುವ ಒಳ್ಳೆಯ ವಿಷಯ, ಒಳ್ಳೆಯ ಸಂಸ್ಕೃತಿ, ಸಂಸ್ಕಾರಗಳು ಮಕ್ಕಳ ಬಾಳಿನುದಕ್ಕೂ ದಾರಿದೀಪವಾಗುತ್ತದೆ ಎಂದು ಮರಿಯಾಲ ಶ್ರೀ ಮುರುಘ ರಾಜೇಂದ್ರ ಮಠಾಧ್ಯಕ್ಷ ಶ್ರೀ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ ಹೇಳಿದರು.

ನಗರದ ರೋಟರಿ ಭವನದಲ್ಲಿ ಎಜು ಟ್ರೀ ಸಲ್ಯೂಷನ್ಸ್ ಸಂಸ್ಥೆ ಎಜುವಿಂಗ್ಸ್ ನರ್ಸರಿ ಸೀರೀಸ್ ಹಾಗೂ ರೋಟರಿ ಸಂಸ್ಥೆ ವತಿಯಿಂದ ನಡೆದ ಮಕ್ಕಳ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರ ಧ್ಯಾನ ಶಿಕ್ಷಣ ಕೊಡಬೇಕೆಂದು ಆದೇಶ ಮಾಡಿದೆ. ಇದು ತುಂಬಾ ಸಂತಸ ತಂದಿದೆ. ಒಳ್ಳೆಯ ನೀತಿ ಕಥೆಗಳ ಹೇಳುವಂತಹದ್ದು, ಮಹಾತ್ಮರ ಜೀವನ ಚರಿತ್ರೆಗಳನ್ನು ಮಕ್ಕಳಲ್ಲಿ ತುಂಬುವಂತಹದ್ದು, ಒಳ್ಳೆಯ ಪುಸ್ತಕ ಓದಿಸುವುದು ಆ ಮೂಲಕ ಅವರ ಭೌತಿಕಜ್ಞಾನ ಹೆಚ್ಚುಸುವುದು ಅತ್ಯಂತ ಮಹತ್ವದ್ದಾಗಿದೆ. ಪ್ರಸ್ತುತ ದಿನಗಳಲ್ಲಿ ಪೋಷಕರು ಮಕ್ಕಳಿಗೆ ಮೊಬೈಲ್ ಪೋನ್ ಕೊಟ್ಟು ಅವರ ಮನಸ್ಸು ಬೇರೆಕಡೆ ಹೋಗುವಂತೆ ಮಾಡಿದ್ದಾರೆ. ಇದರಿಂದ ಎಷ್ಟು ಮಕ್ಕಳ ಇಡೀ ಬದುಕನ್ನೇ ಅಳವಡಿಸಿಕೊಂಡು ಅನೇಕ ಅವಘಡಗಳು ನಡೆಯುತ್ತಿದೆ ಮಕ್ಕಳಿಗೆ ಅಗತ್ಯಕ್ಕೆ ತಕ್ಕಂತೆ ಮೊಬೈಲ್ ಕೊಡಿ ಮೊಬೈಲ್ ನಿಂದ ದೂರುವಿದ್ದಷ್ಟು ಮಕ್ಕಳು ಸತ್ಪ್ರಜೆಯಾಗುತ್ತಾರೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ದೀನಬಂಧು ಸಂಸ್ಥೆಯ ಗೌರವ ಕಾರ್ಯದರ್ಶಿ ಜಿ.ಎಸ್.ಜಯದೇವ್ ಮಾತನಾಡಿ, ಇಂಗ್ಲೀಷ್‌ನಲ್ಲಿ ಮಾತನಾಡಿದರೆ ನಾವು ಬುದ್ದಿವಂತರು ಎಂದು ಇಡೀ ದೇಶವೇ ಭ್ರಮೆಗೊಳಗಾಗಿಬಿಟ್ಟಿದೆ. ಅರ್ಥವಾಗದ ಭಾಷೆಯಲ್ಲಿ ಮಾತನಾಡುವುದೇ ಬುದ್ದವಂತಿಕೆಯಾಗಿಬಿಟ್ಟಿದೆ ಎಂದರು.

ಅರ್ಥವಾಗುವ ಭಾಷೆಯಲ್ಲಿ ಮಾತನಾಡುವವರು ದಡ್ಡರು. ಇದು ಎಂತಹ ವಿಚಿತ್ರವಲ್ಲವೇ? ಜರ್ಮನ್ ದೇಶದಲ್ಲಿ ಜರ್ಮನ್ ಭಾಷೆಯಲ್ಲಿ ಶಿಕ್ಷಣ ಕಲಿಸುತ್ತಾರೆ. ಫ್ರಾನ್ಸ್ ದೇಶದಲ್ಲಿ ಫ್ರಾನ್ಸ್ ಭಾಷೆಯಲ್ಲಿ ಶಿಕ್ಷಣ ಕಲಿಸುತ್ತಾರೆ. ಚೈನಾದಲ್ಲಿ ಚೈನಿ ಭಾಷೆಯಲ್ಲಿ ಶಿಕ್ಷಣ ಕಲಿಸುತ್ತಾರೆ ಜಪಾನ್ ದೇಶದಲ್ಲಿ ಜಪಾನ್ ಭಾಷೆಯಲ್ಲಿ ಶಿಕ್ಷಣ ಕಲಿಸುತ್ತಾರೆ. ಆದರೆ ಅವರು ಇಂಗ್ಲೀಷ್ ಕಲಿಸುವುದಿಲ್ಲ. ನಮ್ಮ ಭಾಷೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡು ವಿಷಯಗಳನ್ನು ಗ್ರಹಿಸುವ ಹಂತಕ್ಕೆ ಹೋದಾಗ ಇನ್ನೊಂದು ಭಾಷೆ ಕಲಿಯಲು ಸಾಧ್ಯ ಅರ್ಥವಾಗದ ಭಾಷೆಯಿಂದ ಮಕ್ಕಳ ಗ್ರಹಿಕೆ ಕಷ್ಟಕರವಾಗುತ್ತದೆ. ಅರ್ಥವಾಗುವ ಭಾಷೆಯಲ್ಲಿ ಶಿಕ್ಷಣ ಕಲಿತರೆ ಮಗುವು ಚೆನ್ನಾಗಿ ಗ್ರಹಿಸುತ್ತದೆ ಎಂದರು.

ಎಜು ಟ್ರೀ ಸಲೂಸನ್ಸ್ ಸಂಸ್ಥೆ, ಎಂದು ವಿಂಗ್ಸ್ ನರ್ಸರಿ ಸಿರೀಸ್ ವ್ಯವಸ್ಥಾಪಕ ಶಿವಶಂಕರ್ ಕೆ.ಎಂ. ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ರೋಟರಿ ಅಧ್ಯಕ್ಷ ಕೆ.ಎಂ.ಮಹದೇವಸ್ವಾಮಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಎಂಸಿಎಸ್ ಶಾಲಾ ಮುಖ್ಯ ಶಿಕ್ಷಕರು ಹಾಗೂ ಪ್ರೇರಣಾ ಶಾಲೆಯ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಹಾಜರಿದ್ದರು.

ವಿದ್ಯಾರ್ಥಿಗಳಲ್ಲಿ ಜೀವನ ಮೌಲ್ಯ ಬೆಳೆಸಬೇಕು

ನ್ಯಾಯಾಧೀಶರಾದ ಎಂ. ಶ್ರೀಧರ್ ಅಭಿಪ್ರಾಯ



ಚಾಮರಾಜನಗರ, ನ.27– ವಿದ್ಯಾರ್ಥಿಗಳನ್ನು ಕೇವಲ ರ್‍ಯಾಂಕ್ ತೆಗೆಸುವ ಯಂತ್ರಗಳನ್ನಾಗಿಸದೇ, ಅವರಲ್ಲಿ ಪ್ರಾಮಾಣಿಕತೆ, ನೈತಿಕತೆ, ಜೀವನ ಮೌಲ್ಯಗಳನ್ನು ಬೆಳೆಸಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ.ಶ್ರೀಧರ್ ಕಿವಿಮಾತು ಹೇಳಿದರು.

ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ನವಸಂಭ್ರಮ, ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಸ್ತುತ ಸಮಯದಲ್ಲಿ ಪ್ರತಿಯೊಂದು ವಿದ್ಯಮಾನವೂ ಇಂಟರ್ನೆಟ್, ಆನ್ಲೈನ್ ಮೇಲೆ ಅವಲಂಬಿತವಾಗಿವೆ. ಹೀಗಾಗಿ ಎಲ್ಲವನ್ನೂ ವಾಣಿಜ್ಯ ದೃಷ್ಟಿಯಿಂದಲೇ ಅಳೆಯುಂತಾಗಿದೆ ಎಂದು ವಿಷಾದಿಸಿದರು.

ಮಾನವೀಯ ಸಂಬಂಧಗಳು ದೂರವಾಗುತ್ತಿವೆ ಮೌಲ್ಯಗಳು ಮರೆಯಾಗುತ್ತಿವೆ. ಇಂದು ನ್ಯಾಯಾಲಯಕ್ಕೆ ಬರುತ್ತಿರುವ ಪ್ರಕರಣಗಳನ್ನು ಗಮನಿಸಿದರೆ ಆತಂಕ ವಾಗುತ್ತದೆ. ಹದಿಹರೆಯದ ಮಕ್ಕಳ ಮೇಲೆ ಜೋಪಾನವಾಗಿ ವಹಿಸಬೇಕು. ಅವರಲ್ಲಿ ಕಾನೂನಿನ ಅರಿವು ಮೂಡಿಸಬೇಕು ಎಂದು ಸಲಹೆ ನೀಡಿದರು. ಪೋಷಕರು ರ್‍ಯಾಂಕ್‌ಗೆ ಕೊಡುವ ಆದ್ಯತೆ ಯನ್ನು ಮಕ್ಕಳ ಬೆಳವಣಿಗೆ, ಪರಿಸರ ಹೇಗಿದೆ ಎಂಬುದರ ಮೇಲೆಯೂ ಇಡಬೇಕು. ರ್‍ಯಾಂಕ್ ಎಂಬುದು ತಲೆ ತಿರುಗದಂತೆ, ಸಂವೇದನೆ ಹಾಳಾಗದಂತೆ ಮಾಡಬಾರದು. ಈ ವಿಚಾರದಲ್ಲಿ ಪೋಷಕರ ಹೊಣೆಗಾರಿಕೆ ಮುಖ್ಯವಾಗುತ್ತದೆ ಎಂದರು.

ಜೆಎಂಎಫ್‌ಸಿ ಹಿರಿಯ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಾದ ಚಂಪಕಾ ಅವರು ಮಾತನಾಡಿ, ಮಕ್ಕಳಲ್ಲೂ ಸಂವಿಧಾನ, ಕಾನೂನು ಅರಿವು ಮೂಡಿಸಬೇಕು. ಇಂದು ಪೋಕ್ಸೊ ಕಾಯಿದೆಯಡಿ ಸಾಕಷ್ಟು ಪ್ರಕರಣಗಳು ದಾಖಲಾಗುತ್ತಿವೆ. ಆದ್ದರಿಂದ ಅದನ್ನು ನಿಯಂತ್ರಿಸಲು ಸಾಕಷ್ಟು ನಿಗಾ ವಹಿಸಬೇಕು ಎಂದು ಅವರು ಸಲಹೆ ನೀಡಿದರು.

ಹೆಚ್ಚುವರಿ ಜಿಲ್ಲಾಕಾರಿ ಕಾತ್ಯಾಯಿನಿದೇವಿ ಅಧ್ಯಕ್ಷತೆ ವಹಿಸಿದ್ದರು. ಜೆಎಸ್‌ಎಸ್ ಸಂಸ್ಥೆಗಳ ಸಾರ್ವಜನಿಕ ಸಂಪರ್ಕಾಕಾರಿ ಆರ್.ಎಂ. ಸ್ವಾಮಿ, ಜೆಎಸ್‌ಎಸ್ ಪಬ್ಲಿಕ್ ಶಾಲೆ ಪ್ರಾಂಶುಪಾಲ ಎಚ್.ಎಂ.ಉಮೇಶ್ ಮಾತನಾಡಿದರು.

ಕಳೆದ ಸಾಲಿನಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು ಹಾಗೂ ನವ ಸಂಭ್ರಮದಲ್ಲಿ ಅತ್ಯುತ್ತಮ ನೃತ್ಯ ಪ್ರದರ್ಶನ ಮಾಡಿದ ವಿದ್ಯಾರ್ಥಿಗಳನ್ನು ಶಾಲೆ ವತಿಯಿಂದ ಪುರಸ್ಕರಿಸಲಾಯಿತು.

ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಚಾ.ನಗರದ ವಿದ್ಯಾರ್ಥಿ ಸಾಧನೆ



ಚಾಮರಾಜನಗರ, ನ.27– ಹರಿಯಾಣದ ಕುರುಕ್ಷೇತ್ರದಲ್ಲಿ ನಡೆದಂತಹ ರಾಷ್ಟ್ರೀಯ ಮಟ್ಟದ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ನಗರದ ಸೇವಾ ಭಾರತಿ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಚಿನ್ಮಯ್ ಎತ್ತರ ಜಿಗಿತದಲ್ಲಿ ಕಂಚಿನ ಪದಕದೊಂದಿಗೆ ತೃತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾನೆ. ದೆಹಲಿಯಲ್ಲಿ ನಡೆಯುವ ಎಸ್‌ಜಿಎಫ್ಐ ಕ್ರೀಡಾಕೂಟಕ್ಕೆ ಆಯ್ಕೆಯಾಗಿರುವ ಈ ವಿದ್ಯಾರ್ಥಿಯನ್ನು ಸೇವಾ ಭಾರತಿ ಶಿಕ್ಷಣ ಸಂಸ್ಥೆಯ ಉಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಶಿಕ್ಷಕ ವೃಂದದವರು ಅಭಿನಂದಿಸಿ ಮುಂದಿನ ಕ್ರೀಡಾಕೂಟದಲ್ಲೂ ಯಶಸ್ಸುಗಳಿಸಲಿ ಎಂದು ಶುಭ ಹಾರೈಸಿದ್ದಾರೆ.

ಶೀಘ್ರದಲ್ಲೇ ಗುಂಡ್ಲುಪೇಟೆ ತಾಲೂಕಿನ 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ

ಗುಂಡ್ಲುಪೇಟೆ, ನ.27– ಅತಿ ಶೀಘ್ರದಲ್ಲೇ ಕ್ಷೇತ್ರದ 110 ಕೆರೆಗಳಿಗೆ ಕಬಿನಿ ನದಿ ಮೂಲದಿಂದ ನೀರು ತುಂಬಿಸುವ ಯೋಜನೆಗೆ ಚಾಲನೆ ನೀಡಲಾಗುವುದು ಎಂದು ಶಾಸಕ ಸಿ.ಎಸ್. ನಿರಂಜನ ಕುಮಾರ್ ಹೇಳಿದರು.

ತಾಲೂಕಿನ ಹಂಗಳಪುರ ಗ್ರಾಮದಲ್ಲಿ ಮಂಗಳವಾರ ಸಾಮಾನ್ಯವರ್ಗದ ಜನರ ಬೀದಿಗಳಿಗೆ 50 ಲಕ್ಷ ವೆಚ್ಚದಲ್ಲಿ ಚರಂಡಿ ಹಾಗೂ ಡಾಂಬರು ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.




ತಾಲೂಕಿನ ಜನತೆ ಕೆರೆಗಳಿಗೆ ನೀರು ತುಂಬಿಸುವಂತೆ ಮನವಿ ಮಾಡುತ್ತಿದ್ದರೂ ನಿರ್ಲಕ್ಷಿಸಿದ್ದರಿಂದ ರೈತಾಪಿ ಜನತೆ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದರು. ಆದರೆ ತಾವು ಚುನಾಯಿತರಾದ ನಂತರ ಪ್ರತಿ ವರ್ಷವೂ ಹೆಚ್ಚು ಹೆಚ್ಚು ಕೆರೆಗಳಿಗೆ ನೀರು ತುಂಬಿಸುತ್ತಿದ್ದು ಸದ್ಯದಲ್ಲಿಯೇ ಕ್ಷೇತ್ರದ 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ ನೀಡಲಾಗುವುದು. ಆದ್ದರಿಂದ ಅಭಿವೃದ್ಧಿ ಕೆಲಸಗಳಲ್ಲಿ ರಾಜಕೀಯ ಕಾಣುವುದನ್ನು ಕೈಬಿಡಿ ಎಂದು ವಿರೋಧಿಗಳಿಗೆ ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಹಂಗಳಪುರ ಮಠದ ಚನ್ನಬಸವಸ್ವಾಮೀಜಿ, ಹಳ್ಳದ ಮಠದ ಜಡೇಸ್ವಾಮೀಜಿ, ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಕೆ.ಆರ್.ಲೋಕೇಶ್, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಹೊರೆಯಾಲ ಮಹೇಶ್, ಸದಸ್ಯೆ ದೇವಮ್ಮ, ಎಪಿಎಂಸಿ ಅಧ್ಯಕ್ಷ ರವಿ, ಮುಖಂಡರಾದ ಬಸವೇಶ್, ಕಣ್ಣೇಗಾಲ ಸ್ವಾಮಿ, ಸುರೇಶ್ ಇತರರು ಇದ್ದರು.

ಅಕ್ರಮ ಮದ್ಯ ಮಾರಾಟ; ನಾಲ್ವರ ಬಂಧನ

ಬೇಗೂರು(ಗುಂಡ್ಲುಪೇಟೆ), ನ.27– ಸಮೀಪದ ಹಿರೇಬೇಗೂರು ಗ್ರಾಮದ ಮನೆಯೊಂದರಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ನಾಲ್ವರನ್ನು ಬೇಗೂರು ಪೋಲೀಸರು ಬಂಧಿಸಿದ್ದಾರೆ. ಗ್ರಾಮದ ರಂಗಸ್ವಾಮಿ, ಮಹೇಶ, ರಾಜೀ, ನೀಲಾವತಿ ಎಂಬುವರನ್ನು ಬಂಧಿತರಾಗಿದ್ದು, ಇವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಪೋಲೀಸರು ತನಿಖೆ ಮುಂದುವರೆಸಿದ್ದಾರೆ.

ಮಹಿಳಾ ಸ್ವ ಸಹಾಯ ಸಂಘಗಳಿಗೆ ಸಾಲ ವಿತರಣೆ



ಬೇಗೂರು(ಗುಂಡ್ಲುಪೇಟೆ), ನ.27– ಸಮೀಪದ ಸೋಮಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ 9 ಮಹಿಳಾ ಸ್ವ ಸಹಾಯ ಸಂಘಗಳಿಗೆ 27 ಲಕ್ಷ ಸಾಲವನ್ನು ಚೆಕ್ ಮೂಲಕ ಜಿಲ್ಲಾ ಬ್ಯಾಂಕಿನ ಉಪಾಧ್ಯಕ್ಷ ಚಾಮುಲ್ ಸದಸ್ಯ ಎಂ.ಪಿ.ಸುನೀಲ್ ವಿತರಿಸಿದರು. ನಂತರ ಮಾತನಾಡಿ ಅವರು, ಸ್ವ–ಸಹಾಯ ಸಂಘಗಳಿಗೆ ಸಹಕಾರ ಸಂಘಗಳ ಮೂಲಕ ಕಡಿಮೆ ಬಡ್ಡಿ ದರದಲ್ಲಿ ಸಾಲ ವಿತರಿಸಲಾಗುತ್ತಿದೆ. ಸಕಾಲಕ್ಕೆ ಮರು ಪಾವತಿ ಮಾಡಿದರೆ ಸಹಕಾರ ಸಂಘವು ಕೂಡ ಅಭಿವೃದ್ಧಿಯಾಗಲು ಸಾಧ್ಯ ಇಲ್ಲದಿದ್ದಲ್ಲಿ ಸಂಘಕ್ಕೆ ನಷ್ಟ ಉಂಟಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಸಹಕಾರ ಸಂಘದ ಅಧ್ಯಕ್ಷ ಪಿ.ಶಿವಬಸಪ್ಪ, ಉಪಾಧ್ಯಕ್ಷ, ಪಿ.ಗುರುಮಲ್ಲಪ್ಪ, ನಿರ್ದೇಶಕರಾದ ಹೆಚ್.ಎಂ.ಮಹದೇವಪ್ಪ, ನಾಗಪ್ಪ, ವೀರಭದ್ರಸ್ವಾಮಿ, ಎಸ್. ನಾಗರತ್ನಮ್ಮ ಶಿವಮೂರ್ತಿ ನಾಯ್ಕ, ನಾಗಮ್ಮ, ಮಹದೇವಮ್ಮ ವೈಗುರುಸ್ವಾಮಿ, ಮುದ್ದೇಗೌಡ, ಜಯಶಂಕರಪ್ಪ, ಬ್ಯಾಂಕಿನ ಮೇಲ್ವಿಚಾರಕ ಚಂದ್ರಮೌಳಿ, ಸ್ವಾಮಿ, ಹಾಗೂ ಸಂಘದ ಸದಸ್ಯರು ಸಿಬ್ಬಂದಿವರ್ಗ ಹಾಜರಿದ್ದರು.

ಟಿಪ್ಪು ಸುಲ್ತಾನ್ ಅಪ್ಪಟ ದೇಶಪ್ರೇಮಿ

ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಮತ



ಚಾಮರಾಜನಗರ, ನ.27– ಅಪ್ಪಟ ದೇಶಪ್ರೇಮಿಯಾಗಿದ್ದ ಟಿಪ್ಪು ಸುಲ್ತಾನ್ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪ್ರಥಮ ನಾಯಕರಾಗಿದ್ದರು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ಗಾಳೀಪುರ ಬಡಾವಣೆಯ 5 ವಾರ್ಡ್‌ನಲ್ಲಿ ನಡೆದ ಹಜರತ್ ಟಿಪ್ಪು ಸುಲ್ತಾನ್ ಸ್ಮರಣೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಟಿಪ್ಪು ಸುಲ್ತಾನ್ ಬ್ರಿಟಿಷರ ವಿರುದ್ಧ ಹೋರಾಡಿ ಪ್ರಾಣವನ್ನು ತ್ಯಾಗ ಮಾಡಿದ್ದಾರೆ. ಟಿಪ್ಪುಸುಲ್ತಾನ ಉತ್ತಮ ಆಡಳಿತ ಗಾರರಾಗಿ ಅನೇಕ ಸುಧಾರಣೆ ಮಾಡಿದರು. ಅವರು ಭಾವೈಕ್ಯತೆಯ ಸಂಕೇತವಾ ಗಿದ್ದು, ಹಿಂದೂ, ಮುಸ್ಲಿಂ ಎನ್ನದೆ ತಮ್ಮ ಆಡಳಿತ ಅವಧಿಯಲ್ಲಿ ಸಮಾನತೆ ಕೊಟ್ಟಿದ್ದಾರೆ ಎಂದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮಾತನಾಡಿ, ಟಿಪ್ಪುಸುಲ್ತಾನ್ ದೇಶಭಕ್ತಿಯಲ್ಲಿ ನಮಗೆಲ್ಲ ಮಾದರಿ ಯಾಗಿದ್ದಾರೆ. ತಮ್ಮ ಇಬ್ಬರ ಮಕ್ಕಳನ್ನು ಒತ್ತೆಯಿಟ್ಟು ಹೋರಾಟ ಮಾಡಿದರು. ಅಲ್ಲದೇ ಅಪ್ಪಟ ಕನ್ನಡ ಪ್ರೇಮಿಯಾ ಗಿದ್ದರು. ಅವರ ಸೇವೆ ಮತ್ತು ಪರಾಕ್ರಮ ವನ್ನು ನಾವೆಲ್ಲರೂ ಸ್ಮರಿಸುವ ಜೊತೆಗೆ ಟಿಪ್ಪು ಅವರ ತತ್ವ ಆದರ್ಶಗಳನ್ನು ಮೈಗೂಡಿಸಿಕೊಳ್ಳೋಣ ಎಂದರು.

ಮೈದಾನದಲ್ಲಿ ಟಿಪ್ಪು ಲಾಂಛನಯುಳ್ಳ ಬಾವುಟ ಹಾರಿಸಲಾಯಿತು. ಕಾರ್ಯ ಕ್ರಮದಲ್ಲಿ ಇಸ್ಲಾಂ ಧರ್ಮಗುರು, ಮುಖಂಡರಾದ ಸೈಯದ್ ರಫೀ, ನಯಾಜ್, ಅಸ್ಲಾಂ ಷರೀಫ್, ಜಾಕೀರ್ ಪಾಷ, ಅಕ್ರಂ, ತೇಜವುಲ್ಲಾ ಖಾನ್, ನೂರ್ ವುಲ್ಲಾಖಾನ್, ನವೀದ್ ಖಾನ್ ಇತರಿದ್ದರು.

ಬೈಕ್‌ಗಳ ಡಿಕ್ಕಿ: ಮಹಿಳೆಗೆ ಗಾಯ

ಬೇಗೂರು(ಗುಂಡ್ಲುಪೇಟೆ), ನ.27– ಗ್ರಾಮದ ಪೆಟ್ರೋಲ್ ಬಂಕ್ ಬಳಿ ಎರಡು ಬೈಕ್‌ಗಳ ನಡುವೆ ಡಿಕ್ಕಿ ಸಂಭವಿಸಿ ಮಹಿಳೆಯೊಬ್ಬರು ತೀವ್ರ ಸ್ವರೂಪದಲ್ಲಿ ಗಾಯಗೊಂಡಿರುವ ಘಟನೆ ನಡೆದಿದೆ. ಗುಂಡ್ಲುಪೇಟೆ ತಾಲೂಕಿನ ಅಗತಗೌಡನಹಳ್ಳಿ ಗ್ರಾಮದ ಸುಜಾತ (35) ಎಂಬುವರು ಗಾಯಗೊಂಡಿದ್ದು, ಇವರು ಗುಂಡ್ಲುಪೇಟೆ ಪಟ್ಟಣದ ಆಯುರ್ವೇದಿಕ್ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿದ್ದಾರೆ.

ಗ್ರಾಮದ ಪೆಟ್ರೋಲ್ ಬಂಕ್ ಬಳಿ ಪೆಟ್ರೋಲ್ ಹಾಕಿಸಿಕೊಳ್ಳಲು ಬೈಕ್ ತಿರುಗಿಸಿದಾಗ ಹಿಂಬದಿಯಿಂದ ಬಂದ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಹಿಂಬದಿ ಕುಳಿತಿದ್ದ ಸುಜಾತ ಅವರು ಕೆಳಗೆ ಬಿದ್ದು ತಲೆಗೆ ತೀವ್ರ ಸ್ವರೂಪದ ಗಾಯಗಳಾಗಿವೆ.

ಬೇಗೂರಿ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆಯ ನಂತರ ಮೈಸೂರಿನ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಈ ಬಗ್ಗೆ ಬೇಗೂರು ಪೋಲೀಸರು ಸ್ಥಳಕ್ಕೆ ಭೇಟಿ ನೀಡಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

ಒಂದನೇ ಪುಟದಿಂದ

ಒಂದನೇ ಪುಟದಿಂದ

ಹುಲಿ ಮರಿ ಬಲಿ

ಮಾಂಸಖಂಡ ಕಿತ್ತು ಬಂದಿದೆ. ಕುತ್ತಿಗೆ, ಬೆನ್ನು ಬಳಿ ತೀವ್ರವಾದ ಗಾಯಗಳಾಗಿದ್ದು, ಮುಂಗಾಲಿನ ಮೂಳೆ ಮುರಿದಿರುವುದು ಕಂಡು ಬಂದಿದೆ. ಹುಲಿ ಮರಿಯ ಕಳೇಬರವನ್ನು ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ದಹಿಸಲಾಯಿತು. ಈ ಸಂದರ್ಭದಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ, ಮೇಟಿಕುಪ್ಪೆ ವನ್ಯಜೀವಿ ಉಪವಿಭಾಗದ ಎಸಿಎಫ್ ಕೆ.ಎನ್.ರಂಗಸ್ವಾಮಿ, ಪಶುವೈದ್ಯ ಡಾ. ರಮೇಶ್, ಹೆಚ್.ಡಿ.ಕೋಟೆ ಪಶು ಆಸ್ಪತ್ರೆಯ ಸಹಾಯಕ ನಿರ್ದೇಶಕ ಡಾ.ಬಿ.ಬಿ.ಪ್ರಸನ್ನ, ಎಎನ್‌ಟಿಸಿಎ ಪ್ರತಿನಿಧಿ ಕೃತಿಕಾ ಆಲನಹಳ್ಳಿ, ವನ್ಯಜೀವಿ ಪರಿಪಾಲಕ ಜೀವನ್ ಕೃಷ್ಣಪ್ಪ, ಅಂತರಸಂತೆ ಗ್ರಾ.ಪಂ ಅಧ್ಯಕ್ಷ ಎಂ.ಸುಬ್ರಮಣ್ಯ, ಆರ್‌ಎಫ್‌ಓ ಎಸ್.ಎಸ್.ಸಿದ್ದರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಗುಂಬಜ್ ತೆರವು

'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಮಂತ್ರದಡಿ ಎಲ್ಲಾ ಜಾತಿ, ಧರ್ಮ, ಪಕ್ಷ ಭೇದವಿಲ್ಲದೇ ಕೆಲಸ ಮಾಡಿಕೊಂಡು ಬಂದಿದ್ದೇನೆ. ಇದುವರೆಗೆ ನನ್ನ ರಾಜಕೀಯ ಜೀವನದಲ್ಲಿ ಯಾವುದೇ ಒಂದು ವಿವಾದಕ್ಕೆ ಎಡೆ ಮಾಡಿಕೊಡದೇ ಸೇವೆ ಸಲ್ಲಿಸುತ್ತಾ ಬಂದಿದ್ದೇನೆ. ಕೆ.ಆರ್.ಕ್ಷೇತ್ರದಲ್ಲಿ 12 ಪ್ರಯಾಣಿಕರ ತಂಗುದಾಣವನ್ನು ನಿರ್ಮಾಣ ಮಾಡಲಾಗುತ್ತಿದ್ದು, ಅದಕ್ಕೆ ಮೈಸೂರಿನ ಪಾರಂಪರಿಕತೆಯ ಪ್ರತೀಕವಾಗಿರುವ ಅರಮನೆಯ ವಿನ್ಯಾಸ ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿತ್ತು. ಆದರೆ ಕೆಲವರು ಬಸ್ ತಂಗುದಾಣದ ನಿರ್ಮಾಣದ ವಿಚಾರದಲ್ಲಿ ಅನಾವಶ್ಯಕವಾಗಿ ಧರ್ಮದ ಲೇಪನ ಹಚ್ಚಿ ವಿವಾದ ಸೃಷ್ಟಿಸಿದರು. ಇದು ನನ್ನ ಮನಸ್ಸಿಗೆ ಬಹಳ ನೋವುಂಟು ಮಾಡಿದೆ. ಇದರಿಂದ ಹಿರಿಯರ ಸಲಹೆ ಮೇರೆಗೆ ಎರಡು ಡೂಮ್ ತೆಗೆದು ಮಧ್ಯದಲ್ಲಿರುವ ಗುಂಬಜ್ ಅನ್ನು ಹಾಗೇ ಬಿಡಲು ನಿರ್ಧರಿಸಲಾಗಿದೆ. ಸಾರ್ವಜನಿಕರ ಅಭಿವೃದ್ಧಿಯೇ ನನ್ನ ಧ್ಯೇಯ ಎಂದು ಹೇಳಿದ್ದಾರೆ.

ಜ.23ರ ಗಡುವು

ಶೇ.4ರಷ್ಟು ಮೀಸಲಾತಿ ಇದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ.16ರಷ್ಟು ಒಕ್ಕಲಿಗರ ಜನಸಂಖ್ಯೆ ಇದೆ. ಇತರೆ ಉಪ ಪಂಗಡಗಳನ್ನು ಸೇರಿಸಿದರೆ, ಶೇ.19–21ರಷ್ಟಾಗುತ್ತದೆ. ಹೀಗಾಗಿ ಕನಿಷ್ಠ ಶೇ.12ರಿಂದ 15ರಷ್ಟು ಮೀಸಲಾತಿ ನೀಡಬೇಕು ಎಂದು ಪಕ್ಷಾತೀತವಾಗಿ ಆಗ್ರಹಿಸಲಾಯಿತು. ಶೀರ್ವಚನ ನೀಡಿದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ಜನಾಂಗದ ಎರಡು ಕಣ್ಣುಗಳಾಗಿರುವ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮಾಜಿ ಮುಖ್ಯ ಮಂತ್ರಿ ಎಸ್.ಎಂ.ಕೃಷ್ಣ ಅವರನ್ನು ಗೌರವಿಸಲು ಜ.23ರಂದು 'ಒಕ್ಕಲಿಗರ ಮಹಾಸಂಗಮ' ಬೃಹತ್ ಕಾರ್ಯಕ್ರಮ ಆಯೋಜಿಸಲಾಗುತ್ತದೆ ಎಂದರು.

ನಗರ ಪ್ರದೇಶದ ಬಡವರಿಗೂ ಸೌಲಭ್ಯ: ಪಟ್ಟನಾಯಕನಹಳ್ಳಿ ಮಠದ ಡಾ.ಶ್ರೀ ನಂಜಾವಧೂತ ಸ್ವಾಮೀಜಿ ಮಾತನಾಡಿ, ದೇವೇಗೌಡರು ಮತ್ತು ಎಸ್.ಎಂ.ಕೃಷ್ಣರವರು ಸಮುದಾಯದ ಎರಡು ಕಣ್ಣುಗಳಿದ್ದಂತೆ. ಜ.23ರಂದು ಅವರಿಗೆ ಗೌರವ ಸಲ್ಲಿಸಲು ಒಕ್ಕಲಿಗರ ಮಹಾಸಂಗಮ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಸರ್ಕಾರ ಮೀಸಲಾತಿ ಪ್ರಮಾಣವನ್ನು ಶೇ.4ರಿಂದ ಕನಿಷ್ಠ ಶೇ.12ಕ್ಕೆ ಹೆಚ್ಚಿಸಿದರೆ ಅಂದು ವಿಜಯೋತ್ಸವ ಆಚರಿಸಲಾಗುವುದು. ಇಲ್ಲದಿದ್ದರೆ ಹೋರಾಟಕ್ಕೆ ಮುನ್ನುಡಿ ಬರೆಯಲಾಗುವುದು. ಕೇಂದ್ರ ಸರ್ಕಾರದ ಒಬಿಸಿಗೆ ಬಿಟ್ಟುಹೋಗಿರುವ ಪಂಗಡಗಳನ್ನು ಸೇರಿಸಬೇಕು. ಇಡಬ್ಲ್ಯುಎಸ್‌ನಲ್ಲಿ ನಗರ ಪ್ರದೇಶದ ಸಮುದಾಯದ ಬಡವರಿಗೂ ಸೌಲಭ್ಯ ಸಿಗುವಂತಾಗಬೇಕು ಎಂದರು.

ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಮಾತನಾಡಿ, ಒಕ್ಕಲಿಗರ ಮೀಸಲಾತಿ ಪ್ರಮಾಣವನ್ನು ಸರ್ಕಾರ ಹೆಚ್ಚಿಸದಿದ್ದರೆ, ಎಲ್ಲರೂ ಒಗ್ಗಟ್ಟಾಗಿ ಹೋರಾಟ ನಡೆಸೋಣ ಎಂದು ಕರೆ ನೀಡಿದರು. ಮನವಿ ಸ್ವೀಕರಿಸಿದ ಸಚಿವ ಆರ್.ಅಶೋಕ್ ಮಾತನಾಡಿ, ಜಾತಿ ಸಮೀಕ್ಷೆ ವೈಜ್ಞಾನಿಕವಾಗಿದ್ದು, ಒಗ್ಗೂಡಿಸುವಂತಿರಬೇಕು. ಆದರೆ, ಸಮೀಕ್ಷೆಯು ಸಮಾಜದಲ್ಲಿ ಗೊಂದಲ ನಿರ್ಮಾಣ ಮಾಡಿದೆ ಎಂಬ ಮಾತುಗಳಿವೆ. ರಾಜಕೀಯ ಪಕ್ಷ ಯಾವುದೇ ಇರಲಿ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ನಾವೆಲ್ಲ ಒಗ್ಗಟ್ಟಾಗಿರಬೇಕು. ಸಮಾಜದ ಹಕ್ಕೋತ್ತಾಯಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಗಮನಕ್ಕೆ ತಂದು ಚರ್ಚೆ ಮಾಡಲಾಗುವುದು. ಎಲ್ಲರೂ ಸೇರಿ ಹೋರಾಟದಲ್ಲಿ ಹೆಜ್ಜೆ ಹಾಕೋಣ. ವಿಧಾನಸೌಧದ ಮುಂದೆ ಫೆಬ್ರವರಿಯಲ್ಲಿ ನಾಡಪ್ರಭು ಕೆಂಪೇಗೌಡರ ಅಶ್ವಾರೂಢ ಪ್ರತಿಮೆ ಪ್ರತಿಷ್ಠಾಪನೆ ಆಗಲಿದೆ ಎಂದರು.

ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಮಾತನಾಡಿ, ಮೀಸಲಾತಿ ಹೆಚ್ಚಳದ ಬಗ್ಗೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಲಿದೆ. ಎಲ್ಲಾ ಸಮುದಾಯಕ್ಕೂ ನ್ಯಾಯಸಮ್ಮತ ಮೀಸಲಾತಿ ಕಲ್ಪಿಸಲಾಗುವುದು. ಒಗ್ಗಟ್ಟಿನಿಂದ ಹೋರಾಡಿದರೆ ಯಶಸ್ಸು ಸಿಗಲಿದೆ ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ಸಮಾಜದ ಋಣ ತೀರಿಸಬೇಕು. ಸರ್ಕಾರಕ್ಕೆ ನಮ್ಮ ಹಕ್ಕು ಕೇಳುತ್ತಿದ್ದೇವೆಯೆ ಹೊರತು ಯಾರ ಹಕ್ಕನ್ನು ಕೇಳುತ್ತಿಲ್ಲ. ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿ ಹೆಚ್ಚಳ ಮಾಡಬೇಕು. ಇದಕ್ಕಾಗಿ ಬಹಳ ದೊಡ್ಡ ಹೋರಾಟಕ್ಕೆ ನಾವೆಲ್ಲ ಸಜ್ಜಾಗಬೇಕು. ಹಳ್ಳಿ ಹಳ್ಳಿಯಲ್ಲಿ ಮೀಸಲಾತಿ ಹೆಚ್ಚಳದ ಬಗ್ಗೆ ಅರಿವು ಮೂಡಿಸಬೇಕು ಎಂದರು.

ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಡಿ.ವಿ.ಸದಾನಂದಗೌಡ ಮಾತನಾಡಿ, ಮೀಸಲಾತಿ ಹೆಚ್ಚಳದ ವಿಚಾರವಾಗಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ನೇತೃತ್ವದಲ್ಲಿ ಸಮಾಜದ ಸಂಸದರು ಹಾಗೂ ಸಂಘದ ಪದಾಧಿಕಾರಿಗಳ ಜತೆಗೂಡಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು.

ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಶಾಸಕ ಸಿ.ಎನ್.ಬಾಲಕೃಷ್ಣ ಮಾತನಾಡಿ, ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ.16ರಷ್ಟಿದ್ದು, ಉಪಜಾತಿಗಳು ಸೇರಿದರೆ, ಶೇ.21ರಷ್ಟಾಗುತ್ತದೆ. ಶಿಕ್ಷಣ ಮತ್ತು ಉದ್ಯೋಗದಲ್ಲಿ ಕನಿಷ್ಠ ಶೇ.12ರಿಂದ ಶೇ.15ರಷ್ಟು ಹೆಚ್ಚಳ ಮಾಡಬೇಕು. ಪರಮ ಪೂಜ್ಯಶ್ರೀಗಳ ಮಾರ್ಗದರ್ಶನದಂತೆ ಸಂಘ ನಡೆದುಕೊಳ್ಳಲು ಬದ್ಧವಾಗಿದೆ. ಜನಾಂಗದ ಹಿತದೃಷ್ಟಿಯಿಂದ ಬೀದಿಗಿಳಿದು ಹೋರಾಟ ನಡೆಸಲಾಗುವುದು ಎಂದರು.

ಹಿರಿಯ ವಕೀಲ ಸಿ.ಎಚ್.ಹನುಮಂತರಾಯ, ರಾಜ್ಯ ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಗಾನಂ ಶ್ರೀಕಂಠಯ್ಯ ಮೊದಲಾದವರು ಮೀಸಲಾತಿ ಹೆಚ್ಚಳ ಕುರಿತು ಮಾತನಾಡಿದರು. ಸೇರಿದಂತೆ ಒಕ್ಕಲಿಗರ ಸಂಘದ ಸಾಂಸ್ಕೃತಿಕ ಸಮಿತಿ ಅಧ್ಯಕ್ಷರಾದ ನೆಲ್ಲಿಗೆರೆ ಬಾಲು ಸ್ವಾಗತಿಸಿದರು. ಸಚಿವರಾದ ಕೆ.ಗೋಪಾಲಯ್ಯ, ಶಾಸಕರಾದ ಎಂ.ಕೃಷ್ಣಪ್ಪ, ಎಂ.ಕೃಷ್ಣಪ್ಪ(ವಿಜಯನಗರ), ಡಾ.ರಂಗನಾಥ್, ವಿಧಾನಪರಿಷತ್ ಸದಸ್ಯರಾದ ಅ.ದೇವೇಗೌಡ, ದಿನೇಶ್ ಗೂಳಿಗೌಡ, ನಾರಾಯಣಸ್ವಾಮಿ, ರವಿ, ವಾಸಂತಿ ಶಿವಣ್ಣ, ಖಜಾಂಚಿ ಆರ್.ಪ್ರಕಾಶ್ ವಂದಿಸಿದರು. ಪ್ರಧಾನ ಕಾರ್ಯದರ್ಶಿಗಳಾದ ಟಿ.ಕೋನಪ್ಪರೆಡ್ಡಿ, ಉಪಾಧ್ಯಕ್ಷರಾದ ಡಿ.ಹನುಮಂತಯ್ಯ, ಡಾ.ಕೆ.ವಿ.ರೇಣುಕಾಪ್ರಸಾದ್, ಸಹಾಯಕ ಕಾರ್ಯದರ್ಶಿ ರಾಘವೇಂದ್ರ, ಕಾರ್ಯಾಧ್ಯಕ್ಷರಾದ ಸಿ.ದೇವರಾಜ್, ಹೆಚ್.ಎನ್.ರವೀಂದ್ರ, ಕೆ.ವಿ.ಶ್ರೀಧರ್ ಸೇರಿದಂತೆ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಮುದಾಯ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ವಿವಿಧ ಕ್ಷೇತ್ರಗಳ ಗಣ್ಯರು, ಸಮಾಜ ಸೇವಕರು ಭಾಗವಹಿಸಿದ್ದರು.

ಜಿಲ್ಲೆಯನ್ನೇ ಕೈಬಿಟ್ಟ ಸರ್ಕಾರ

ಬಸವರಾಜ ಬೊಮ್ಮಾಯಿ, ಪರಿಹಾರ ಮಾಡುವ ನಿಟ್ಟಿನಲ್ಲಿ ವಿಶೇಷ ಕಾರ್ಯಪಡೆಯನ್ನು ರಚನೆ ಮಾಡಿದ್ದಾರೆ. ಕಾರ್ಯಪಡೆಯಲ್ಲಿ ಮೈಸೂರು, ಕೊಡಗು, ಚಿಕ್ಕಮಗಳೂರು, ಹಾಸನ, ಶಿವಮೊಗ್ಗ, ಉತ್ತರಕನ್ನಡ ಜಿಲ್ಲೆ ಒಳಗೊಂಡಿದೆ. ಆದರೆ ಸರ್ಕಾರ ಈ ಟಾಸ್ಕ್ ಫೋರ್ಸ್‌ನಲ್ಲಿ ಚಾಮರಾಜನಗರ ಜಿಲ್ಲೆಯನ್ನೇ ಕೈಬಿಟ್ಟಿದೆ. ಇದರಿಂದ ಜಿಲ್ಲೆಯ ಶಾಸಕರು ಈ ಬಗ್ಗೆ ಅಸಮಾಧಾನ ಹೊರಹಾಕುತ್ತಿದ್ದಾರೆ. ಪ್ರಮುಖವಾಗಿ ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಬೆಟ್ಟದ ಭಾಗದಲ್ಲಿ ಸಾಕಷ್ಟು ಆನೆ ಹಾವಳಿ ಇದೆ. ಆನೆ ಹಾವಳಿಯಿಂದ ಜೀವ ಹಾನಿ, ಜಮೀನಿನಲ್ಲಿ ಬೆಳೆ ಹಾನಿಯಂತಹ ಪ್ರಕರಣಗಳು ನಿರಂತರವಾಗಿ ವರದಿಯಾಗುತ್ತಿವೆ. ಹಾನಿ ಸಮಸ್ಯೆ ಇರುವ ಕಾರಣ ರೇಡಿಯೋ ಕಾಲರ್‌ಗಳನ್ನು ಮಹದೇಶ್ವರ ಬೆಟ್ಟ ಭಾಗದಲ್ಲಿ ಆನೆಗಳಿಗೆ ಹಾಕಲಾಗಿದೆ. ಇಷ್ಟೊಂದು ಸಮಸ್ಯೆ ಇದ್ದರೂ ಸರ್ಕಾರ ಜಿಲ್ಲೆಯನ್ನು ಟಾಸ್ಕ್ ಫೋರ್ಸ್‌ನಿಂದ ಕೈಬಿಟ್ಟಿರುವುದಕ್ಕೆ ಶಾಸಕರು ಅಸಮಾಧಾನ ಹೊರಹಾಕಿದ್ದಾರೆ.

ವಾಹನ ಖರೀದಿಗೆ ರಿಯಾಯಿತಿ ಪಡೆಯಿರಿ

ಕರ್ನಾಟಕದಲ್ಲಿ ರಸ್ತೆಗಿಳಿದಿರುವ 2.8 ಕೋಟಿ ವಾಹನಗಳ ಪೈಕಿ 79 ಲಕ್ಷಕ್ಕೂ ಹೆಚ್ಚು ವಾಹನಗಳು 15 ವರ್ಷಕ್ಕಿಂತ ಹಳೆಯವು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಫಿಟ್‌ನೆಸ್ ಸರ್ಟಿಫಿಕೇಟ್ ಹೊಂದಿರದ ವಾಹನಗಳನ್ನು ಸ್ಕ್ರ್ಯಾಪ್ ಮಾಡಲು ಪ್ರಯತ್ನಿಸುತ್ತಿವೆ. ಇಂತಹ ಹಲವು ವಾಹನಗಳು ಈಗಲೂ ರಾಜ್ಯದ ರಸ್ತೆಗಳಲ್ಲಿ ಸಂಚರಿಸುತ್ತಿದ್ದು, ಪರಿಸರಕ್ಕೆ ಧಕ್ಕೆ ತಂದಿದ್ದು, ಅಪಘಾತಗಳಿಗೆ ತುತ್ತಾಗುತ್ತಿವೆ. ವಾಣಿಜ್ಯ, ಖಾಸಗಿ ಮತ್ತು ಸರ್ಕಾರಿ ಸೇರಿದಂತೆ ವಿವಿಧ ವರ್ಗಗಳ ಅಡಿಯಲ್ಲಿ ವಾಹನಗಳಿವೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪ್ರತಿ ವರ್ಗದ ಅಡಿಯಲ್ಲಿ, ವಾಹನಗಳ ಆಯಸ್ಸು ಮತ್ತು ದೃಢತೆಗೆ ಅನುಗುಣವಾಗಿ, ವಾಹನಗಳನ್ನು ರದ್ದಿಗೆ ಹಾಕಲಾಗುತ್ತದೆ. ತಮ್ಮ ವಾಹನಗಳನ್ನು ಸ್ವಯಂಪ್ರೇರಿತವಾಗಿ ಒಪ್ಪಿಸುವವರಿಗೆ ಪ್ರಮಾಣಪತ್ರವನ್ನು ನೀಡುವ ಮೂಲಕ ಪ್ರೋತ್ಸಾಹಕಗಳನ್ನು ನೀಡಲು ಯೋಚಿಸುತ್ತಿದ್ದೇವೆ, ಅದರ ಮೂಲಕ ಅವರು ಮುಂದಿನ ಹೊಸ ವಾಹನ ಖರೀದಿಯಲ್ಲಿ ಸಬ್ಸಿಡಿ ಅಥವಾ ರಿಯಾಯಿತಿಯನ್ನು ಪಡೆಯಬಹುದು.

ನಾಲ್ವರು ಆರ್‌ಓಗಳ ಬಂಧನ

ವೋಟರ್ ಐಡಿ ಅಕ್ರಮದ ಪ್ರಕರಣ ಬೆಳಕಿಗೆ ಬಂದ ಬಳಿಕ ಇವರ ಬಂಧನದ ನಿರೀಕ್ಷೆಯಲ್ಲಿ ಬಿಬಿಎಂಪಿ ನ.21ರಂದು ನಾಲ್ವರನ್ನು ಅಮಾನತುಗೊಳಿಸಿದೆ. ಶಿವಾಜಿನಗರ ವಿಧಾನಸಭಾ ಕ್ಷೇತ್ರದ 14 ಬೂತ್ ಮಟ್ಟದ ಸಮಿತಿ (ಬಿಎಲ್‌ಸಿ) ಗುರುತಿನ ಚೀಟಿಯನ್ನು ಸುಹೇಲ್ ಅವರು ಚಿಲುಮೆ ಪ್ರತಿನಿಧಿಗಳಿಗೆ ವಿತರಿಸಿದ್ದಾರೆ ಎನ್ನಲಾಗಿದೆ. ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಚಂದ್ರಶೇಖರ್ ಅವರು ಚಿಲುಮೆ ಪ್ರತಿನಿಧಿ ಲೋಕೇಶ್ ಅವರಿಗೆ ಬೂತ್ ಮಟ್ಟದ ಅಧಿಕಾರಿ ಗುರುತಿನ ಚೀಟಿ ನೀಡಿದ್ದಾರೆ.

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಚಿಲುಮೆ ಪ್ರತಿನಿಧಿಗಳಿಗೆ ಬಿಎಲ್‌ಸಿ ಕಾರ್ಡ್ ವಿತರಿಸಿದ ಆರೋಪ ಭೀಮಾಶಂಕರ್ ಮೇಲಿದ್ದು, ಮಹೇಶ್ ಕೂಡ ಅದೇ ಅಕ್ರಮ ಎಸಗಿದ್ದಾರೆ. ಖಾಸಗಿ ವ್ಯಕ್ತಿಗಳಿಗೆ ಗುರುತಿನ ಚೀಟಿ ವಿತರಣೆ ಚುನಾವಣಾ ಆಯೋಗದ ನಿಯಮಗಳ ಉಲ್ಲಂಘನೆಯಾಗಿರುವುದರಿಂದ ತನಿಖಾ ತಂಡವು ಅಧಿಕಾರಿಗಳನ್ನು ಬಂಧಿಸಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗೊಮ್ಮಟಗಿರಿ ಗೊಮ್ಮಟೇಶ್ವರನಿಗೆ ಎರಡು ವರ್ಷದ ನಂತರ ವಿಜೃಂಭಣೆಯಿಂದ ನೆರವೇರಿದ ಮಸ್ತಕಾಭಿಷೇಕ

● ವಿವಿಧೆಡೆಯಿಂದ ನೂರಾರು ಭಕ್ತರ ಸಮಾಗಮ ● 21 ಬಗೆಯ ದ್ರವ್ಯಗಳಿಂದ ವೈರಾಗ್ಯ ಮೂರ್ತಿಗೆ ಅಭಿಷೇಕ ● 108 ಕಳಸದಿಂದ ಅಭಿಷೇಕ





ಬೆಟ್ಟದೂರಿನ ಗೊಮ್ಮಟಗಿರಿಯ ವೈರಾಗ್ಯ ಮೂರ್ತಿ ಗೊಮ್ಮಟೇಶ್ವರನಿಗೆ ಭಾನುವಾರ ಮಸ್ತಕಾಭಿಷೇಕ ನೆರವೇರಿಸಲಾಯಿತು. (ಚಿತ್ರ: ಎಂ.ಎನ್.ಲಕ್ಷ್ಮೀನಾರಾಯಣ ಯಾದವ್)

ಗೊಮ್ಮಟಗಿರಿ,ನ.27(ಎಂಟಿವೈ)– ಕೋವಿಡ್ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಸರಳ ಪೂಜೆಗಷ್ಟೇ ಸೀಮಿತವಾಗಿದ್ದ ಹುಣಸೂರು ತಾಲೂಕಿನ ಬೆಟ್ಟದೂರು ಗ್ರಾಮದ ಗೊಮ್ಮಟಗಿರಿಯಲ್ಲಿ ಬಾಹುಬಲಿ ಶ್ರೀ ಗೊಮ್ಮಟೇಶ್ವರ ಮೂರ್ತಿಗೆ ಭಾನುವಾರ 73ನೇ ಮಸ್ತಕಾಭಿಷೇಕ ಅಪಾರ ಸಂಖ್ಯೆಯ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಶ್ರೀ ಗೊಮ್ಮಟಗಿರಿ ಕ್ಷೇತ್ರ ಸೇವಾ ಸಮಿತಿ ವತಿಯಿಂದ ಆಯೋಜಿಸಿದ್ದ ಮಸ್ತಕಾಭಿಷೇಕದಲ್ಲಿ ವಿವಿಧೆಡೆಗಳಿಂದ ಆಗಮಿಸಿದ್ದ ಜೈನ ಸಮುದಾಯವೂ ಸೇರಿದಂತೆ ಇನ್ನಿತರ ಧರ್ಮಿಯರು ಶಾಂತ ಹಾಗೂ ವೈರಾಗ್ಯ ಮೂರ್ತಿಗೆ ಜೈಕಾರ ಹಾಕಿ ಭಕ್ತಿಭಾವದಿಂದ ನಮಿಸಿದರು.

ಹುಣಸೂರು ತಾಲೂಕಿನ ಬಿಳಿಕೆರೆ ಹೋಬಳಿಯ ದಿಗಂಬರ ಜೈನ ಅತಿಶಯ ಕ್ಷೇತ್ರವಾಗಿರುವ ಗೊಮ್ಮಟಗಿರಿಯಲ್ಲಿ 850 ವರ್ಷಗಳ ಹಿಂದೆ ಏಕಶಿಲೆಯಲ್ಲಿ ಕೆತ್ತಲಾಗಿರುವ 18 ಅಡಿ ಎತ್ತರದ ಗೊಮ್ಮಟೇಶ್ವರ ಮೂರ್ತಿಗೆ ಪ್ರತಿ ವರ್ಷ ಕಾರ್ತಿಕ ಮಾಸದಲ್ಲಿ ಮಸ್ತಕಾಭಿಷೇಕ ನಡೆಸುವ ಪದ್ಧತಿಯಿದ್ದು, ಇಂದು ನೆರವೇರಿದ 73ನೇ ವರ್ಷದ ಮಸ್ತಕಾಭಿಷೇಕ ಅಲ್ಲಿ ಸಂಭ್ರಮದ ವಾತಾವರಣವನ್ನು ನಿರ್ಮಿಸಿತ್ತು.

ಮಸ್ತಕಾಭಿಷೇಕದ ಹಿನ್ನೆಲೆಯಲ್ಲಿ ಬೆಳಿಗ್ಗೆ 11ರಿಂದ ದಿಗಂಬರ ಜೈನ ಅತಿಶಯ ಕ್ಷೇತ್ರದ ಆವರಣದಲ್ಲಿ ಸುವರ್ಣ ಕಳಸದ ಹರಾಜು ಪ್ರಕ್ರಿಯೆ ನಡೆಯಿತು. 108 ಕಳಸದ ನೀರಿನಿಂದ ಮಧ್ಯಾಹ್ನ 12.30ಕ್ಕೆ ಗೊಮ್ಮಟೇಶ್ವರನಿಗೆ ಅಭಿಷೇಕ ಆರಂಭಿಸಲಾಯಿತು. ಶಿವಮೊಗ್ಗ ಜಿಲ್ಲೆಯ ಶ್ರೀಕ್ಷೇತ್ರ ಹೊಂಬುಜ ಜೈನಮಠದ ಡಾ.ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮೀಜಿ, ಸಂಯಶ್ರೀ ಮಾತಾಜಿ, ವಿನಯಶ್ರೀ ಮಾತಾಜಿ ಸಾನ್ನಿಧ್ಯದಲ್ಲಿ ನಡೆದ ಮಸ್ತಕಾಭಿಷೇಕದಲ್ಲಿ ವಿವಿಧೆಡೆಗಳಿಂದ ಗೊಮ್ಮಟಗಿರಿ ಕ್ಷೇತ್ರಕ್ಕೆ ಆಗಮಿಸಿದ್ದ ಅಪಾರ ಸಂಖ್ಯೆಯ ಭಕ್ತರು ಕಣ್ತುಂಬಿಕೊಂಡರು.

ಗೊಮ್ಮಟಗಿರಿ ಕ್ಷೇತ್ರದ ಪ್ರಧಾನ ಅರ್ಚಕ ಎ.ಎನ್.ಧರಣೇಂದ್ರ ನೇತೃತ್ವದಲ್ಲಿ ಸುಮಾರು 10ಕ್ಕೂ ಹೆಚ್ಚು ಮಂದಿ ಅರ್ಚಕರು ವಿವಿಧ ಮಂತ್ರಗಳ ಪಠಣ ಮತ್ತು ಜಯಘೋಷಗಳೊಂದಿಗೆ ಮಸ್ತಕಾಭಿಷೇಕ ನೆರವೇರಿಸಿದರು.


ಮಧ್ಯಾಹ್ನ 12.30ರಿಂದ ಮಸ್ತಕಾಭಿಷೇಕ ಪ್ರಕ್ರಿಯೆ ಆರಂಭವಾಯಿತು. ಮೊದಲು ಎಳನೀರು ಅಭಿಷೇಕದ ಬಳಿಕ ಕಬ್ಬಿನ ಹಾಲಿನ ಅಭಿಷೇಕ, ಕ್ಷೀರಾಭಿಷೇಕ, ಕಲ್ಕಚೂರ್ಣ, ಅರಿಶಿನ, ಕುಂಕುಮ, ಕಷಾಯ, ಚಂದನ, ನಾಲ್ಕು ಬಗೆಯ ಚಷ್ಕೋನ, ಅಷ್ಟಗಂಧ, ಶ್ರೀಗಂಧ, ಕೇಸರಿ, ಭಸ್ಮ ಸೇರಿದಂತೆ ವಿವಿಧ ದ್ರವ್ಯಗಳಿಂದ ಅಭಿಷೇಕ ಮಾಡಲಾಯಿತು. ಅಂತಿಮವಾಗಿ ಪುಷ್ಪಾರ್ಚನೆ, ಪುಷ್ಪವೃಷ್ಟಿ, ಪೂರ್ಣಕುಂಭ ಜಲಾಭಿಷೇಕ ನೆರವೇರಿಸಿದ ನಂತರ ದೃಷ್ಟಿ ತೆಗೆದು ಮಹಾಮಂಗಳಾರತಿ ಬೆಳಗಲಾಯಿತು.

ಜಾತ್ರೆ ಗೊಮ್ಮಟಗಿರಿಯ ಗೊಮ್ಮಟೇಶ್ವರನಿಗೆ ಪ್ರತಿ ವರ್ಷ ನಡೆಯುವ ಮಸ್ತಕಾಭಿಷೇಕ ಗೊಮ್ಮಟಗಿರಿಯ ಸುತ್ತಲಿನ ಗ್ರಾಮಗಳ ಜನರಿಗೆ ಜಾತ್ರೆಯಾಗಿ ಪರಿಣಮಿಸಿದೆ ಮೈಸೂರು, ಬೆಂಗಳೂರು, ಹಾಸನ, ಚಾಮರಾಜನಗರ, ಮಂಡ್ಯ ಸೇರಿದಂತೆ ಇನ್ನಿತರೆಡೆಗಳಲ್ಲಿ ನೆಲೆಸಿರುವ ಜೈನ ಸಮುದಾಯದವರು ಮಸ್ತಕಾಭಿಷೇಕದಲ್ಲಿ ಪಾಲ್ಗೊಂಡಿದ್ದರು. ಸುತ್ತಮುತ್ತಲಿನ ಗ್ರಾಮಸ್ಥರು ಸಹ ಬಾಹುಬಲಿ ದರ್ಶನದೊಂದಿಗೆ ಪೂಜೆ ಸಲ್ಲಿಸಿದರು. ಕೇವಲ ಜೈನ ಧರ್ಮಿಯರು ಮಾತ್ರವಲ್ಲದೆ ಎಲ್ಲಾ ಧರ್ಮದವರು ಮಸ್ತಕಾಭಿಷೇಕ ಕಣ್ತುಂಬಿಕೊಂಡು, ಪೂಜೆ ಸಲ್ಲಿಸುವ ಸಂಪ್ರದಾಯ ಈ ಭಾಗದಲ್ಲಿದ್ದು, ಸುತ್ತಮುತ್ತಲಿನ ಗ್ರಾಮಗಳಲ್ಲಿ ಗೊಮ್ಮಟಗಿರಿಯ ಜಾತ್ರೆಯೆಂದೇ ಈ ಉತ್ಸವವನ್ನು ಕರೆಯಲಾಗುತ್ತದೆ.

ಸಾವಿರಾರು ಜನರು ದಿನವಿಡೀ ಗೊಮ್ಮಟಗಿರಿಗೆ ಬರುವ ಹಿನ್ನೆಲೆಯಲ್ಲಿ ಆಟಿಕೆ ಮಾರಾಟ, ಸಿಹಿ ತಿಂಡಿ ಮಾರಾಟ, ವಿವಿಧ ವಸ್ತುಗಳ ಮಾರಾಟ ಮಳಿಗೆಗಳು, ಐಸ್‌ಕ್ರೀಮ್ ಮಾರಾಟದ ವಾಹನ, ಕಬ್ಬಿನ ಹಾಲಿನ ಮಾರಾಟ ಕೇಂದ್ರ, ನಂದಿನಿ ಐಸ್‌ಕ್ರೀಮ್, ಕಡಲೆಪುರಿ, ಸಿಹಿ ತಿನಿಸು ಸೇರಿದಂತೆ ವಿವಿಧ ಮಳಿಗೆಗಳು, ಮಕ್ಕಳ ಆಟಿಕೆಗಳ ಕೇಂದ್ರಗಳು ತಲೆ ಎತ್ತಿದ್ದವು. ಇದರಿಂದ ಗೊಮ್ಮಟಗಿರಿಯಲ್ಲಿ ಜಾತ್ರಾ ವಾತಾವರಣ ನಿರ್ಮಾಣವಾಗಿತ್ತು ಮೈಸೂರು, ಕೆ.ಆರ್.ಎಸ್ ಸೇರಿದಂತೆ ವಿವಿಧೆಡೆಯಿಂದ ವಿಶೇಷ ಬಸ್ ವ್ಯವಸ್ಥೆ ಮಾಡಲಾಗಿತ್ತು. ಬಿಳಿಕೆರೆ ಪೊಲೀಸರು ಸೂಕ್ತ ಬಂದೋಬಸ್ತ್ ಏರ್ಪಡಿಸಿದ್ದರು.

ಶಿವರಾಮು ಕಾಡನಕುಪ್ಪೆ ಸಂಸ್ಮರಣಾ ಗ್ರಂಥ ಬಿಡುಗಡೆ

ಶಿವರಾಮು ಕಾಡನಕುಪ್ಪೆ ಅವರ ಬದುಕು, ಬರಹ ಎಲ್ಲರೂ ಓದಬೇಕು



ಮೈಸೂರು, ನ.27(ಆರ್‌ಕೆಬಿ)– ಶಿವರಾಮು ಕಾಡನಕುಪ್ಪೆ ಅವರಲ್ಲಿ ಮೌಲ್ಯ, ವೈಚಾರಿಕ ನೆಲೆ, ದಿಟ್ಟ ಹೆಜ್ಜೆ ಇದೆ. ಇವೆಲ್ಲವೂ ತಿಳಿಯಬೇಕು. ಜನರು ಅವರ ಬದುಕು, ಬರಹ, ಅನುಭವಗಳನ್ನು ಓದುವಂತಾಗಬೇಕು ಎಂದು ಪತ್ರಕರ್ತ ಜಿ.ಪಿ.ಬಸವರಾಜು ತಿಳಿಸಿದರು.

ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಕನ್ನಡ ಸಾಹಿತ್ಯ ಭವನದಲ್ಲಿ ಸಂವಹನ ಪ್ರಕಾಶನ, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಆಶ್ರಯದಲ್ಲಿ ಭಾನುವಾರ ಶಿವರಾಮು ಕಾಡನಕುಪ್ಪೆ ಸಂಸ್ಮರಣ ಗ್ರಂಥ ಬಿಡುಗಡೆ ಮಾಡಿ ಮಾತನಾಡಿದರು.

ಸಂಸ್ಮರಣ ಗ್ರಂಥದಲ್ಲಿ ಯಾವ ಲೇಖನಗಳು ಗಾಳಿಯ ಬಲೂನುಗಳಂತಿಲ್ಲ. ವಾಸ್ತವವಾಗಿ ಎಲ್ಲಾ ವಿಚಾರವೂ ಶಿವರಾಮು ಕಾಡನಕುಪ್ಪೆ ಅವರನ್ನು ತೆರೆದಿಡುತ್ತದೆ. ಮುಂದಿನ ತಲೆಮಾರಿಗೆ ಈ ಕೃತಿ ಬಹಳ ಅನುಕೂಲವಾಗುತ್ತದೆ ಎಂದರು.

ಕನ್ನಡ ವಿಕಾಸ ಶೈಕ್ಷಣಿಕ, ಸಾಮಾಜಿಕ ಸಂಸ್ಥೆಯ ಅಧ್ಯಕ್ಷ ಪ.ಮಲ್ಲೇಶ್ ಅಧ್ಯಕ್ಷತೆ ವಹಿಸಿದ್ದರು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಶ್ರಾಂತ ಪ್ರಾಧ್ಯಾಪಕ ಡಾ.ರಾಗೌ ಪ್ರಾಸ್ತಾವಿಕವಾಗಿ ಮಾತನಾಡಿದರು. ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಹಾರಾಜ ಕಾಲೇಜು ನಿವೃತ್ತ ಪ್ರಾಂಶುಪಾಲ ಡಾ.ಕೆ.ಕಾಳಚನ್ನೇಗೌಡ, ಸುವರ್ಣ ಕಾಡನಕುಪ್ಪೆ, ಡಾ.ಸುಶಿ ಕಾಡನಕುಪ್ಪೆ, ಡಾ.ನೇಸರ ಕಾಡನಕುಪ್ಪೆ ಉಪಸ್ಥಿತರಿದ್ದರು.



ಮೈಸೂರಿನ ರೂಪಾನಗರದ ದೀಪಾ ಪದವಿಪೂರ್ವ ಕಾಲೇಜಿನಲ್ಲಿ ಸಂವಿಧಾನ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಸಂವಿಧಾನ ಸ್ವೀಕಾರ ವಿಧಿಯನ್ನು ಬೋಧಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಪ್ರಣೀತ ಏರ್ಮಾಳ್, ಕನ್ನಡ ಉಪನ್ಯಾಸಕರಾದ ಎ.ಎಸ್.ಗೋವಿಂದೇಗೌಡ, ವಾಣಿಜ್ಯಶಾಸ್ತ್ರ ಉಪನ್ಯಾಸಕರಾದ ಶಿವಕುಮಾರ್ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ಬೆಂಗಳೂರಲ್ಲಿ ಹೋರಾಟನಿರತರು ಪೊಲೀಸ್ ವಶಕ್ಕೆ: ಮೈಸೂರಲ್ಲಿ ಪ್ರತಿಭಟನೆ

ಮೈಸೂರು,ನ.27(ಪಿಎಂ)– ಬೆಂಗಳೂರಿನಲ್ಲಿ ಪ್ರತಿಭಟನಾನಿರತ ಕಬ್ಬು ಬೆಳೆಗಾರರನ್ನು ಪೊಲೀಸರು ವಶಕ್ಕೆ ಪಡೆಯುವ ಮೂಲಕ ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಭಾನುವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಕೋರ್ಟ್ ಎದುರಿನ ಗಾಂಧಿ ಪುತ್ಥಳಿ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ಕಪ್ಪುಪಟ್ಟಿ ಧರಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕಬ್ಬಿನ ಎಫ್‌ಆರ್‌ಪಿ ದರ ಹೆಚ್ಚಳ ಮಾಡಬೇಕೆಂಬುದೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಸೇರಿದಂತೆ ಎಲ್ಲಾ ಪ್ರತಿಭಟನಾನಿರತರನ್ನು ಪೊಲೀಸರು ಶನಿವಾರ ವಶಕ್ಕೆ ಪಡೆದು ಪ್ರತಿಭಟನೆ ಹಕ್ಕನ್ನು ಕಸಿದಿದ್ದಾರೆ ಎಂದು ಆರೋಪಿಸಿದರು.

ಅಹೋರಾತ್ರಿ ಅನಿರ್ದಿಷ್ಟಾವಧಿ 5ನೇ ದಿನದ ಪ್ರತಿಭಟನೆ ವೇಳೆ ಎಲ್ಲಾ ಪ್ರತಿಭಟನಾನಿರತರನ್ನು ವಶಕ್ಕೆ ಪಡೆದು ಪ್ರತಿಭಟನೆಯ ಹಕ್ಕನ್ನು ಮೊಟಕುಗೊಳಿಸಿದ್ದಾರೆ. ಸಂಜೆ ವೇಳೆಗೆ ಎಲ್ಲರನ್ನೂ ಬಿಡುಗಡೆ ಮಾಡಿದ್ದರಾದರೂ ನಮ್ಮ ಸಂಘದ ಅಧ್ಯಕ್ಷರ ನೇತೃತ್ವದಲ್ಲಿ ನಡೆಯುತ್ತಿದ್ದ ಹೋರಾಟಕ್ಕೆ ವಿನಾಕಾರಣ ತೊಂದರೆ ನೀಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಡುಗಡೆ ಬಳಿಕ ಸಂಘದ ಅಧ್ಯಕ್ಷರ ನೇತೃತ್ವದಲ್ಲಿ ಪ್ರತಿಭಟನೆ ಬೆಂಗಳೂರಲ್ಲಿ ಮುಂದುವರೆದಿದೆ ಎಂದು ಪ್ರತಿಭಟನಾಕಾರರು ಇದೇ ವೇಳೆ ತಿಳಿಸಿದರು. ಸಂಘದ ತಾಲೂಕು ಅಧ್ಯಕ್ಷ ಲಕ್ಷ್ಮಿಪುರ ವೆಂಕಟೇಶ್, ಮುಖಂಡರಾದ ಡಿ.ಕಾಟೂರು ಮಹದೇವಸ್ವಾಮಿ, ವರಕೂಡು ನಾಗೇಶ್, ಜಯರಾಮ, ಸಾತಗಳ್ಳಿ ಬಸವರಾಜ್, ಹಂಪಾಪುರ ರಾಜೇಶ್, ದೇವಮಣಿ, ವಾಜಮಂಗಲ ಮಹದೇವು ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಉದ್ಯಾನದಲ್ಲಿ ತ್ಯಾಜ್ಯ ವಿಂಗಡಣೆ ಘಟಕ ನಿರ್ಮಾಣಕ್ಕೆ ನಿವಾಸಿಗಳ ಆಕ್ಷೇಪ

ಮೈಸೂರು, ನ.27(ಬಿಸಿಟಿ)– ಸಾರ್ವಜನಿಕ ಉದ್ಯಾನವನದಲ್ಲಿ ತ್ಯಾಜ್ಯ ವಿಂಗಡಣೆ ಘಟಕ ನಿರ್ಮಾಣಕ್ಕೆ ಮುಂದಾಗಿರುವ ಮೈಸೂರು ನಗರಪಾಲಿಕೆಯ ನಿರ್ಧಾರಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಮೈಸೂರಿನ ಹೆಬ್ಬಾಳ 3ನೇ ಹಂತ(ಬಸವಮಾರ್ಗ ಫೌಂಡೇಷನ್‌ನ ಪಕ್ಕದಲ್ಲಿರುವ ಉದ್ಯಾನವನ)ದಲ್ಲಿರುವ ಸಾರ್ವಜನಿಕ ಉದ್ಯಾನವನದಲ್ಲಿ ಮೈಸೂರು ನಗರಪಾಲಿಕೆಯಿಂದ ನಿರ್ಮಾಣವಾಗುತ್ತಿರುವ ತ್ಯಾಜ್ಯ ವಿಂಗಡಣೆ ಘಟಕ ಸ್ಥಳೀಯ ನಿವಾಸಿಗಳಲ್ಲಿ ಆತಂಕ ಉಂಟುಮಾಡಿದೆ.

ನೂರಾರು ಮನೆಗಳ ಹಾಗೂ ನಿವೇಶನಗಳ ನಡುವೆ ಇರುವ ಸುಮಾರು ಅರ್ಧ ಎಕರೆ ವಿಸ್ತೀರ್ಣದ ಉದ್ಯಾನವನದಲ್ಲಿ ತ್ಯಾಜ್ಯ ವಿಂಗಡಣೆ ಘಟಕ ನಿರ್ಮಾಣ ಮಾಡುತ್ತಿರುವುದು ಸರಿಯಲ್ಲ. ಇದರಿಂದ ತುಂಬಾ ತೊಂದರೆಗಳು ಎದುರಾಗುತ್ತವೆ ಎಂದು ಆತಂಕ ವ್ಯಕ್ತಪಡಿಸುತ್ತಿರುವ ನಿವಾಸಿಗಳು, ಸ್ವಚ್ಛತೆಯಿಂದ ಕೂಡಿರುವ ಪ್ರದೇಶವನ್ನು ಸ್ವತಃ ಪಾಲಿಕೆಯೇ ಕೊಳಚೆ ಪ್ರದೇಶವನ್ನಾಗಿ ಮಾಡಲು ಹೊರಟಿದೆ ಎಂದು ದೂರಿದ್ದಾರೆ.

ಒಣತ್ಯಾಜ್ಯ ಘಟಕವಾಗಿ ಪರಿವರ್ತನೆ: ಹೆಬ್ಬಾಳ ಹಾಗೂ ವಿಜಯನಗರ ಸುತ್ತಮುತ್ತಲಿನ ಮನೆಗಳಿಂದ ಹಾಗೂ ಸಾರ್ವಜನಿಕ ಸ್ಥಳಗಳಿಂದ ಸಂಗ್ರಹಿಸುವ ತ್ಯಾಜ್ಯವನ್ನು ತಂದು ಈ ಘಟಕದಲ್ಲಿ ವಿಂಗಡಣೆ ಮಾಡಲಾಗುತ್ತದೆ. ಕ್ರಮೇಣ ಈ ಘಟಕ ಒಣ ತ್ಯಾಜ್ಯ ಸಂಗ್ರಹ ಘಟಕವಾಗಲಿದೆ ಎಂದು ಸಂಬಂಧಪಟ್ಟ ಪಾಲಿಕೆ ಇಂಜಿನಿಯರ್ ಹೇಳುತ್ತಿದ್ದಾರೆ. ಆದರೆ, ಇದರಿಂದ ಈ ಪ್ರದೇಶದಲ್ಲಿ ದುರ್ವಾಸನೆ ಹೆಚ್ಚಾಗಲಿದ್ದು, ವಾಸ ಮಾಡುವುದೇ ಕಷ್ಟವಾಗಲಿದೆ ಎಂದು ನಿವಾಸಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

ಸದ್ಯಕ್ಕೆ ಕಡಿಮೆ ಜನರಿರುವ ಈ ಪ್ರದೇಶದ ಸುತ್ತಮುತ್ತ ಮನೆಗಳನ್ನು ನಿರ್ಮಿಸಲು ನೂರಾರು ಖಾಲಿ ನಿವೇಶನಗಳಿವೆ. ಚಿಕ್ಕ ಉದ್ಯಾನವಾಗಿರುವ ಈ ಚಿಕ್ಕ ಪಾರ್ಕ್‌ನಲ್ಲಿ ತ್ಯಾಜ್ಯ ವಿಂಗಡಣೆ ಘಟಕ ನಿರ್ಮಾಣ ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.



ಕಾಗದಗಳ ಮೇಲೆ ಉಳಿದ ಕಾನೂನುಗಳು....!

ಕಾನೂನುಗಳು ಕಾಗದಗಳ ಮೇಲೆ ಉಳಿದಿವೆಯೇ ಹೊರತು ಪಾಲನೆಯಾಗುತ್ತಿಲ್ಲ ಎಂದು ಪರಿಸರ ಹೋರಾಟಗಾರ ಮತ್ತು ಮೈಸೂರು ಗ್ರಾಹಕರ ಪರಿಷತ್ತು (ಎಂಜಿಪಿ) ಸಂಚಾಲಕ ಭಾಮಿ ವಿ.ಶೆಣೈ ಬೇಸರ ವ್ಯಕ್ತಪಡಿಸಿದ್ದಾರೆ. ಕಸ ಸಂಗ್ರಹಿಸಿ ಪ್ರತ್ಯೇಕಿಸುವ ಘಟಕಗಳು ವಸತಿ ಪ್ರದೇಶದಿಂದ ದೂರವಿರಬೇಕು. ಒಮ್ಮೆ ಅವರು ತ್ಯಾಜ್ಯ ಸಂಗ್ರಹಿಸಲು ಪ್ರಾರಂಭಿಸಿದರೆ, ಆ ಪ್ರದೇಶವು ಅನಾರೋಗ್ಯಕರವಾಗುತ್ತದೆ. ಒಂದು ವೇಳೆ ನಗರಪಾಲಿಕೆಯು ಉದ್ಯಾನದ ಒಂದು ಭಾಗವನ್ನು ತ್ಯಾಜ್ಯಕ್ಕಾಗಿ ಬಳಸಿದರೆ, ಇದು ಇಡೀ ಉದ್ಯಾನವನವನ್ನೇ ಹಾಳು ಮಾಡಿದಂತೆ. ಈಗಾಗಲೇ ನಾವು ಮೈಸೂರಿನಲ್ಲಿ ಅನೇಕ ಉದ್ಯಾನವನಗಳನ್ನು ಕಳೆದುಕೊಂಡಿದ್ದೇವೆ. ನಗರಪಾಲಿಕೆಯೇ ನಿಯಮಗಳನ್ನು ಗಾಳಿಗೆ ತೂರಿ, ಉಲ್ಲಂಘಿಸುತ್ತಿದೆ ಎಂದು ಆರೋಪಿಸಿದರು.

ಇಲ್ಲಿ ಕ್ರಮೇಣ ಕಸದ ವಾಹನಗಳ ಸಂಚಾರ ಹೆಚ್ಚುವ ಜೊತೆಗೆ ಉದ್ಯಾನದ ಆವರಣ ಹಾಳಾಗುತ್ತದೆ. ಕಸ ಸಂಗ್ರಹದಿಂದ ಈ ಪ್ರದೇಶದಲ್ಲಿ ದುರ್ವಾಸನೆ ಹೆಚ್ಚಾಗುತ್ತದೆ ಎಂದು ಸ್ಥಳೀಯ ನಿವಾಸಿ ವಿದ್ಯುತ್ ಶಶಿಧರ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಕರ್ನಾಟಕ ಉದ್ಯಾನವನ, ಮೈದಾನ ಮತ್ತು ಮುಕ್ತ ಜಾಗ ಕಾಯಿದೆ 1985ರ ಪ್ರಕಾರ, 2.5 ಹೆಕ್ಟೇರ್ ಅಳತೆಯ ಉದ್ಯಾನದಲ್ಲಿ ಏನನ್ನೂ ನಿರ್ಮಿಸುವಂತಿಲ್ಲ. ಇದು 2.5 ಹೆಕ್ಟೇರ್‌ಗಿಂತ ದೊಡ್ಡದಾಗಿದ್ದರೆ, ಸೆಕ್ಯುರಿಟಿ ಗಾರ್ಡ್‌ಗಾಗಿ ವಾಸಸ್ಥಳವನ್ನು ನಿರ್ಮಿಸಲು ಅಥವಾ ಉದ್ಯಾನವನದ ಉಪಕರಣಗಳನ್ನು ಸಂಗ್ರಹಿಸಲು ಶೇ.5ಕ್ಕಿಂತ ಕಡಿಮೆ ಪ್ರದೇಶ ಬಳಸಬಹುದು. ಆದರೆ ಯಾವುದೇ ಉದ್ಯಾನವನದ ಶೇ.5ರಷ್ಟು ಭಾಗ ನಿರ್ಮಾಣಕ್ಕೆ ಬಳಸಬಹುದು ಎನ್ನುತ್ತಿದ್ದಾರೆ.

ಬೇಲಿಯೇ ಎದ್ದು ಹೊಲ ಮೇದಂತೆ

ನಗರಪಾಲಿಕೆಯಿಂದ ಕಾಯಿದೆಯ ದುರ್ಬಳಕೆಯಾಗಿದೆ. ಶೇ.5ರಷ್ಟಿರಬೇಕಾದುದು ಶೇ.40ರಷ್ಟು ದಾಟಿದೆ. ಇದನ್ನು ನೋಡಿದರೆ ಅಧಿಕಾರಿ ಮತ್ತು ಸಿಬ್ಬಂದಿಗೆ ನಿಯಮಗಳ ಬಗ್ಗೆ ಅರಿವಿಲ್ಲ ಎಂಬಂತಾಗಿದೆ. ಇದರಿಂದ ನಿವಾಸಿಗಳು ಮಾತ್ರ ಬಲಿಪಶುಗಳಾಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಗಿಡಗಳಿಗೆ ಕತ್ತರಿ: ಈ ಹಿಂದೆ ನಗರಪಾಲಿಕೆ ಹೈ–ಟೆನ್ಷನ್ ಪಾರ್ಕ್ ಬಳಿ(ಹೈ–ಟೆನ್ಷನ್ ವಿದ್ಯುತ್ ಲೈನ್ ಮಾರ್ಗ) ತ್ಯಾಜ್ಯವನ್ನು ಪ್ರತ್ಯೇಕಿಸುತ್ತಿತ್ತು. ಆದರೆ ಈಗ ಆ ಪ್ರದೇಶವನ್ನು ಬಫರ್ ಝೋನ್ ಎಂದು ಘೋಷಿಸಿ, ಇಲ್ಲಿನ ಉದ್ಯಾನವನದೊಳಗೆ ತ್ಯಾಜ್ಯ ವಿಂಗಡಣೆ ಘಟಕ ನಿರ್ಮಿಸಲಾಗುತ್ತಿದೆ. ಸುಮಾರು ಐದು ವರ್ಷಗಳ ಹಿಂದೆ ನಡೆದ ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಅರಣ್ಯ ಇಲಾಖೆ ಹಾಗೂ ಸ್ಥಳೀಯ ನಿವಾಸಿಗಳು ಸೇರಿ ನೂರಾರು ಸಸಿಗಳನ್ನು ನೆಟ್ಟು ರಕ್ಷಣೆ ಮಾಡಲಾಗಿತ್ತು. ಆದರೀಗ ನಗರಪಾಲಿಕೆ ಸಿಬ್ಬಂದಿ ಬುಲ್ಡೋಜರ್‌ಗಳಿಂದ ತ್ಯಾಜ್ಯ ವಿಂಗಡಣೆ ನೆಪದಲ್ಲಿ ಎಲ್ಲಾ ಗಿಡಗಳನ್ನು ನಾಶ ಮಾಡಿದ್ದಾರೆ ಎಂದು ಕಿಡಿಕಾರಿದರು.

ಉದ್ಯಾನವನ ಮತ್ತು ಆಟದ ಮೈದಾನಗಳು ತ್ಯಾಜ್ಯ ಸಂಗ್ರಹಣೆಗಲ್ಲ. ಯಾವುದೇ ನಾಗರಿಕ ಸಂಸ್ಥೆಯು ತ್ಯಾಜ್ಯ ಸಂಸ್ಕರಣಾ ಘಟಕಗಳು ಮತ್ತು ತ್ಯಾಜ್ಯ ವಿಲೇವಾರಿ ಅಥವಾ ವಿಂಗಡಣೆ ಕೇಂದ್ರಗಳನ್ನು ಮಾಡಲು ಬಯಸಿದರೆ, ಅವರು ಅದಕ್ಕಾಗಿ ಸಾವಿರಾರು ಎಕರೆ ಭೂಮಿಯನ್ನು ಸ್ವಾಧೀನಕ್ಕೆ ಪಡೆದು ತ್ಯಾಜ್ಯ ಸುರಿಯಲು ಬಳಸಬಹುದು ಎಂದು ಪಾಲಿಕೆ ಇಂಜಿನಿಯರ್ ಅವರನ್ನು ಕೇಳಿದರೆ, ಯಾವುದೇ ಉದ್ಯಾನವನದ ಶೇ.5ರಷ್ಟು ಭಾಗ ನಿರ್ಮಾಣಕ್ಕೆ ಬಳಸಬಹುದು ಎನ್ನುತ್ತಿದ್ದಾರೆ. ಸಾರ್ವಜನಿಕ ಉದ್ಯಾನವನದಲ್ಲಿ ತ್ಯಾಜ್ಯ ವಿಂಗಡಣೆ ಘಟಕ ನಿರ್ಮಾಣ ಮಾಡುವುದು ಸರಿಯಲ್ಲ ಎಂದು ಪ್ರಶ್ನಿಸಿದ್ದಕ್ಕೆ ಸ್ವಲ್ಪ ಸ್ಥಗಿತಗೊಳಿಸಿ, ಮತ್ತೆ ತ್ವರಿತಗತಿಯಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಇದೇನಾ ಕಾನೂನು ಪಾಲನೆ ಎಂದು ದೂರಿದ್ದಾರೆ.

ಮೈಸೂರು ಮಿತ್ರ

ಸೋಮವಾರ 28 ನವೆಂಬರ್ 2022

ಡಿ.7, ಹುಣಸೂರಲ್ಲಿ ಹನುಮ ಜಯಂತಿ

• ಎಸ್ಪಿ ನೇತೃತ್ವದಲ್ಲಿ ಶಾಂತಿ ಸಭೆ • ಉತ್ಸವದಲ್ಲಿ ರಾಜಕಾರಣ ಬೆರಸದಂತೆ ಮುಖಂಡರ ಮನವಿ
• ರಾಜಕೀಯ ಪಕ್ಷಗಳ ದೂರವಿಟ್ಟು ಸಮಿತಿಯೇ ಜಯಂತಿ ನಡೆಸಲು ಶಾಸಕರ ಸಲಹೆ

ಹುಣಸೂರು, ನ.27– ಹುಣಸೂರಿನಲ್ಲಿ ಡಿ.7ರಂದು ನಡೆಯಲಿರುವ ಹನುಮ ಜಯಂತಿಯನ್ನು ಶಾಂತಿಯುತವಾಗಿ ಆಚರಿಸಲು ಎಲ್ಲಾ ಪಕ್ಷಗಳು, ಧರ್ಮ, ವಿವಿಧ ಸಮುದಾಯದ ಮುಖಂಡರು ಶಾಂತಿ ಸಭೆಯಲ್ಲಿ ಮನವಿ ಮಾಡಿದರು.



ನಗರದ ಅಂಬೇಡ್ಕರ್ ಭವನದಲ್ಲಿ ಪೊಲೀಸ್ ಇಲಾಖೆ ವತಿಯಿಂದ ಆಯೋಜಿಸಿದ್ದ ಶಾಂತಿ ಸಭೆಯಲ್ಲಿ ಮಾತನಾಡಿದ ಹನುಮಜಯಂತಿ ಸಮಿತಿ ಅಧ್ಯಕ್ಷ ವಿ.ಎನ್.ದಾಸ್, ಹನುಮ ಜಯಂತಿಯ ಸಿದ್ಧತೆಗಳ ಕುರಿತು ಮಾಹಿತಿ ನೀಡಿದರು. ಸಮಿತಿಯ ಕಾನೂನು ಸಲಹೆಗಾರ ವಕೀಲ ಯೋಗಾನಂದಕುಮಾರ್ ಸಮಿತಿ ವತಿಯಿಂದ ಜಯಂತಿ ಆಚರಿಸುತ್ತಿದ್ದು, ಇದು ಚುನಾವಣಾ ವರ್ಷವಾಗಿದ್ದು ಜಯಂತಿಯಲ್ಲಿ ಯಾವುದೇ ರಾಜಕೀಯ ಬೆರೆಸದಂತೆ ಮನವಿ ಮಾಡಿದರು.

ತಾಲೂಕು ಜೆಡಿಎಸ್ ಅಧ್ಯಕ್ಷ ದೇವರಹಳ್ಳಿ ಸೋಮಶೇಖರ್, ಬಿಜೆಪಿ ತಾಲೂಕು ಅಧ್ಯಕ್ಷ ನಾಗಣ್ಣಗೌಡ, ನಗರಸಭಾ ಸದಸ್ಯ ಸೈಯದ್ ಯೂನಸ್, ಮಾಜಿ ಸದಸ್ಯ ಮಜಾಜ್ ಅಹಮದ್, ಕಾಂಗ್ರೆಸ್ ಮುಖಂಡ ರಾಘು ಮಾತನಾಡಿ, ಯಾವುದೇ ಹಬ್ಬವನ್ನು ಹಬ್ಬದಂತೆ ಆಚರಿಸಬೇಕು. ದಸಂಸದ ನಿಂಗರಾಜ ಮಲ್ಲಾಡಿ, ಡಿ.ಕುಮಾರ್ ಹಬ್ಬವನ್ನು ಜಾತ್ಯತೀತ, ಪಕ್ಷಾತೀತ, ಧರ್ಮಾತೀತವಾಗಿ ಆಚರಿಸ ಬೇಕು. ಪ್ರಚೋದನಾಕಾರಿ ಭಾಷಣಕ್ಕೆ ಅವಕಾಶ ನೀಡದೆ. ಶಾಂತಿ ಸೌಹಾರ್ದತೆಯನ್ನು ಕಾಪಾಡಬೇ ಕೆಂದು ಅಭಿಪ್ರಾಯಪಟ್ಟು, ಎಲ್ಲ ಧರ್ಮಗಳ ಮುಖಂಡರು ಮುಂದೆ ನಿಂತು ಯುವಕರನ್ನು ನಿಯಂತ್ರಿಸುವ ಕೆಲಸ ಮಾಡಬೇಕೆಂದು ಮನವಿ ಮಾಡಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಎಚ್.ಪಿ.ಮಂಜುನಾಥ್, ವಕೀಲ ಯೋಗಾನಂದಕುಮಾರ್ ಸಲಹೆಯಂತೆ ಎಲ್ಲ ರಾಜಕೀಯ ಪಕ್ಷಗಳು ದೂರವಿದ್ದು, ಸಮಿತಿಯೇ ಮುಂದೆ ನಿಂತು ಜಯಂತಿ ಮೆರವಣಿಗೆ ನಡೆಸಬೇಕು. ಇದೊಂದು ಗಾಂಭೀರ್ಯ, ಭ್ರಾತೃತ್ವದ ಜಯಂತಿ ಆಗಲಿ, ಸಾಮಾಜಿಕ ಜಾಲತಾಣಗಳ ಬಗ್ಗೆ ಎಚ್ಚರ ವಹಿಸಬೇಕೆಂದು ಆಶಿಸಿದರು.

ಎಸ್.ಪಿ. ಆರ್.ಚೇತನ್ ಮಾತನಾಡಿ, ಹಿಂದಿನ ಘಟನೆಗಳನ್ನು ಆಧರಿಸಿ ಪೊಲೀಸ್ ಇಲಾಖೆ ಸಾಕಷ್ಟು ಮುಂಜಾಗ್ರತಾ ಕ್ರಮವಹಿಸಲಿದೆ. ಎಲ್ಲವನ್ನು ಅನುಮತಿ ಪಡೆದೇ ಆಚರಿಸಬೇಕು. 24 ಗಂಟೆ ಮೊದಲು ಅನುಮತಿ ಕಡ್ಡಾಯ, ಶಾಂತಿ ಸುವ್ಯವಸ್ಥೆ ಕದಡುವವರ ಮೇಲೆ ಇಲಾಖೆ ನಿಗಾ ವಹಿಸಿದೆ. ನ್ಯಾಯಾಲಯದ ನಿರ್ದೇಶನದಂತೆ ಶಬ್ದಮಾಲಿನ್ಯ ಸೇರಿದಂತೆ ಎಲ್ಲದರ ಮೇಲೂ ನಿಯಂತ್ರಣಕ್ಕೆ ಕ್ರಮ ವಹಿಸಲಾಗುವುದು.

> **ವಾಹನ ಏರುವಂತಿಲ್ಲ**
> ಮೆರವಣಿಗೆಯಲ್ಲಿ ಯಾವುದೇ ಸಮಿತಿ, ಮುಖಂಡರು ವಾಹನ ಏರಿ ಬರುವಂತಿಲ್ಲ, ನ್ಯಾಯಾಲಯದ ಆದೇಶದಂತೆ ಡೆಸಿಬಲ್ ಆಧರಿಸಿ ಮೈಕ್, ಸೌಂಡ್ ಬಾಕ್ಸ್‌ಗಳಿಗೆ ಅವಕಾಶ ನೀಡಲಾಗುವುದು.
> -ಆರ್.ಚೇತನ್, ಎಸ್ಪಿ

ಸಾಮಾಜಿಕ ಜಾಲತಾಣದ ಬಗ್ಗೆ ಇಲಾಖೆ ನಿಗಾ ಇಟ್ಟಿದ್ದು, ಶಾಂತಿ ಕದಡುವ ಯಾವುದೇ ಪೋಸ್ಟ್ ಹಾಕಿದರೂ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು, ನಗರ ಪ್ರವೇಶಿಸುವ ಎಲ್ಲಾ ರಸ್ತೆಗಳಲ್ಲೂ ಚೆಕ್‌ಪೋಸ್ಟ್ ನಿರ್ಮಿಸಲಾಗುವುದು, ನಗರದ ಮೆರವಣಿಗೆ ತೆರಳುವ ರಸ್ತೆಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗುತ್ತಿದೆ ಎಲ್ಲರೂ ಪೊಲೀಸರಿಗೆ ಸಹಕಾರ ನೀಡುವಂತೆ ಮನವಿ ಮಾಡಿದರು.

ಸಭೆಯಲ್ಲಿ ತಹಸೀಲ್ದಾರ್ ಡಾ.ಅಶೋಕ್, ಡಿವೈಎಸ್‌ಪಿ ರವಿಪ್ರಸಾದ್, ನಗರಸಭೆ ಅಧ್ಯಕ್ಷೆ ಗೀತಾ, ಉಪಾಧ್ಯಕ್ಷೆ ಆಶಾ, ಸ್ಥಾಯಿ ಸಮಿತಿ ಅಧ್ಯಕ್ಷೆ ಶ್ವೇತಾ, ಹುಡಾ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ, ಪೌರಾಯುಕ್ತೆ ಮಾನಸ, ಇನ್ಸ್‌ಪೆಕ್ಟರ್‌ಗಳಾದ ಶ್ರೀನಿವಾಸ್, ರವಿ, ಜಯಂತಿ ಸಮಿತಿಯ ಎಚ್.ವೈ.ಮಹದೇವ್, ಚಂದ್ರಮೌಳಿ, ಅನಿಲ್, ಗಿರೀಶ್, ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳು, ವಿವಿಧ ಧರ್ಮಗಳ ಮುಖಂಡರು ಸೇರಿದಂತೆ ಅನೇಕರು ಭಾಗವಹಿಸಿದ್ದರು.

ನ.30ರಂದು ಮೈಸೂರಲ್ಲಿ ಕನಕದಾಸರ ಜಯಂತ್ಯುತ್ಸವ



ಕೆ.ಆರ್.ನಗರ, ನ.27– ಶ್ರೀ ಭಕ್ತ ಕನಕದಾಸರ 535ನೇ ಜಯಂತೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಮೈಸೂರಿನ ಕಲಾಮಂದಿರದಲ್ಲಿ ನ 30 ರಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸಂತ ಶ್ರೇಷ್ಠ ಕನಕದಾಸರ ಪುತ್ಥಳಿಯನ್ನು ಬೆಳ್ಳಿ ರಥದೊಂದಿಗೆ ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಸುಬ್ರಮಣ್ಯ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಗದ್ಗುರು ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ, ಶಿವನಾಂದ ಪುರಿಸ್ವಾಮೀಜಿ ಹಾಗೂ ಸಮಾಜದ ಐಎಎಸ್, ಕೆಎಎಸ್ ಅಧಿಕಾರಿಗಳಿಗೆ ಮತ್ತು ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಂಡಿದ್ದು, ತಾಲೂಕಿನ ಎಲ್ಲಾ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ತಾಲೂಕು ಕುರುಬರ ಸಂಘದ ಅಧ್ಯಕ್ಷ ಚೀರ್ನಹಳ್ಳಿ ಶಿವಣ್ಣ, ಜಿಲ್ಲಾ ಕಾರ್ಯದರ್ಶಿ ಅಭಿಷೇಕ್, ಜಿಲ್ಲಾ ನಿರ್ದೇಶಕ ಗಂಧನಹಳ್ಳಿ ಹೇಮಂತ್, ತಾಲೂಕು ನಿರ್ದೇಶಕ ಶ್ರೀನಿವಾಸ್ ಇನ್ನಿತರರು ಹಾಜರಿದ್ದರು.

ತಿ.ನರಸೀಪುರದಲ್ಲಿ ಕನ್ನಡ ರಾಜ್ಯೋತ್ಸವ

ತಿ.ನರಸೀಪುರ, ನ.27– ನಾವು ಭಾಷೆ, ನೆಲ, ಜಲದ ಬಗ್ಗೆ ಸದಾ ಕಾಲ ಅಭಿಮಾನ ಹೊಂದಿದರೆ ಮಾತ್ರ ಕನ್ನಡನಾಡು, ನುಡಿಯನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಸಾಧ್ಯ ಎಂದು ತಾಲೂಕು ಕುರುಬರ ಸಂಘದ ಮಾಜಿ ಅಧ್ಯಕ್ಷ ಬಸವಣ್ಣ ಹೇಳಿದರು.



ಪಟ್ಟಣದ ಕಲ್ಲೆ ರಂಗಮನೆ ಬೀದಿಯ ಮುಂಭಾಗದಲ್ಲಿ ವೀರ ಸಂಗೊಳ್ಳಿ ರಾಯಣ್ಣ ಯುವಕರ ಬಳಗ ಹಾಗೂ ಕನಕ ಯುವ ಸೇನಾ ಸಮಿತಿಯ ಸಹಯೋಗದಲ್ಲಿ ನಡೆದ 67 ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಕನ್ನಡ ನಾಡಿನ ಸಾಹಿತ್ಯ ಪರಂಪರೆಯನ್ನು ನಮ್ಮ ಕನ್ನಡಿಗರು ಎತ್ತಿ ಹಿಡಿದಿದ್ದಾರೆ. ಕುವೆಂಪು ಅವರು ನೀಡಿರುವ ನಾಡಗೀತೆಯ ಮೂಲಕ ನಮ್ಮ ನಾಡಿನ ಹಿರಿಮೆಯನ್ನು ಪ್ರತಿಬಿಂಬಿಸಿ ಸಂದೇಶ ಸಾರಿದ್ದಾರೆ. ನಾಡಿನ ಸಾಹಿತ್ಯ ನಮ್ಮ ಹೆಮ್ಮೆ. ಕನ್ನಡಿಗರಾದ ನಾವು ನಮ್ಮ ಭಾಷೆಯ ಮೇಲೆ ಅಪಾರವಾದ ಅಭಿಮಾನವನ್ನು ಬೆಳೆಸಿಕೊಂಡು ಭಾಷೆಯನ್ನು ನಿರಂತರವಾಗಿ ಬಳಸಿದಾಗ ಮಾತ್ರ ಕನ್ನಡ ಬೆಳೆಯಲು ಸಾಧ್ಯ. ಕನ್ನಡ ನವೆಂಬರ್‌ಗೆ ಸೀಮಿತವಾಗದೆ ನಿರಂತರವಾಗಬೇಕು ಎಂದು ಅಭಿಪ್ರಾಯಪಟ್ಟರು

ತಾಲೂಕು ಕುರುಬರ ಸಂಘದ ನೂತನ ಅಧ್ಯಕ್ಷರ ಮಹಾದೇವಸ್ವಾಮಿ (ಮನ್ನೆಹುಂಡಿ) ಸನ್ಮಾನ ಸ್ವೀಕರಿಸಿ ಮಾತನಾಡಿ, ಶಿಕ್ಷಣದಿಂದಲೇ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯನ್ನು ಸಾಧಿಸಲು ಸಾಧ್ಯವಿರುವುದರಿಂದ ಹಿಂದುಳಿದ ವರ್ಗಗಳ ಸಮುದಾಯದ ಮಕ್ಕಳು ಕಡ್ಡಾಯವಾಗಿ ಶಿಕ್ಷಣವನ್ನು ಪಡೆದುಕೊಳ್ಳಬೇಕು ಎಂದು ಹೇಳಿದರು.

ಪುರಸಭಾ ಉಪಾಧ್ಯಕ್ಷೆ ನಾಗರತ್ನ ಮಾದೇಶ್, ಸದಸ್ಯರಾದ ನಂಜುಂಡಸ್ವಾಮಿ, ಪ್ರಕಾಶ್, ಕೆ ನಂಜುಂಡಸ್ವಾಮಿ, ಯಜಮಾನ್ ಮಹದೇವಸ್ವಾಮಿ, ರಾಜು, ತಾಲೂಕು ಕುರುಬರ ಸಂಘದ ನಿರ್ದೇಶಕ ವೆಂಕಟೇಶ್, ಮಹೇಶ್, ಕಾರ್ಯದರ್ಶಿ ಕೊತ್ತೆಗಾಲ ಬಸವರಾಜು, ಮುಖಂಡರಾದ ಗುರುಮಲ್ಲ, ಅನುಪ್ ಗೌಡ, ನಾಗರಾಜು, ತೇಜು ಮಹೇಶ್, ಭರತ್, ಸತೀಶ, ವಿನೋದ್, ಸಿದ್ದರಾಜು, ಮನು, ಸ್ವಾಮಿ ಮತ್ತಿತರರು ಹಾಜರಿದ್ದರು.

ಬೀಚನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಮಕ್ಕಳು ರಾಷ್ಟ್ರಮಟ್ಟಕ್ಕೆ ಆಯ್ಕೆ



ಹೆಚ್.ಡಿ.ಕೋಟೆ, ನ.27– ತುಮಕೂರು ಜಿಲ್ಲೆಯ ಹೊನ್ನುಡಿಕೆಯಲ್ಲಿ ಆಯೋಜಿಸಲ್ಪಟ್ಟಿದ್ದ ರಾಜ್ಯಮಟ್ಟದ ಪ್ರೌಢಶಾಲಾ ವಿಭಾಗದ 17 ವರ್ಷ ವಯೋಮಿತಿಯ ಬಾಲಕ, ಬಾಲಕಿಯರ, ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಕ್ರೀಡಾಕೂಟದಲ್ಲಿ ನಾಲ್ಕು ವಿಭಾಗಗಳಿಂದ ನಾಲ್ಕು ತಂಡಗಳು ಭಾಗವಹಿಸಿ ಲೀಗ್ ಪಂದ್ಯಗಳಲ್ಲಿ ತಮ್ಮ ಪ್ರದರ್ಶನವನ್ನು ನೀಡಿದ್ದಾರೆ. ಅದರಲ್ಲಿ ಮೈಸೂರು ವಿಭಾಗದಿಂದ ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲೂಕಿನ ಬೀಚನಹಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿಯರು ಮೈಸೂರು ವಿಭಾಗದಿಂದ ಸ್ಪರ್ಧಿಸಿ ಮೊದಲಿಗೆ ಬೆಳಗಾಂ ವಿಭಾಗದ ತಂಡವನ್ನು ಮಣಿಸಿ, ನಂತರ ಕಲಬುರ್ಗಿ ವಿಭಾಗದ ತಂಡದ ವಿರುದ್ಧ ಗೆಲುವು ಸಾಧಿಸಿ, ಅಂತಿಮವಾಗಿ ಬೆಂಗಳೂರು ವಿಭಾಗದ ತಂಡದ ಜೊತೆ ಸೆಣಸಿ, ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ ಪಡೆದು, ಮೈಸೂರು ವಿಭಾಗ ತಂಡದಿಂದ ಬೀಚನಹಳ್ಳಿ ಶಾಲೆ ಮಕ್ಕಳು ಸಂಪೂರ್ಣವಾಗಿ ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನವನ್ನು ನೀಡಿದ್ದು, ಪಂದ್ಯಾವಳಿಯಲ್ಲಿ ಭಾಗವಹಿಸಿದ ಐದು ಜನ ವಿದ್ಯಾರ್ಥಿನಿಯರು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

ಈ ಕ್ರೀಡಾಕೂಟದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ತಂಡದ ನಾಯಕಿ ವಿದ್ಯಾರ್ಥಿ ರಂಜಿತ ಕ್ರೀಡಾಕೂಟದ ಅತ್ಯುತ್ತಮ ಆಟಗಾರ್ತಿ ಎಂಬ ಪ್ರಶಸ್ತಿ ಗಿಟ್ಟಿಸಿಕೊಂಡಿದ್ದಾಳೆ.

ಈ ಸಂದರ್ಭದಲ್ಲಿ ತುಮಕೂರು ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಸತ್ಯನಾರಾಯಣಪ್ಪ, ಶಾಲಾ ದೈಹಿಕ ಶಿಕ್ಷಕ ರಮೇಶ್, ತಂಡದ ನಾಯಕಿ ರಂಜಿತ, ಲಾಂಛನ, ದಿವ್ಯಶ್ರೀ, ಸಿಂಚನ ಐಶ್ವರ್ಯ, ಸಾಜಿಯ ಸಪುರ, ಸಂಚನ ,ರಮ್ಯಾ ಹಾಜರಿದ್ದರು.

ಅರ್ಜಿ ಆಹ್ವಾನ

ಹುಣಸೂರು, ನ27– ನಗರದ ಕಾವೇರಿ ಆಸ್ಪತ್ರೆಯ 2ನೇ ವಾರ್ಷಿಕೋತ್ಸವದ ಅಂಗವಾಗಿ ಹುಣಸೂರು ತಾಲೂಕಿನ ವೈದ್ಯಕೀಯ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಕಾವೇರಿ ಆಸ್ಪತ್ರೆಯಿಂದ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಪುರಸ್ಕಾರಕ್ಕಾಗಿ ಅರ್ಜಿಗಳನ್ನು ನವೆಂಬರ್ 30 ಕೊನೇ ದಿನವಾಗಿದ್ದು, ನೋಂದಾವಣಿ ಮತ್ತು ಹೆಚ್ಚಿನ ಮಾಹಿತಿಗಾಗಿ ಸತೀಶ್ : 7411539677 ರವರನ್ನು ಸಂಪರ್ಕಿಸಬಹುದಾಗಿದೆ ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.



ಕಂಪಲಾಪುರ ಸಮೀಪದ ಬೋರೆಹೊಸಳ್ಳಿ ಗ್ರಾಮದಲ್ಲಿ ಕರ್ನಾಟಕ ಹೆಲ್ತ್ ಪ್ರಮೋಷನ್ ಟ್ರಸ್ಟ್ ವತಿಯಿಂದ ನರೇಗಾ ಕೂಲಿಕಾರ್ಮಿಕರು ಹಾಗೂ ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣೆ ಮಾಡಲಾಯಿತು. ಗ್ರಾಪಂ ಅಧ್ಯಕ್ಷೆ ಮಮತಾ ತಮ್ಮಯ್ಯ ಉಪಾಧ್ಯಕ್ಷ ರಾಮಲಿಂಗಂ, ಪಿಡಿಒ ಪರಮೇಶ್, ಕಾರ್ಯದರ್ಶಿ ಸುಷ್ಮಾ, ಸುಮಿತ್ರ, ಸದಸ್ಯರಾದ ರಾಣಿ, ಕವಿತ, ಸುಮ, ಗೌರಮ್ಮ, ಸಣ್ಣತಮ್ಮಯ್ಯ, ಮತ್ತಿತರರು ಹಾಜರಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರದಿಂದ ಗ್ರಾಮೀಣ ಜನರಿಗೆ ಅನುಕೂಲ

ತಾಲೂಕು ಆರೋಗ್ಯಾಧಿಕಾರಿ ಡಾ. ಟಿ.ರವಿಕುಮಾರ್



ಹಂಪಾಪುರ, ನ.27– ಉಚಿತ ಆರೋಗ್ಯ ತಪಾಸಣಾ ಶಿಬಿರಗಳು ಗ್ರಾಮಾಂತರ ಭಾಗದಲ್ಲಿ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲಕರವಾಗಿವೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ತಿಳಿಸಿದರು.

ಎಚ್.ಡಿ.ಕೋಟೆ ತಾಲೂಕಿನ ಚಿನ್ನಪ್ಪರಪಾಳ್ಯ ಗ್ರಾಮದ ಕಮಲನಿವಾಸ ಹೆಲ್ತ್ ಸೆಂಟರ್‌ನಲ್ಲಿ ಮೈಸೂರಿನ ನಯನಕುಮಾರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಎಚ್.ಡಿ.ಕೋಟೆಯ ಲಯನ್ಸ್ ಸಂಸ್ಥೆ ತಾಲೂಕು ಆರೋಗ್ಯ ಇಲಾಖೆ ಮತ್ತು ಸಾರ್ವಜನಿಕ ಆಸ್ಪತ್ರೆ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಬಳಿಕ ಮಾತನಾಡಿದ ಅವರು, ಶಿಬಿರಕ್ಕೆ ಉನ್ನತ ನುರಿತ ತಜ್ಞ ವೈದ್ಯರುಗಳು ಬಂದಿದ್ದಾರೆ. ಗ್ರಾಮಾಂತರ ಭಾಗದ ಜನರು ತಜ್ಞರನ್ನು ಕಾಣಲು ನಗರಗಳಿಗೆ ಹೋಗಿ ಬರಲು ಕಷ್ಟಕರ. ಅದನ್ನು ಮನಗಂಡ ಅನೇಕ ಆಸ್ಪತ್ರೆಗಳ ತಜ್ಞರು ಶಿಬಿರದ ಮೂಲಕ ನಿಮ್ಮ ಭಾಗಕ್ಕೆ ಆಗಮಿಸಿದ್ದಾರೆ. ಶಿಬಿರದಲ್ಲಿ ಉಚಿತ ಬಿ.ಪಿ, ಶುಗರ್ ತಪಾಸಣೆ ಜೊತೆಗೆ ವೈದ್ಯರ ಸಲಹೆ ಮೇರೆಗೆ ಉಚಿತ ಇಸಿಜಿ ತಪಾಸಣೆ, ಕೀಲು ಮತ್ತು ಮೂಳೆ ರೋಗ ತಪಾಸಣೆ ಸೇರಿದಂತೆ ಮಕ್ಕಳ ಆರೋಗ್ಯ ತಪಾಸಣೆಯನ್ನು ಸಹ ಮಾಡಲಾಗುವುದು. ಇಂತಹ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಸಂತವನ ಚಿನ್ನಪ್ಪರ ದೇವಾಲಯದ ಜಾಯ್, ಲಯನ್ ಸಂಸ್ಥೆ ಅಧ್ಯಕ್ಷ ಈರೇಗೌಡರು, ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಸೋಮಣ್ಣ, ನಯನಕುಮಾರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಪ್ರದೀಪ್ ಪ್ರಭು, ಲಯನ್ ಸಂಸ್ಥೆಯ ಸುರೇಂದ್ರಗೌಡ, ಬಸವರಾಜ್, ನಾರಾಯಣಗೌಡ, ನಾಗರಾಜ್, ಭಾಸ್ಕರ್, ನಾಗನಾಯಕ, ಆರೋಗ್ಯ ಇಲಾಖೆ ಸಿಬ್ಬಂದಿಗಳಾದ ರಾಮಚಂದ್ರನಾಯಕ್, ರವಿರಾಜ್, ಪ್ರತಾಪ್, ದ್ರುವ, ಪ್ರಮೋದ್, ನಾರಾಯಣ ಕುಮಾರ್, ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ತೇಜಸ್, ಶಾಲಿನಿ ಪ್ರಕಾಶ್, ಮಮತಾ, ಕಮಲ ನಿವಾಸ ಹೆಲ್ತ್ ಸೆಂಟರ್‌ನ ಮುಖ್ಯಸ್ಥ ಸೈರಿನ್ ಸೇರಿದಂತೆ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು, ಆಶಾ ಕಾರ್ಯಕರ್ತೆಯರು, ಸಾರ್ವಜನಿಕರು ಮುಂತಾದವರು ಹಾಜರಿದ್ದರು.



ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ ದೇವೇಗೌಡರ 73ನೇ ಹುಟ್ಟುಹಬ್ಬದ ಅಂಗವಾಗಿ ಮೈಸೂರು ತಾಲೂಕಿನ ದೊಡ್ಡಮಾರಗೌಡನಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ಎಪಿಎಂಸಿ ಮಾಜಿ ನಿರ್ದೇಶಕ ಕೋಟೆಹುಂಡಿ ಮಹದೇವು ನೇತೃತ್ವದಲ್ಲಿ ಜಿಟಿಡಿ ಅವರಿಗೆ ಸೇಬಿನ ಹಾರ ಹಾಕಿ, ಅಭಿನಂದಿಸಲಾಯಿತು. ಈ ವೇಳೆ ಗ್ರಾಪಂ ಸದಸ್ಯರು, ಮುಖಂಡರಿದ್ದರು.

ಇಂದು ನಂಜನಗೂಡಿಗೆ ಮುಖ್ಯಮಂತ್ರಿ

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ



ನಂಜನಗೂಡು, ನ.27– ನಂಜನಗೂಡು ತಾಲೂಕಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನ.28ರಂದು ಆಗಮಿಸುತ್ತಿದ್ದು, ವಿವಿಧ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ಅಂದು ಬೆಳಗ್ಗೆ 10.30ಕ್ಕೆ ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ದೇವಸ್ಥಾನಕ್ಕೆ ಸರ್ಕಾರದಿಂದ ಮಂಜೂರಾಗಿರುವ ವಿವಿಧ ಕಾಮಗಾರಿಗಳ ಗುದ್ದಲಿ ಪೂಜೆ, ನುಗು ಏತ ನೀರಾವರಿ ಯೋಜನೆಗೆ ಚಾಲನೆ ಹಾಗೂ ಯಡಿಯಾಲ ಭಾಗದ 13 ಕೆರೆಗಳಿಗೆ ನೀರು ತುಂಬಿಸುವ ಯೋಜನೆ, ಗೋಳೂರು (ಗೀಕಹಳ್ಳಿ) ಗ್ರಾಮದಲ್ಲಿ ನಿರ್ಮಾಣ ಮಾಡಲಾಗುತ್ತಿರುವ ವಿದ್ಯುತ್ ಉಪ ಕೇಂದ್ರಗಳ ಶಂಕುಸ್ಥಾಪನೆ, ನಗರೋತ್ಥಾನ ಹಂತ 4ರಲ್ಲಿ ನಂಜನಗೂಡು ನಗರಸಭಾ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ, ನಗರೋತ್ಥಾನ ಹಂತ–3ರಲ್ಲಿ ಗೌರಿಘಟ್ಟದ ಬೀದಿಯಲ್ಲಿರುವ ನಾಯಕ ಸಮುದಾಯ ಭವನ ಹಾಗೂ ತಾಲೂಕು ಮಟ್ಟದ ಶ್ರೀ ಮಹರ್ಷಿ ವಾಲ್ಮೀಕಿ ಸಮುದಾಯ ಭವನದ ಉದ್ಘಾಟನಾ ಸಮಾರಂಭ ನೆರವೇರಲಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶ್ರೀಕಂಠೇಶ್ವರ ದೇವಸ್ಥಾನದ ಆವರಣದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಈ ಎಲ್ಲಾ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ನಂಜನಗೂಡು ಕ್ಷೇತ್ರದ ಶಾಸಕ ಬಿ. ಹರ್ಷವರ್ಧನ್ ಅಧ್ಯಕ್ಷತೆ ವಹಿಸಲಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು.

ನಂ.ಗೂಡು ವಾಲ್ಮೀಕಿ ಭವನ ಉದ್ಘಾಟನೆಗೆ ಆಕ್ಷೇಪ



ನಂಜನಗೂಡು, ನ.27– ನಗರದ ಗೌರಿಘಟ್ಟದ ಬೀದಿಯ ನಾಯಕರ ಭವನದ ನಿವೇಶನ ತಾಲೂಕಿನ ನಾಯಕ ಸಮಾಜದ ಆಸ್ತಿಯಾಗಿದ್ದು, ನಾಯಕ ಸಮಾಜದ ಗಮನಕ್ಕೆ ತರದೇ ಈ ಭವನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಉದ್ಘಾಟಿಸುವುದನ್ನು ತಾಲೂಕು ನಾಯಕ ಸಮಾಜ ವಿರೋಧಿಸುತ್ತದೆ ಎಂದು ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಚ್.ಸಿ.ಬಸವರಾಜು ಹೇಳಿದರು.


ನಗರದ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿ ನಡೆಸಿ, ಮಾತನಾಡಿದ ಅವರು, ನಾಯಕರ ಭವನ ನಿರ್ಮಾಣಕ್ಕೆ ಕಳೆದ 19 ವರ್ಷಗಳಿಂದ ಹಲವು ಪಕ್ಷಗಳಿಗೆ ಸೇರಿದ ರಾಜಕಾರಣಿಗಳಿಂದ 1.54 ಕೋಟಿ ಅನುದಾನ ಬಳಸಿಕೊಳ್ಳಲಾಗಿದೆ, ಹೀಗಿರುವಾಗ ಶಾಸಕರು ತಾಲೂಕಿನ ನಾಯಕ ಸಮಾಜದ ಗಡಿ ಯಜಮಾನರುಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ನ.28ರಂದು ಮುಖ್ಯಮಂತ್ರಿಗಳ ಹಸ್ತದಿಂದ ಲೋಕಾರ್ಪಣೆಗೊಳಿಸುವ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ.

ಭವನ ನಿರ್ಮಾಣಕ್ಕೆ ಸಂಸದ ಶ್ರೀನಿವಾಸ ಪ್ರಸಾದ್ ಹಾಗೂ ಶಾಸಕ ಹರ್ಷವರ್ಧನ್ ಅನುದಾನ ನೀಡಿರುವುದನ್ನು ಸ್ವಾಗತಿಸುತ್ತೇವೆ, ಆದರೆ ಕಾರ್ಯಕ್ರಮಕ್ಕೆ ನಾಯಕ ಸಮಾಜದ ಮುಖಂಡರುಗಳಿಗೆ ಆಹ್ವಾನ ನೀಡದೆ ತಾತ್ಸಾರ ತೋರಲಾಗಿದೆ. ಅದ್ದರಿಂದ ನ.28 ರಂದು ಗೌರಿಘಟ್ಟದ ಬೀದಿಯ ವಾಲ್ಮೀಕಿ ಭವನವನ್ನು ಲೋಕಾರ್ಪಣೆಗೊಳಿಸುವ ಕಾರ್ಯಕ್ರಮವನ್ನು ಮುಂದೂಡಬೇಕು. ನಮ್ಮ ತಾಲೂಕು ನಾಯಕರ ಸಂಘದಿಂದ ಕಾರ್ಯಕ್ರಮ ಆಯೋಜಿಸಿ, ಸಂಸದರು ಹಾಗೂ ಶಾಸಕರ ಸಮ್ಮುಖದಲ್ಲಿ ಲೋಕಾರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು. ಆದ್ದರಿಂದ ನಾಯಕರ ಭವನ ಲೋಕಾರ್ಪಣೆ ಕಾರ್ಯಕ್ರಮವನ್ನು ರದ್ದುಗೊಳಿಸಬೇಕು ಅಲ್ಲದೆ ಬೈಪಾಸ್ ರಸ್ತೆಯಲ್ಲಿ 3.5 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ವಾಲ್ಮೀಕಿ ಭವನದ ಕಾಮಗಾರಿ ಪೂರ್ಣಗೊಳ್ಳದೆ ಇದ್ದರೂ ಸಹ ಉದ್ಘಾಟನೆಗೆ ಮುಂದಾಗಿದ್ದಾರೆ. ಈ ಭವನಕ್ಕೆ 2 ಕೋಟಿ ಹೆಚ್ಚುವರಿ ಅನುದಾನ ನೀಡಿರುವುದು ಸಿದ್ದರಾಮಯ್ಯನವರು. ಅವರನ್ನು ಆಹ್ವಾನಿಸದೆ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ರವರನ್ನು ಆಹ್ವಾನಿಸುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಹೆಡತಲೆ ನಾಗರಾಜು, ದೊರೆಸ್ವಾಮಿ ನಾಯಕ, ಕಳಲೆಮಹೇಶ್, ಹುಲ್ಲಹಳ್ಳಿ ಶಿವನಂಜನಾಯ್ಕ, ನಗರಸಭೆ ಸದಸ್ಯೆ ಗಾಯಿತ್ರಿ ಮೋಹನ್ ಉಪಸ್ಥಿತರಿದ್ದರು.

ವಾಲ್ಮೀಕಿ ಭವನ ಪೂರ್ಣಗೊಳಿಸಿದ್ದು ಶಾಸಕ ಹರ್ಷವರ್ಧನ್: ಚಿಕ್ಕರಂಗನಾಯಕ

ನಂಜನಗೂಡು, ನ.27– ಕಳೆದ 19 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಗೌರಿಘಟ್ಟದ ಬೀದಿಯ ನಾಯಕರ ಭವನವನ್ನು 36 ಲಕ್ಷ ಅನುದಾನ ನೀಡಿ ಪೂರ್ಣಗೊಳಿಸಿದ್ದು ಶಾಸಕ ಹರ್ಷವರ್ಧನ್. ಹೀಗಾಗಿ ಸಮಾಜದ ಅನುಕೂಲಕ್ಕಾಗಿ ಮುಖ್ಯಮಂತ್ರಿಗಳು ಲೋಕಾರ್ಪಣೆಗೊಳಿಸುತ್ತಿರುವ ಕಾರ್ಯಕ್ರಮಕ್ಕೆ ಆಕ್ಷೇಪ ಸಲ್ಲ ಎಂದು ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ ತಿಳಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. 1.54 ಕೋಟಿ ವೆಚ್ಚದಲ್ಲಿ ವಿವಿಧ ರಾಜಕೀಯ ಮುಖಂಡರುಗಳು ನೀಡಿದ ಅನುದಾನವನ್ನು ಬಳಸಿಕೊಂಡು ವಾಲ್ಮೀಕಿ ಭವನ ನಿರ್ಮಿಸಲಾಗಿದೆ, ಸಂಸದ ಶ್ರೀನಿವಾಸ ಪ್ರಸಾದ್ ಅವರು ಭವನ ನಿರ್ಮಾಣಕ್ಕೆ ಹೆಚ್ಚಿನ ಆಸ್ಥೆ ವಹಿಸಿ ನಿರ್ಮಾಣಕ್ಕೆ ಸಹಕಾರ ನೀಡಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ನ.28 ರಂದು ಭವನವನ್ನು ಲೋಕಾರ್ಪಣೆಗೊಳಿಸಲಿದ್ದು, ಬಿಜೆಪಿ ಸರ್ಕಾರದ ಅವಧಿಯಲ್ಲಿ ಭವನ ಉದ್ಘಾಟನೆಯಾಗುತ್ತಿರುವುದನ್ನು ಸಹಿಸದ ಕೆಲವರು, ಕ್ಷುಲ್ಲಕ ನೆಪ ಒಡ್ಡಿ, ವಿರೋಧಿ ಹೇಳಿಕೆ ನೀಡಿ, ರಾಜಕೀಯ ಕಾರಣಗಳಿಗಾಗಿ ಅಡ್ಡಿಪಡಿಸುತ್ತಿದ್ದಾರೆ. ಭವನ ಲೋಕಾರ್ಪಣೆಗೊಳಿಸುವುದನ್ನು ನಾಯಕ ಸಮಾಜ ಸ್ವಾಗತಿಸುತ್ತದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ನಾಯಕ ಸಮಾಜದ ಮುಖಂಡರಾದ ಹುಲ್ಲಹಳ್ಳಿ ಶಿವಣ್ಣ, ನಾಗರಾಜು, ಬಿಜೆಪಿ ಮುಖಂಡ ಸಿದ್ದರಾಜು ಉಪಸ್ಥಿತರಿದ್ದರು.

ಫಿಫಾ ವಿಶ್ವಕಪ್: ಜಪಾನ್ ವಿರುದ್ಧ ಗೆದ್ದು ಬೀಗಿದ ಕೋಸ್ಟರಿಕಾ



ಅಲ್‌ರಂಯ್ಯಾನ್(ಕತಾರ್): ಯುರೋಪಿಯನ್ ಬಲಿಷ್ಠ ತಂಡವಾದ ಜರ್ಮನಿಯನ್ನು ಸೋಲಿಸಿದ್ದ ಏಷ್ಯಾ ಉಪಖಂಡದ ಜಪಾನ್, ಕೋಸ್ಟರಿಕಾ ವಿರುದ್ಧ ಸೋಲು ಕಂಡಿತು. ಕಳೆದ ಪಂದ್ಯವನ್ನು ಸೋತಿದ್ದ ಕೋಸ್ಟರಿಕಾ ಇಂದು 1–0 ಗೋಲಿನಿಂದ ಜಪಾನ್ ಮಣಿಸಿ ಗ್ರೂಪ್ ಇ ಪಟ್ಟಿಯಲ್ಲಿ 3 ಅಂಕ ಪಡೆದುಕೊಂಡಿತು.

ರೋಚಕ ಪಂದ್ಯದಲ್ಲಿ ಕೊನೆಯವರೆಗೂ ಗೋಲು ಗಳಿಸಲು ಉಭಯ ತಂಡಗಳು ಭಾರಿ ಸಾಹಸ ಮಾಡಿದವು. ಪಂದ್ಯ ಮುಗಿಯಲು 9 ನಿಮಿಷ ಬಾಕಿ ಇರುವಾಗ (81ನೇ ನಿಮಿಷ) ಕೋಸ್ಟರಿಕಾ ತಂಡದ ಕೀಷರ್ ಫುಲ್ಲರ್ ಗೋಲು ಬಾರಿಸಿ ಕ್ರೀಡಾಂಗಣದ ತುಂಬೆಲ್ಲಾ ಮೆರೆದಾಡಿದರು. ಜಪಾನ್‌ನ ಗೋಲ್‌ಕೀಪರ್ ಶುಚಿ ಗೊಂಡಾರ ತಡೆಗೋಡೆಯನ್ನು 18 ಮೀಟರ್ ದೂರದಿಂದಲೇ ಬೇಧಿಸಿದ ಕೀಷರ್ ಚೆಂಡನ್ನು ಗುರಿ ಮುಟ್ಟಿಸಿದರು.

ಅಹ್ಮದ್ ಬಿನ್ ಅಲಿ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಗೋಲು ಗಳಿಸಿ ಗೆಲುವು ಸಾಧಿಸಿದಾಗ್ಯೂ ಕೋಸ್ಟರಿಕಾ ಮತ್ತು ಜಪಾನ್ ತಂತ್ರಗಾರಿಕೆ ಮೆರೆಯುವಲ್ಲಿ ವಿಫಲವಾದವು. ಚೆಂಡಿನ ಮೇಲೆ ಹಿಡಿತ ಸಾಧಿಸುವಲ್ಲಿ ಉಭಯ ಆಟಗಾರರು ಚಾಕಚಕ್ಯತೆ ಮೆರೆಯಲಿಲ್ಲ. ಮೊದಲಾರ್ಧದಲ್ಲಿ ಚೆಂಡನ್ನು ಗೋಲಿನ ಬಲೆಗೆ ಸೇರಿಸುವ ಯತ್ನದಲ್ಲಿ ಎರಡೂ ತಂಡಗಳ ಆಟಗಾರರು ವೈಫಲ್ಯ ಕಂಡರು.

ಜಪಾನ್ ತಂಡ ದ್ವಿತೀಯಾರ್ಧದಲ್ಲಿ ಸ್ವಲ್ಪ ಚುರುಕಿನ ಆಟ ಪ್ರದರ್ಶಿಸಿತು. ಹಲವು ಬಾರಿ ಗೋಲು ಗಳಿಸುವ ಯತ್ನ ನಡೆಸಿತು. ಆದರೆ, ಕೋಸ್ಟರಿಕಾ ಕೀಪರ್ ಕೀಲರ್ ನವಾಸ್ ಭದ್ರ ತಡೆಗೋಡೆ ನಿರ್ಮಿಸಿ ಜಪಾನ್‌ಗೆ ನಿರಾಸೆ ಮೂಡಿಸಿದರು. ಮುಂದಿನ ಪಂದ್ಯದಲ್ಲಿ ಜಪಾನ್ ಬಲಿಷ್ಠ ಹಾಲಿ ಚಾಂಪಿಯನ್ ಸ್ಪೇನ್‌ನೊಂದಿಗೆ ಸೆಣಸಾಡಿದರೆ, ಗೆಲುವಿನ ಅಲೆಯಲ್ಲಿರುವ ಕೋಸ್ಟರಿಕಾ ಜರ್ಮನಿಯನ್ನು ಎದುರಿಸಲಿದೆ. ಜಪಾನ್ ತನ್ನ ಮೊದಲ ಪಂದ್ಯದಲ್ಲಿ ಜರ್ಮನಿಯನ್ನು 2–1ರಿಂದ ಸೋಲಿಸಿತ್ತು. ಸ್ಪೇನ್ ವಿರುದ್ಧ ಕಾದಾಡಿದ್ದ ಕೋಸ್ಟರಿಕಾ 7–0 ಗೋಲುಗಳಿಂದ ಹೀನಾಯವಾಗಿ ಸೋಲು ಕಂಡಿತ್ತು.

ಫುಟ್‌ಓವರ್ ಸೇತುವೆ ಕುಸಿತ: 60 ಅಡಿ ಎತ್ತರದಿಂದ ಬಿದ್ದ 20 ಮಂದಿಗೆ ಗಂಭೀರ ಗಾಯ



ಮುಂಬೈ: ಪಾದಚಾರಿಗಳ ಮೇಲ್ಸೇತುವೆ ಕುಸಿದು, 20ಕ್ಕೂ ಹೆಚ್ಚು ಜನರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಭಾನುವಾರ ಮಹಾರಾಷ್ಟ್ರದ ಚಂದ್ರಾಪುರ ಬಲ್ಲಾರಶಾ ರೈಲ್ವೇ ನಿಲ್ದಾಣದಲ್ಲಿ ನಡೆದಿದೆ. ಸುಮಾರು 60 ಅಡಿ ಎತ್ತರದ ಫುಟ್‌ಓವರ್ ಸೇತುವೆಯ ಒಂದು ಭಾಗ ಕುಸಿದು ಬಿದ್ದಿದ್ದು, ಹಲವು ಪ್ರಯಾಣಿಕರು ಸೇತುವೆಯಿಂದ ರೈಲ್ವೇ ಹಳಿ ಮೇಲೆ ಬಿದ್ದಿದ್ದಾರೆ. ಘಟನೆಯಿಂದ 20ಕ್ಕೂ ಹೆಚ್ಚು ಜನರಿಗೆ ಗಂಭೀರವಾದ ಗಾಯಗಳಾಗಿವೆ. ಗಾಯಾಳುಗಳನ್ನು ತಕ್ಷಣವೇ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿದೆ. ಗಾಯಾಳುಗಳಲ್ಲಿ 8 ಜನರ ಸ್ಥಿತಿ ಚಿಂತಾಜನಕವಾಗಿದೆ ಎಂದು ಮೂಲಗಳು ತಿಳಿಸಿವೆ.



